ಸಂಪುಟ: 04 ಸಂಚಿಕೆ: 260 ಪುಟಗಳು: 08 ಮಂಗಳವಾರ 03 ಡಿಸೆಂಬರ್ 2024 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

ಮುಂಜಾನೆ ಮಾತು

ಅದೃಷ್ಟ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

■ ಬಿಜೆಪಿ ಬಣ ಜಗಳ, ಹೈಕಮಾಂಡ್ ಬಿಗ್ ಶಾಕ್! ■ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಶೋಕಾಸ್ ನೋಟಿಸ್ ಜಾರಿ ■ ಯತ್ನಾಳ್ ನಡೆ ಬಗ್ಗೆ ಕೇಂದ್ರದ ಶಿಸ್ತು ಸಮಿತಿ ಬೇಸರ

ಕೆಂಗಣ್ಣಿಗೆ ಗುರಿ ಯತ್ನಾಳಗೆ ನೋಟಿಸ್ ಜಾರಿ



- ಉದಯವಾಹಿನಿ, ಬೆಂಗಳೂರು

ರಾಜ್ಯ ಬಿಜೆಪಿಯಲ್ಲಿ ಬಂಡಾಯ ಚಟುವಟಿಕೆಗಳನ್ನು ನಡೆಸುತ್ತಿದ್ದ ಆರೋಪಗಳ ಹಿನ್ನೆಲೆ ಪಕ್ಷದ ಹಿರಿಯ ಮುಖಂಡ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರಿಗೆ ಬಿಜೆಪಿ ರಾಷ್ಟ್ರೀಯ ಶಿಸ್ತು ಸಮಿತಿ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಬಿಜೆಪಿ ಪಕ್ಷದ ಅನುಮತಿಯಿಲ್ಲದೇ ವಕ್ಫ್ ಭೂ ಅಕ್ರಮಗಳ ವಿರುದ್ಧ ರಾಜ್ಯದಲ್ಲಿ ಜಾಗೃತಿ ಅಭಿಯಾನ ನಡೆಸುತ್ತಿರುವ ಯತ್ನಾಳ ಪಕ್ಷದ ಮುಖಂಡರ ಕೆಂಗಣ್ಣಿಗೆ ಗುರಿಯಾಗಿದ್ದರು. ಅಭಿಯಾನದ ವೇಳೆ ಯತ್ನಾಳ್ ಅವರು ರಾಜ್ಯ ಬಿಜೆಪಿ ಅಧ್ಯಕ್ಷರ ವಿರುದ್ಧ ಮತ್ತು ಮಾಜಿ ಸಿಎಂ ಯಡಿಯೂರಪ್ಪ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡುತ್ತಿರುವುದು ಪಕ್ಷಕ್ಕೆ ಮುಜುಗರದ ಸನ್ನಿವೇಶ ಉಂಟು ಮಾಡಿತ್ತು. ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಇತ್ತೀಚೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿದ್ದರು. ಈ ಬೆಳವಣಿಗೆಯ ಬೆನ್ನಲ್ಲೇ ಬಿಜೆಪಿ ರಾಷ್ಟ್ರೀಯ ಶಿಸ್ತು ಸಮಿತಿಯು ಶಾಸಕ ಬಸನಗೌಡ ಯತ್ನಾಳ್‌ಗೆ ಶೋಕಾಸ್ ನೋಟಿಸ್ ನೀಡಿ ಹತ್ತು ದಿನಗಳ ಒಳಗೆ ಉತ್ತರ ನೀಡುವಂತೆ ಸೂಚಿಸಿದೆ.

'ಪಕ್ಷದ ಹಿರಿಯ ಮುಖಂಡರಾದ ನೀವು ಬಿಜೆಪಿಯ ರಾಜ್ಯ ನಾಯಕತ್ವದ ವಿರುದ್ಧ ನೀಡುತ್ತಿರುವ ಹೇಳಿಕೆಗಳು ಆಕ್ಷೇಪಾರ್ಹವಾಗಿವೆ. ಈ ಹಿಂದೆ ನೀಡಿದ್ದ ಭರವಸೆಗಳನ್ನ ಮೀರಿ ಮತ್ತೆ ಬಿಜೆಪಿ ನಾಯಕತ್ವ ಟೀಕಿಸುತ್ತಿರುವುದು ಶಿಸ್ತು ಉಲ್ಲಂಘನೆಗೆ ಕಾರಣವಾಗುತ್ತಿದೆ. ನಿಮ್ಮ ಮೇಲೆ ಏಕೆ ಶಿಸ್ತು ಕ್ರಮ ಜರುಗಿಸಬಾರದು' ಎಂದು ಯತ್ನಾಳ್‌ಗೆ ನೀಡಲಾದ ಶೋಕಾಸ್ ನೋಟಿಸ್‌ನಲ್ಲಿ ಬಿಜೆಪಿ ರಾಷ್ಟ್ರೀಯ ಶಿಸ್ತು ಸಮಿತಿ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಕೇಳಿದ್ದಾರೆ.

ನೋಟಿಸ್‌ನಲ್ಲೇನಿದೆ.. 'ಪಕ್ಷದ ರಾಜ್ಯ ನಾಯಕತ್ವದ ವಿರುದ್ಧದ ಸಾರ್ವಜನಿಕ ಹೇಳಿಕೆಗಳು ಮತ್ತು ಪಕ್ಷದ ನಿರ್ದೇಶನಗಳನ್ನು ಉಲ್ಲಂಘಿಸುತ್ತಿರುವ ಬಗ್ಗೆ ಪಕ್ಷದ ವಿವಿಧ ವೇದಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಹಿಂದೆ ಕೂಡ ಹಲವು ಬಾರಿ ಶೋಕಾಸ್ ನೋಟಿಸ್ ನೀಡಲಾಗಿತ್ತು. ಆಗ ನೀವು ಶಿಸ್ತು ಪಾಲಿಸುವುದಾಗಿ ಭರವಸೆ ನೀಡಿದರೂ ಈಗ ಅಶಿಸ್ತು ಮುಂದುವರಿದಿರುವುದು ಕಳವಳಕಾರಿಯಾಗಿದೆ. ನಿಮ್ಮ ಹಿರಿತನ ಮತ್ತು ಪಕ್ಷದ ಜೊತೆ ದೀರ್ಘಕಾಲ ನಿಂತಿರುವುದನ್ನು ಗಮನದಲ್ಲಿಟ್ಟುಕೊಂಡು ನೀವು ಹಿಂದೆ ಸಲ್ಲಿಸಿದ ವಿವರಣೆಯ ಬಗ್ಗೆ ಕೇಂದ್ರ ಶಿಸ್ತು ಸಮಿತಿ ಮೃದುವಾದ ಧೋರಣೆ ತೆಗೆದುಕೊಂಡಿತ್ತು. ಪಕ್ಷದ ನಾಯಕರ ಬಗ್ಗೆ ಸುಳ್ಳು ಮತ್ತು ಆಧಾರರಹಿತ ಆರೋಪಗಳನ್ನು ಸಾರ್ವಜನಿಕವಾಗಿ ಮಾಡುತ್ತಿರುವುದು ಪಕ್ಷದ ನಿಯಮಗಳನ್ನು ಉಲ್ಲಂಘಿಸಿದಂತಾಗುತ್ತದೆ. ನಿಮ್ಮ ವಿರುದ್ಧ ಯಾಕೆ ಕ್ರಮ ಕೈಗೊಳ್ಳಬಾರದು ಎಂಬುದಕ್ಕೆ 10 ದಿನದೊಳಗೆ ವಿವರಣೆ ಸಲ್ಲಿಸುವಂತೆ' ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ನೋಟಿಸ್‌ಗೆ ಯತ್ನಾಳ್ ಪ್ರತಿಕ್ರಿಯೆ

ಈ ನೋಟಿಸ್‌ಗೆ ನಾನು ಉತ್ತರಿಸುತ್ತೇನೆ. ಜೊತೆಗೆ ರಾಜ್ಯ ಬಿಜೆಪಿಯಲ್ಲಿನ ಸದ್ಯದ ಪರಿಸ್ಥಿತಿಯ ಬಗ್ಗೆ ಕೂಡ ವಿವರಿಸುತ್ತೇನೆ. ಹಿಂದುತ್ವ, ಭ್ರಷ್ಟಾಚಾರ, ವಕ್ಫ್ ವಿಚಾರ, ಕುಟುಂಬ ರಾಜಕಾರಣದ ಬಗೆಗಿನ ನನ್ನ ಹೋರಾಟ ಮುಂದುವರಿಯುತ್ತದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಪ್ರತಿಕ್ರಿಯೆ ನೀಡಿದ್ದಾರೆ.

1 ಬಿಜೆಪಿ ರಾಜ್ಯ ನಾಯಕತ್ವದ ವಿರುದ್ಧ ಬಂಡಾಯ ಎದ್ದಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗೆ ಈಗಾಗಲೇ ಶಿಸ್ತು ಸಮಿತಿ ನೋಟಿಸ್ ನೀಡಿದೆ

2 ಶಿಸ್ತು ಸಮಿತಿ ನೋಟಿಸ್ ಹಿನ್ನೆಲೆಯಲ್ಲಿ ಯತ್ನಾಳ್ ಮುಂದಿನ ನಡೆ ಏನು ಎಂಬುವುದು ಕುತೂಹಲಕ್ಕೆ ಕಾರಣವಾಗಿದೆ

3 ನೋಟಿಸ್‌ಗೆ ಉತ್ತರ ಕೊಡುವುದಾಗಿ ಯತ್ನಾಳ್ ಹೇಳಿದ್ದಾರೆ. ಪಕ್ಷದ ವಾಸ್ತವಾಂಶ ಬಹಿರಂಪಡಿಸುವುದಾಗಿ ಹೇಳಿದ್ದಾರೆ.

ಮುಂದಿನ ನಡೆ ಏನು



ಅನುಮಾನ ತೋರಿದ್ದ ಹೈಕಮಾಂಡ್ ನಡೆ!

ಬಿಜೆಪಿ ರಾಜ್ಯ ನಾಯಕತ್ವದ ವಿರುದ್ಧ ಯತ್ನಾಳ್ ನಿರಂತವಾಗಿ ಹೇಳಿಕೆಗಳನ್ನು ನೀಡುತ್ತಿದ್ದರೂ ಹೈಕಮಾಂಡ್ ಸೈಲೆಂಟಾಗಿತ್ತು. ಬಿಜೆಪಿ ವಿಜಯೇಂದ್ರ ಬಣ ಹೈಕಮಾಂಡ್ ಕ್ರಮಕ್ಕೆ ನಿರಂತವಾಗಿ ಆಗ್ರಹಿಸುತ್ತಾ ಬಂದಿತ್ತು. ಹಾಗಿದ್ದರೂ, ಯಾವುದೇ ಕ್ರಮ ಆಗಿರಲಿಲ್ಲ. ಆದರೆ ಇದೀಗ ಭಿನ್ನಮತ ತೀವ್ರಗೊಳ್ಳುತ್ತಿದ್ದ ಹಿನ್ನೆಲೆಯಲ್ಲಿ ನೋಟಿಸ್ ನೀಡಿದೆ

ಕೇಂದ್ರ ಮಟ್ಟದಲ್ಲಿ ಬೆಂಬಲ ಗಳಿಸೋ ಪ್ರಯತ್ನ

ಈಗಾಗಲೇ ಯತ್ನಾಳ್ ತಂಡ 10 ರ ಗಡಿ ದಾಟಿದೆ. ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾಬಳಿ, ಪ್ರತಾಪ ಸಿಂಹ, ರಮೇಶ್ ಜಿಗಜಿಣಗಿ, ಕುಮಾರ್ ಬಂಗಾರಪ್ಪ ಸೇರಿದಂತೆ ಹಲವರು ಸೇರಿಕೊಂಡಿದ್ದಾರೆ. ಇನ್ನು ಕೇಂದ್ರದ ಕೆಲವು ನಾಯಕರ ಬೆಂಬಲವನ್ನು ಪಡೆದುಕೊಳ್ಳಲು ಈ ತಂಡ ಪ್ರಯತ್ನ ನಡೆಸುತ್ತಿದೆ. ಒಂದು ವೇಳೆ ಕೇಂದ್ರ ತಂಡ ಬೆನ್ನಿಗೆ ನಿಂತದಲ್ಲಿ ಯಾವುದೇ ಕ್ರಮ ಆಗುವ ಸಾಧ್ಯತೆ ಕಡಿಮೆ ಎನ್ನಲಾಗುತ್ತಿದೆ.

ಶಿಸ್ತಿನ ಉಲ್ಲಂಘನೆ

ರಾಜಕೀಯ ಮತ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳಲ್ಲಿ ಪಕ್ಷದ ಅಧಿಕೃತ ನಿಲುವನ್ನು ಧಿಕ್ಕರಿಸಿ. ಪಕ್ಷದ ನಾಯಕರ ವಿರುದ್ಧ ನೀವು ಮಾಡಿದ ಸುಳ್ಳು, ತಥಾಕಥಿತ ಆರೋಪಗಳು, ಬಿಜೆಪಿ ಪಕ್ಷದ ನಿಯಮಗಳ 25ನೇ ವಿಧಿಯಲ್ಲಿ ವ್ಯಾಖ್ಯಾನಿಸಿದಂತೆ ಪಕ್ಷದ ಶಿಸ್ತಿನ ಗಂಭೀರ ಉಲ್ಲಂಘನೆಯಾಗಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ. ನಿಯಮ ಉಲ್ಲಂಘಿಸಿದ್ದಕ್ಕಾಗಿ ನಿಮ್ಮ ವಿರುದ್ಧ ಪಕ್ಷವು ಏಕೆ ಶಿಸ್ತು ಕ್ರಮ ತೆಗೆದುಕೊಳ್ಳಬಾರದು ಎಂಬುದಕ್ಕೆ ದಯವಿಟ್ಟು ಕಾರಣ ತೋರಿಸಿ. ಈ ಸೂಚನೆಯ ಸ್ವೀಕೃತಿಯಿಂದ ಹತ್ತು ದಿನಗಳಲ್ಲಿ ವಿವರಣೆಯನ್ನು ಸದಸ್ಯ ಕಾರ್ಯದರ್ಶಿ, ಬಿಜೆಪಿ ಕೇಂದ್ರ ಶಿಸ್ತು ಸಮಿತಿಗೆ ಸಲ್ಲಿಸಬೇಕು. ನಿಗದಿತ ಗಡುವಿನೊಳಗೆ ಸಮಜಾಯಿಷಿ ನೀಡದಿದ್ದರೆ ಹೇಳುವುದು ಏನೂ ಇಲ್ಲವೆಂದು ಪರಿಗಣಿಸಿ ಮುಂದಿನ ಕ್ರಮವಹಿಸಬೇಕಾಗುತ್ತದೆ ಎಂದು ಶೋಕಾಸ್ ನೋಟಿಸ್ ನಲ್ಲಿ ಎಚ್ಚರಿಸಲಾಗಿದೆ.

ಬಂದಿರುವ ನೋಟಿಸ್ ಡೂಪ್ಲಿಕೇಟ್ ವಿಜಯೇಂದ್ರನದ್ದೇ ಇದೆಲ್ಲ ಕೆಲಸ

- ಉದಯವಾಹಿನಿ, ನವದೆಹಲಿ

ರಾಜ್ಯಾಧ್ಯಕ್ಷರ ನಾಯಕತ್ವದ ವಿರುದ್ಧ ನಿಲುವು ತೋರಿದ್ದರೆ ಹಿನ್ನೆಲೆಯಲ್ಲಿ, ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಕೇಂದ್ರ ಬಿಜೆಪಿ ಶಿಸ್ತು ಸಮಿತಿಯು ಕಾರಣ ನೀಡುವಂತೆ ನೋಟಿಸ್ ನೀಡಿದೆ. ಈ ವಿಚಾರವಾಗಿ ಶಾಸಕ ಯತ್ನಾಳ್ ನನಗೆ ಬಿಜೆಪಿಯಿಂದ ಅಧಿಕೃತವಾಗಿ ಯಾವುದೇ ನೋಟಿಸ್ ಬಂದಿಲ್ಲ, ವಾಟ್ಸಾಪ್ನಲ್ಲಿ ಬಂದಿರುವಂತಹ ನೋಟಿಸ್ ಅನ್ನು ಅವರೆ ಕಳಿಸಿದ್ದಾರೆ ಎಂದು ಹೇಗೆ ನಂಬಲಿ? ನನಗೆ ಬಂದಿರುವಂತಹ ನೋಟೀಸ್ ಡುಬ್ಲಿಕೇಟ್ ಆಗಿದ್ದು, ಇದೆಲ್ಲ ವಿಜಯೇಂದ್ರನದ್ದೇ ಕೆಲಸ ಎಂದು ಸ್ಫೋಟಕ ಹೇಳಿಕೆ ನೀಡಿದರು. ನವದೆಹಲಿಯಲ್ಲಿ ಮಾತನಾಡಿರುವ ಅವರು, ನನಗೆ ಇಲ್ಲಿಯವರೆಗೆ ಮೂರು ಸಲ ನೋಟಿಸ್ ಕೊಟ್ಟಿದ್ದಾರೆ. ಎರಡು ಸಲ ಉತ್ತರ ಕೊಟ್ಟಿದ್ದೇನೆ. ಇದೀಗ ಮೂರನೇ ಬಾರಿ ಬಂದಿರುವಂತ ನೋಟಿಸ್ ಡುಬ್ಲಿಕೇಟ್ ಇದೆ ಅಂತ ಅನಿಸುತ್ತಿದೆ. ಆವಾಗ ನಾನು ಉತ್ತರನೇ ಕೊಡಲಿಲ್ಲ, ನನಗೆ ಗೊತ್ತಾಯ್ತು ಇದು ವಿಜಯೇಂದ್ರ ಮಾಡಿಸಿರುವ ಕೆಲಸ ಇರಬಹುದು ಅಂತ ಅನಿಸಿದೆ ಎಂದು ವಾಗ್ದಾಳಿ ನಡೆಸಿದರು.

ಇಡಿಯಿಂದ ನನಗೆ ಯಾವುದೇ ನೋಟಿಸ್ ಬಂದಿಲ್ಲ: ಸಚಿವ

- ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿದೆ. ಎನ್ನಲಾದಂತ ಅಕ್ರಮದ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯದಿಂದ ನನಗೆ ಯಾವುದೇ ನೋಟಿಸ್ ಬಂದಿಲ್ಲ ಎಂಬುದಾಗಿ ಸಚಿವ ಭೈರತಿ ಸುರೇಶ್ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದಂತ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು, ನನಗೆ ಇದುವರೆಗೆ ಇಡಿಯಿಂದ ಯಾವುದೇ ನೋಟಿಸ್ ಬಂದಿಲ್ಲ. ಮುಡಾ ಹಗರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿಲ್ಲ ಎಂಬುದಾಗಿ ತಿಳಿಸಿದರು. ಮತ್ತೊಂದೆಡೆ ಮುಡಾ ಅಕ್ರಮ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೆ ಇಡಿ ನೋಟಿಸ್ ನೀಡಿದೆ. ಅದರಲ್ಲಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿರುವುದಾಗಿ ತಿಳಿದು ಬಂದಿದೆ. ಕೊಳ್ಳಿ ಎಂದು ತಿಳಿಸಿದರು.

ಶೀಘ್ರದಲ್ಲೇ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಭೆ

- ಉದಯವಾಹಿನಿ, ಬೆಂಗಳೂರು

ಸುಮಾರು 40 ಸಾವಿರ ಜಲಮೂಲಗಳ ವ್ಯಾಪ್ತಿಯನ್ನು ಹೊಂದಿರುವ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಭೆಯನ್ನು ಶೀಘ್ರದಲ್ಲೇ ಸಿಎಂ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಈ ಹಿನ್ನಲೆಯಲ್ಲಿ ವಿಧಾನಸೌಧದಲ್ಲಿ ಮುಖ್ಯ ಕಾರ್ಯದರ್ಶಿಗಳು ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ಜಲಮೂಲಗಳ ಸಂರಕ್ಷಣೆ ಹಾಗೂ ಆದಾಯ ವೃದ್ಧಿಗೆ ಇಲಾಖವಾರು ಸಮನ್ವಯಕ್ಕೆ ಸೂಚನೆ ನೀಡಲಾಗಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್ ಎಸ್ ಭೋಸರಾಜು ತಿಳಿಸಿದರು. ಇಂದು ವಿಧಾನಸೌಧದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಭೋಸರಾಜು ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್ ಸೇರಿದಂತೆ ಪ್ರಮುಖ ಅಧಿಕಾರಿಗಳು ಉಪಸ್ಥಿತರಿದ್ದರು.

ನನ್ನ ಸೋಲಿಸೋಕೆ ವೀಲ್‌ಚೇರ್ ನಲ್ಲಿ ಹಳ್ಳಿ ಹಳ್ಳಿಗೆ ಹೋಗಿದ್ರು

- ಉದಯವಾಹಿನಿ, ಹಾಸನ

ನನ್ನನ್ನು ಸೋಲಿಸೋಕೆ ದೇವೇಗೌಡ್ರು ವೀಲ್‌ಚೇರ್‌ನಲ್ಲಿ ಹಳ್ಳಿ ಹಳ್ಳಿಗೆ ಹೋಗಿದ್ರು. ಅಂತಹ ಪ್ರಬಲ ದೇವೇಗೌಡ್ರು, ಕುಮಾರಸ್ವಾಮಿ ವಿರುದ್ಧ ಸೆಟೆದು ಗೆದ್ದು ಬಂದೆ. ಗಂಡಸಿ ಬಂದು ಓಂ, ಬೂಂ ಸ್ವಾಹ ಅಂದ್ರು ಏನಾಯ್ತು? ಜನ ಸೋಲಿಸಿದ್ರಾ? ಎಂದು ಶಾಸಕ ಶಿವಲಿಂಗೇಗೌಡ ವ್ಯಂಗ್ಯವಾಡಿದ್ದಾರೆ. ಈ ವೇಳೆ, ನನ್ನ ಕೆಲಸ, ನನ್ನ ಹೋರಾಟ, ಜನರ ಭಾವನೆ ನನ್ನ ಮೇಲೆ ಇತ್ತು ಅದಕ್ಕೆ ಗೆದ್ದೆ. ಒಬ್ಬನೇ ಒಬ್ಬ ಈ ಜಿಲ್ಲೆಯಲ್ಲಿ ಕಾಂಗ್ರೇಸ್ ಶಾಸಕ ಗೆದ್ದಿರೋದು. ಮಂತ್ರಿ ಸ್ಥಾನ ಕೊಡಿಸಿ, ಗೂಟದ ಕಾರಿನಲ್ಲಿ ಬರ್ತಿನಿ. ಆಮೇಲೆ ಈ ಜಿಲ್ಲೆ ರಾಜಕಾರಣ ನೋಡಿ ಎಂದಿದ್ದಾರೆ. ಈ ಮೂಲಕ ಬಹಿರಂಗವಾಗಿ ಸಚಿವ ಸ್ಥಾನದ ಆಸೆಯನ್ನು ಕೆ.ಎಂ. ಶಿವಲಿಂಗೇಗೌಡ ಬಿಚ್ಚಿಟ್ಟಿದ್ದಾರೆ. ಇನ್ನೂ ಇಂತಹ ಸಾವಿರಾರು ಸಮಾವೇಶಗಳನ್ನು ಮಾಡೋಣ. ಏನು ಬೇಕಾದರೂ ಈ ಜಿಲ್ಲೆಗೆ ತರೋಣ. ನಮ್ಮ ಸರ್ಕಾರ ಇದೆ, ನಾವ್ಯಾಕೆ ಹೆದರಬೇಕು. ಶ್ರೇಯಸ್‌ಪಟೇಲ್ ಸೆಂಟ್ರಲ್‌ನಲ್ಲಿ ಹಾಸನಕ್ಕೆ ನಾಯಕತ್ವ ಕೊಡಿ ಎಂದು ಕೇಳಬೇಕು ಎಂದಿದ್ದಾರೆ. ನಾನು ಯಾವುದೋ ಊರಿನಲ್ಲಿ ದನ ಕಾದುಕೊಂಡಿದ್ದೆ. ಈಗ ಈ ಹಂತಕ್ಕೆ ಬೆಳೆದಿದ್ದೇನೆ. ಅದು ನಮ್ಮ ಸ್ವಂತ ಶಕ್ತಿ, ಇದರ ಮೇಲೆ ನಾನು ಬೆಳೆದಿದ್ದೇನೆ. ಯಾರ ಆಶೀರ್ವಾದದಿಂದಲೂ ಬೆಳೆದಿಲ್ಲ, ಯಾರಿಗೂ ನಾನು ಕೇರ್ ಮಾಡಿ ರಾಜಕಾರಣ ಮಾಡಲ್ಲ, ತಮಟೆ ಹೊಡೆಯೋದು ನನಗೆ ಗೊತ್ತಿದೆ. ಈ ಜಿಲ್ಲೆಯಲ್ಲಿ ತಮಟೆ ಹೊಡೆಸೋದು ನನಗೆ ಗೊತ್ತಿದೆ.

ಕ್ಯಾನ್ಸರ್ ಇದೆ, ವಿಚಾರಣೆಗೆ ಬರಲು ಸಾಧ್ಯವಿಲ್ಲ

- ಉದಯವಾಹಿನಿ, ಬೆಂಗಳೂರು

ವಿವಾದಾತ್ಮಕ ಹೇಳಿಕೆ ನೀಡಿ, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಪಡೆದಿದ್ದ ವಿಶ್ವ ಒಕ್ಕಲಿಗ ಸಂಸ್ಥಾನ ಮಠದ ಚಂದ್ರಶೇಖರ ಶ್ರೀಗಳು ಅನಾರೋಗ್ಯದ ಕಾರಣ ನೀಡಿ ವಿಚಾರಣೆಗೆ ಹಾಜರಾಗಲು ಸಾಧ್ಯವಿಲ್ಲ ಎಂದು ಪೊಲೀಸರಿಗೆ ಪತ್ರ ಬರೆದಿದ್ದಾರೆ. ಶ್ರೀಗಳು ಉಪ್ಪಾರಪೇಟೆ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಬರೆದ ಪತ್ರದಲ್ಲಿ, ನಾನು ಮಾರಕ ಕ್ಯಾನ್ಸರ್ ನಿಂದ ಬಳಲುತ್ತಿದ್ದೇನೆ. ವೈದ್ಯರು 10 ದಿನಗಳ ಕಾಲ ವಿಶ್ರಾಂತಿಗೆ ಸೂಚಿಸಿದ್ದಾರೆ. ಡಿ.18ರಂದು ವಿಚಾರಣೆಗೆ ಹಾಜರಾಗಲು ಸಿದ್ಧನಿದ್ದೇನೆ. ಅಷ್ಟರೊಳಗೆ ವಿಚಾರಣೆ ನಡೆಸುವುದು ಅವಶ್ಯವೆನಿಸಿದಲ್ಲಿ ಮಠಕ್ಕೆ ಬರಬಹುದು. ಮಠಕ್ಕೆ ಬಂದು ಹೇಳಿಕೆ ದಾಖಲಿಸಿಕೊಳ್ಳಲು ಅಭ್ಯಂತರವಿಲ್ಲ. ವಿಚಾರಣೆಗೆ ಹಾಜರಾಗಲು ಸಾಧ್ಯವಿಲ್ಲ ಎಂದು ಉಲ್ಲೇಖಿಸಲಾಗಿದೆ.

ಚಂದ್ರಶೇಖರ ಸ್ವಾಮೀಜಿ ಹೇಳಿದ್ದೇನು?

ಪೊಲೀಸರಿಗೆ ಚಂದ್ರಶೇಖರ ಶ್ರೀ ಪತ್ರ

ನಗರದ ಫ್ರೀಡಂ ಪಾರ್ಕ್‌ನಲ್ಲಿ ಭಾರತೀಯ ಕಿಸಾನ್ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿ ಮಾತನಾಡಿದ್ದ ಅವರು ಪಾಕಿಸ್ತಾನದಲ್ಲಿ ಬೇರೆಯವರಿಗೆ ಮತ ಹಾಕುವ ಅಧಿಕಾರವಿಲ್ಲ. ಅದೇ ರೀತಿ ನಮ್ಮ ಭಾರತದಲ್ಲಿಯೂ ಮುಸ್ಲಿಮರಿಗೆ ಮತದಾನ ಮಾಡುವ ಹಕ್ಕಿಲ್ಲದಂತೆ ಮಾಡಿದರೆ ಅವರು ಅವರ ಪಾಡಿಗಿರುತ್ತಾರೆ. ಖಂಡಿತವಾಗಿಯೂ ಎಲ್ಲಾರೂ ನೆಮ್ಮದಿಯಾಗಿ ಇರಲು ಸಾಧ್ಯ ಎಂದಿದ್ದರು.

ದೇಶದಲ್ಲಿ ವಕ್ಫ್ ಮಂಡಳಿಯೇ ಇಲ್ಲದಂತೆ ಮಾಡಬೇಕು. ವಕ್ಫ್ ಮಂಡಳಿಯೇ ಇಲ್ಲದಂತೆ ಮಾಡಿದರೆ ಆಗ ಭಾರತೀಯರೆಲ್ಲರೂ ನೆಮ್ಮದಿಯಿಂದ ಇರಲು ಸಾಧ್ಯವಾಗಲಿದೆ. ರೈತರ ಜಮೀನು ಉಳಿಸಲು ಎಲ್ಲಾರೂ ಒಂದಾಗಿ ಹೋರಾಟ ನಡೆಸುವ ತುರ್ತು ಸಂದರ್ಭ ಎದುರಾಗಿದೆ.

ವಕ್ಫ್ ಮಂಡಳಿ ರದ್ದು ಮಾಡುವ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದ್ದರು. ಈ ವಿಚಾರವಾಗಿ ಸೈಯ್ಯದ್ ಅಬ್ಬಾಸ್ ಎಂಬವರು ಸ್ವಾಮೀಜಿ ಹೇಳಿಕೆಯನ್ನು ಖಂಡಿಸಿ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಬಿಎನ್‌ಎಸ್ ಸೆಕ್ಷನ್ 299 (ಯಾವುದೇ ಧರ್ಮವನ್ನು ಅಪಮಾನಗೊಳಿಸಿ ಅವರ ಧಾರ್ಮಿಕ ಭಾವನೆಗಳಿಗೆ ಆಘಾತ ಉಂಟುಮಾಡುವ ಉದ್ದೇಶದಿಂದ ಬುದ್ಧಿಪೂರ್ವಕವಾಗಿ ಮತ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ನಿಷ್ಪಕ್ಷಪಾತ ಚಿಂತನೆ ನಡೆಯಲಿ

ಯಾವುದೋ ಕಾಲದಲ್ಲಿ ಯಾರೋ ದೇವಸ್ಥಾನ ಒಡೆದರೆಂದು ಇನ್ನೂ ಎಷ್ಟು ದಿನ ದ್ವೇಷ? ಎಂದರು ನಟ ಪ್ರಕಾಶರಾಜ್. ನಾನು ಯಾರನ್ನೂ ಒಲ್ಲೆಸಲ್ಲ, ಪ್ರೀತಿಸುವೆ. ಸ್ವಧರ್ಮ ಪ್ರೀತಿ ಪರಧರ್ಮ ಸಹಿಷ್ಣುತೆ ಇರಲಿ ಎಂದರು ಮುಖ್ಯಮಂತ್ರಿ ಸಿದ್ದರಾಮಯ್ಯ. ನಿಜ, ವಿವಿಧತೆಯಲ್ಲಿ ಏಕತೆ ಅನಿವಾರ್ಯ. ಸಾಮರಸ್ಯವೇ ಸಂತೋಷದ ಬದುಕಿಗೆ ಪರಿಹಾರ. ಆದ್ದರಿಂದಲೇ ಬಹುತೇಕ ಹಿಂದು ಮುಸ್ಲಿಂ ಕ್ರೈಸ್ತರು ಪರಸ್ಪರ ಹೊಂದಿ ಬಾಳುತ್ತಿದ್ದಾರೆ. ಆದಾಗ್ಯೂ ಕೆಲವರಿಂದ ನಡೆವ ಧಾರ್ಮಿಕ ಕಲಹಗಳು ಬೃಹದಾಕಾರ ತೋರುತ್ತವೆ, ಹಗೆತನ ಬಿತ್ತುತ್ತವೆ.

ನಮಗಿದು ತಿಳಿದಿರಲಿ: ಇಸ್ಲಾಂ ಕ್ರಿಶ್ಚಿಯನ್ ವಿದೇಶಧರ್ಮಗಳು. ಭಾರತದಲ್ಲಾಗಲಿ ಹೊರದೇಶದಲ್ಲಾಗಲಿ ಯಾವ ಧರ್ಮದವರು ಯಾವ ಧರ್ಮದವರ ದೇವರ ವಿಗ್ರಹಗಳನ್ನು ಧಾರ್ಮಿಕ ಕಟ್ಟಡಗಳನ್ನು ಒಡೆದಿದ್ದಾರೆ ಒಡೆಯುತ್ತಿದ್ದಾರೆ, ಕೆಡವಿದ್ದಾರೆ ಕೆಡವುತ್ತಿದ್ದಾರೆ, ಅನ್ಯ ಧರ್ಮದ ದೇವರ ಬಗ್ಗೆ ಅವಹೇಳನ ಮಾಡಿದ್ದಾರೆ ಮಾಡುತ್ತಿದ್ದಾರೆ, ಮತಾಂತರ ಮಾಡಿದ್ದಾರೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ನಿಷ್ಪಕ್ಷಪಾತವಾದ ಚಿಂತನೆ ನಡೆಯಲಿ. ಮನೆಗೆ ಬಂದ ಅತಿಥಿಗಳು ಬಂದ ಮನೆಗೆ ಹೊಂದಬೇಕು, ಆಗದಿದ್ದಲ್ಲಿ ತಮ್ಮ ಮನೆಗೆ ಹಿಂದಿರುಗಬೇಕು. ಬದಲಾಗಿ ಬಂದ ಮನೆಯ ದೇವರ ಬದಲಾಯಿಸುವುದು ಮುಂತಾದ್ದು ನ್ಯಾಯವೇ?

ಶ್ರೀ ವಿಜಯೀಂದ್ರಾಚಾರ್ಯರಿಂದ ಶ್ರೀ ಮದ್ ಭಗವದ್ಗೀತೆ ಧಾರ್ಮಿಕ ಪ್ರವಚನ

• ಉದಯವಾಹಿನಿ,ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ದಿನಾಂಕ 4-12-2024 ರಿಂದ 8-12-2024ರ ವರೆಗೆ ಪ್ರತಿದಿನ 7-00 ಗಂಟೆಗೆ ಶ್ರೀ ವಿಜಯೀಂದ್ರಾಚಾರ್, ಮೈಸೂರು ಇವರಿಂದ ಗೀತಾ ಜಯಂತಿ ಪ್ರಯುಕ್ತ ಶ್ರೀ ಭಗವದ್ಗೀತೆ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

ಮುಡಾ ಅಕ್ರಮ ಆರೋಪ: ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಇಡಿ ನೋಟಿಸ್

• ಉದಯವಾಹಿನಿ,ಬೆಂಗಳೂರು

ಮೈಸೂರಿನ ಮುಡಾ ಸೈಟು ಅಕ್ರಮ ಆರೋಪದಲ್ಲಿ ಈಗಾಗಲೇ ಹಲವರನ್ನು ಇಡಿ ವಿಚಾರಣೆ ನಡೆಸಿತ್ತು. ಈಗ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗೆ ವಿಚಾರಣೆಗೆ ಹಾಜರಾಗುವಂತೆ ಇಡಿ ನೋಟಿಸ್ ನೀಡಿದೆ. ಈ ಸಂಬಂಧ ಜಾರಿ ನಿರ್ದೇಶನಾಲಯದ ಇಲಾಖೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಅಕ್ರಮ ಆರೋಪ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಇಡಿ ಜಾರಿಗೊಳಿಸಿರುವಂತ ನೋಟಿಸ್ ನಲ್ಲಿ ನಾಳೆ ಮುಡಾ ಅಕ್ರಮ ಆರೋಪ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಈ ಮೂಲಕ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗೆ ಬಿಗ್ ಶಾಕ್ ನೀಡಲಾಗಿದೆ. ಇನ್ನೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೂ ಇಡಿ ಮುಡಾ ಹಗರಣ ಸಂಬಂಧ ನೋಟಿಸ್ ನೀಡಲಾಗಿದೆ ಎನ್ನಲಾಗಿತ್ತು. ಆದರೇ ಇಡಿಯಿಂದ ಇದುವರೆಗೆ ನನಗೆ ಯಾವುದೇ ನೋಟಿಸ್ ಬಂದಿಲ್ಲ. ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಕೊಟ್ಟಿಲ್ಲ ಎಂಬುದಾಗಿ ಸ್ಪಷ್ಟ ಪಡಿಸಿದ್ದಾರೆ.

ಭಾರೀ ಮಳೆಗೆ ಕುಸಿದು ಬಿದ್ದ ಮನೆ : ವೃದ್ಧ ದಂಪತಿ ಪ್ರಾಣಾಪಾಯದಿಂದ ಪಾರು

• ಉದಯವಾಹಿನಿ,ಬೆಂಗಳೂರು

ಬೆಂಗಳೂರಿನಲ್ಲಿ ಫಂಗಲ್ ಚಂಡಮಾರುತದ ಪರಿಣಾಮ ನಿರಂತರವಾಗಿ ಮಳೆಯಾಗುತ್ತಿದ್ದು ಮಳೆಯಿಂದಾಗಿ ಮನೆಯೊಂದು ಕುಸಿದು ಬಿದ್ದಿರುವ ಘಟನೆ ವರದಿಯಾಗಿದೆ. ಬೆಂಗಳೂರಿನ ಚಾಮರಾಜಪೇಟೆಯ ಜೆ.ಜೆ.ನಗರದಲ್ಲಿ ಮಳೆಯಿಂದಾಗಿ ಮನೆ ಸಂಪೂರ್ಣ ಕುಸಿದು ಬಿದ್ದಿದೆ. ಮನೆಯಲ್ಲಿದ್ದ ವೃದ್ಧ ದಂಪತಿಯನ್ನು ಪೊಲಿಸರು ಹಾಗೂ ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಸದ್ಯ ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹಳೆಯ ಮನೆ ಇದಾಗಿದ್ದು, ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಮನೆ ಕುಸಿದು ಬಿದ್ದಿದೆ. ಬೆಂಗಳೂರಿನಾದ್ಯಂತ ಮಳೆಯಾಗುತ್ತಿದ್ದು, ಶೀತಗಾಳಿಗೆ ಜನರು ತತ್ತರಿಸುವಂತಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಇನ್ನೂ ಮೂರ್ನಾಲ್ಕು ದಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಪಾಸ್ ಪೋರ್ಟ್ ಪರಿಶೀಲನೆ ನೆಪದಲ್ಲಿ ಯುವತಿಗೆ ಕಿರುಕುಳ ನೀಡಿದ ಕಾನ್‌ಸ್ಟೇಬಲ್

• ಉದಯವಾಹಿನಿ,ಬೆಂಗಳೂರು

ಪಾಸ್ ಪೋರ್ಟ್ ನೆಪದಲ್ಲಿ ಯುವತಿ ಒಬ್ಬಳಿಗೆ ಕಾನ್‌ಸ್ಟೇಬಲ್ ಒಬ್ಬ ಮನೆಗೆ ಬಂದು ಒಂದೇ ಒಂದು ಬಾರಿ ತಬ್ಬಿಕೋ, ಯಾರಿಗೂ ಹೇಳಲ್ಲ ಎಂದು ಕಿರುಕುಳ ನೀಡಿರುವ ಘಟನೆ ಬೆಂಗಳೂರಿನ ಬ್ಯಾಟರಾಯನಪುರದಲ್ಲಿ ನಡೆದಿದೆ. ಯುವತಿಯ ದೂರಿನ ಮೇರೆಗೆ ಇದೀಗ ಕಾನ್‌ಸ್ಟೇಬಲ್ ಕಿರಣನ್ನು ಅಮಾನತುಗೊಳಿಸಿ ಪಶ್ಚಿಮ ವಿಭಾಗದ ಡಿಸಿಪಿ ಆದೇಶ ಹೊರಡಿಸಿದ್ದಾರೆ. ಬೆಂಗಳೂರಿನ ಬಾಪೂಜಿ ನಗರದ ಯುವತಿ ಒಬ್ಬಳು ಪಾಸ್ ಪೋರ್ಟ್‌ಗಾಗಿ ಇತ್ತೀಚೆಗೆ ಅರ್ಜಿ ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಕಾನ್‌ಸ್ಟೇಬಲ್ ಕಿರಣ್ ಡಾಕುಮೆಂಟ್ಸ್ ವೆರಿಫಿಕೇಶನ್ ನೆಪದಲ್ಲಿ 2 ಮೂರು ಬಾರಿ ಯುವತಿಯ ಮನೆಗೆ ತೆರಳಿದ್ದಾನೆ. ವೇಳೆ ಯುವತಿಯೊಂದಿಗೆ ಕಿರಣ್ ಅಸಭ್ಯವಾಗಿ ವರ್ತಿಸಿದ್ದಾನೆ ಎಂದು ಯುವತಿಯು ದೂರಿನಲ್ಲಿ ಆರೋಪಿಸಿದ್ದಾಳೆ. ನಿನ್ನೆ ಕೂಡ ಕಿರಣ್ ಯುವತಿಯ ಮನೆಗೆ ಬಂದಿದ್ದಾನೆ. ವೇಳೆ ನಿನ್ನ ಅಣ್ಣ ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾನ. ನನಗೆ ಸಹಕರಿಸದಿದ್ದರೆ ಪಾಸ್ಪೋರ್ಟ್ ಕ್ಯಾನ್ಸಲ್ ಮಾಡುವುದಾಗಿ ಹೇಳಿ ಒಂದೇ ಒಂದು ಬಾರಿ ತಬ್ಬಿಕೋ ಯಾರಿಗೂ ಹೇಳಲ್ಲ ಎಂದು ಹೇಳಿದ್ದಾನೆ. ಯುವತಿ ಒಪ್ಪದಿದ್ದಾಗ ತಾನೇ ಹೋಗಿ ಬಾಗಿಲು ಮುಚ್ಚಿದ್ದಾನೆ. ಬಳಿಕ ನನ್ನನ್ನು ಒಂದು ಬಾರಿ ತಬ್ಬಿಕೋ ಎಂದು ಕಿರುಕುಳ ನೀಡಿದ್ದಾನೆ ಎಂದು ಆರೋಪಿಸಲಾಗಿದೆ. ಬಗ್ಗೆ ಇವತಿ ಪಶ್ಚಿಮ ವಿಭಾಗದ ಡಿಸಿಪಿಗೆ ದೂರು ನೀಡಿದ್ದಳು. ಈ ಹಿನ್ನೆಲೆಯಲ್ಲಿ ಡಿಸಿಪಿ ಗಿರೀಶ್ ಕುಮಾರ್ ಕಿರಣ್ ನನ್ನು ಅಮಾನತುಗೊಳಿಸಿದ್ದಾರೆ.

ಸಿಲಿಂಡರ್ ಸ್ಫೋಟಗೊಂಡು ಮೂವರು ಕಾರ್ಮಿಕರು ಗಂಭೀರ

• ಉದಯವಾಹಿನಿ,ಆನೇಕಲ್

ಅನಿಲ ಸೋರಿಕೆಯಾಗಿ ಸಿಲಿಂಡರ್ ಬ್ಲಾಸ್ಟ್ ಆಗಿರುವ ಪರಿಣಾಮ ಮೂವರು ಗಂಭೀರ ಗಾಯಗೊಂಡಿರುವ ಘಟನೆ ಬೆಂಗಳೂರು ಹೊರವಲಯದ ಆನೇಕಲ್ ತಾಲ್ಲೂಕಿನ ಕಾಚನಾಯಕನಹಳ್ಳಿಯಲ್ಲಿ ನಡೆದಿದೆ. ಬೆಳ್ಳಂಬೆಳಿಗ್ಗೆ ಸಿಲಿಂಡರ್ ಬ್ಲಾಸ್ಟ್ ಆಗಿದ್ದು, ಅಸ್ಸಾಂ ಮೂಲದ ಬಿದನ್ ದಾಸ್, ದಯಾಲ್ ಶಾಂತಿ ಗುಲಾಭ ಕರ್ಮಾಕರ ಎಂಬುವವರು ಗಂಭೀರ ಗಾಯಗೊಂಡಿದ್ದಾರೆ. ಹೆನ್ನಾಗರ ಸಮೀಪದ ಐಕಾನ್ ಬಡಾವಣೆಯಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಮೂವರು ರಮೇಶ್ ಎಂಬುವರ ಮನೆಯಲ್ಲಿ ಬಾಡಿಗೆಗಿದ್ದರು. ರಾತ್ರಿ ಸಿಲಿಂಡರ್ ಆನ್ ಮಾಡಿ ಮಲಗಿದ್ದ ಪರಿಣಾಮ ಬೆಳಿಗ್ಗೆ ಎದ್ದು ಲೈಟ್ ಹಾಕುತ್ತಿದ್ದಂತೆ ಸಿಲಿಂಡರ್ ಸ್ಫೋಟಗೊಂಡಿದೆ. ಸ್ಫೋಟಗೊಂಡ ತೀವ್ರತೆಗೆ ಮನೆಯ ಕಿಟಕಿ, ಬಾಗಿಲುಗಳು ಚೂರು ಚೂರಾಗಿವೆ. ಪರಿಣಾಮ ಮನೆಯಲ್ಲಿದ್ದ ಮೂವರಿಗೂ ಗಂಭೀರ ಗಾಯಗಳಾಗಿದ್ದು, ನಾರಾಯಣ ಆಸ್ಪತ್ರೆಗೆ ರವಾನಿಸಲಾಗಿದೆ.

ಒಕ್ಕಲಿಗ ಸ್ವಾಮೀಜಿ ಕೇಸ್ ವಿಚಾರದ ಬಗ್ಗೆ ಡಿ.ಕೆ ಸುರೇಶ್ ಭಿನ್ನ ನಿಲುವು!

ಕಾಂಗ್ರೇಸ್ ನಾಯಕ ಡಿಕೆ ಸುರೇಶ್ ಈ ವಿಚಾರದಲ್ಲಿ ಡಿ.ಕೆ ಶಿವಕುಮಾರ್ ಅವರಿಗಿಂತ ಭಿನ್ನ ಅಭಿಪ್ರಾಯ

• ಉದಯವಾಹಿನಿ,ಬೆಂಗಳೂರು

ಒಕ್ಕಲಿಗ ಸ್ವಾಮೀಜಿ ವಿಚಾರವಾಗಿವಾದ - ವಿವಾದ ನಡೆಯುತ್ತಿರುವ ಸಂದರ್ಭದಲ್ಲೇ ಕಾಂಗ್ರೇಸ್ ನಾಯಕ ಡಿಕೆ ಸುರೇಶ್ ಅವರು ಈ ವಿಚಾರದಲ್ಲಿ ಡಿ.ಕೆ ಶಿವಕುಮಾರ್ ಅವರಿಗಿಂತ ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದಲ್ಲಿ ಒಕ್ಕಲಿಗ ಸ್ವಾಮೀಜಿಗಳ ಮೇಲೆ (ಕೇಸ್) ಎಫ್‌ಐಆರ್ ದಾಖಲಾಗಿರುವ ವಿಚಾರವು ವಿವಿಧ ಪಕ್ಷಗಳ ನಾಯಕರ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ಈ ನಡುವೆ ಒಕ್ಕಲಿಗ ಸ್ವಾಮೀಜಿ ಅವರ ವಿಚಾರದಲ್ಲಿ ಡಿ.ಕೆ ಸುರೇಶ್ ಅವರು ಅಚ್ಚರಿಯ ಹೇಳಿಕೆಯನ್ನು ಕೊಟ್ಟಿದ್ದಾರೆ. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ ಅವರ ವಿರುದ್ಧ ದಾಖಲಿಸಿಕೊಂಡಿರುವ ಪ್ರಕರಣವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ. ಸ್ವಾಮೀಜಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿರುವುದಕ್ಕೆ ಈಗಾಗಲೇ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ವಿರೋಧಿಸಿವೆ.

ಅಲ್ಲದೇ ಡಿ.ಕೆ ಶಿವಕುಮಾರ್ ಅವರು ಈ ಕ್ರಮವನ್ನು ಸಮರ್ಥನೆ ಮಾಡಿಕೊಂಡಿರುವುದಕ್ಕೆ ಅವರ ಮೇಲೂ ಮುಗಿ ಬಿದ್ದಿವೆ. ಇದೀಗ ಡಿ.ಕೆ ಶಿವಕುಮಾರ್ ಅವರ ಸಹೋದರ ಡಿ.ಕೆ ಸುರೇಶ್ ಅವರು ಈ ವಿಚಾರದಲ್ಲಿ ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ವಿಚಾರವಾಗಿ ಮಾತನಾಡಿರುವ ಅವರು, ಸರ್ಕಾರ ಈ ಪ್ರಕರಣವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ. ಈಗಾಗಲೇ ಸ್ವಾಮೀಜಿಗಳು ಅವರ ಹೇಳಿಕೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ನಮ್ಮ ಭಾರತದ ಸಂವಿಧಾನವು ಎಲ್ಲರಿಗೂ ಒಂದೇ ಎಂದು ಪರಮ ಪೂಜ್ಯ ಸ್ವಾಮೀಜಿ ಅವರು ಸ್ಪಷ್ಟಪಡಿಸಿದ್ದಾರೆ. ಅಲ್ಲದೇ ಸ್ವಾಮೀಜಿಗಳು ಸಾಂದರ್ಭಿಕವಾಗಿ ಆ ಮಾತು ಹೇಳಿದ್ದಾಗಿಯೂ ಒಪ್ಪಿಕೊಂಡು ಅದಕ್ಕೆ ವಿಷಾದ ಸೂಚಿಸಿದ್ದಾರೆ. ಆದರೆ, ಸರ್ಕಾರ ಈ ವಿಚಾರವಾಗಿ ದೂರು ದಾಖಲಿಸಿಕೊಂಡಿದೆ.

ಡಿ.ಕೆ ಶಿವಕುಮಾರ್ ಅವರು ಹೇಳಿದ್ದೇನು ? ಈ ವಿಚಾರವಾಗಿ ಮಾತನಾಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು, ನಾನು ರಾಜ್ಯದ ಎಲ್ಲಾ ನಮ್ಮ ಸಮುದಾಯದ ಸ್ವಾಮೀಜಿಗಳಿಗೆ ಹಾಗೂ ಎಲ್ಲಾ ಸ್ವಾಮೀಜಿಗಳಿಗೂ ಮನವಿ ಮಾಡ್ತೀನಿ. ದಯವಿಟ್ಟು ಯಾರೂ ಸಹ ಸಂವಿಧಾನ, ಯಾರ ಹಕ್ಕುಗಳ ಬಗ್ಗೆಯೂ ಮಾತನಾಡಬೇಡಿ ಎಂದು ಮನವಿ ಮಾಡಿದ್ದರು. ಅಲ್ಲದೇ ಯಾರೂ ಸಹ ಜಾತಿಗಳ ಕುರಿತು ಮಾತನಾಡುವುದು ಬೇಡ. ನಮ್ಮದೆಲ್ಲ ಮಾನವ ಧರ್ಮ, ನಮ್ಮದು ಸಂವಿಧಾನವಾಗಿದೆ. ನಾವು ಇದೆರಡಕ್ಕೂ ಹೆಚ್ಚು ಒತ್ತು ಕೊಟ್ಟುಕೊಂಡು ಹೋಗಬೇಕು. ನಾನು ಸ್ವಾಮೀಜಿಗಳು ಹಾಗೂ ಪೊಲೀಸರಿಗೂ ಹೇಳುತ್ತೇನೆ. ಯಾರು ಸಹ ಇಲ್ಲಿನ ಕಾನೂನಿಗಿಂತ ದೊಡ್ಡವರಲ್ಲ. ನಾನು ಮಾತಾಡಿದರೂ ನನ್ನ ಮೇಲೂ ಕೇಸ್ ಹಾಕುತ್ತಾರೆ ಎಂದಿದ್ದರು.



ಉದಯವಾಹಿನಿ ಚಿತ್ರ

ಚಂದ್ರಶೇಖರನಾಥ ಸ್ವಾಮೀಜಿ ಅವರ ವಿರುದ್ಧ ದಾಖಲೆ

ಸ್ವಾಮೀಜಿ ವಿರುದ್ಧದ ದೂರು ಹಿಂಪಡೆಯುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡುತ್ತೇನೆ ಎಂದಿದ್ದಾರೆ. ಈಚೆಗೆ ಚಂದ್ರಶೇಖರನಾಥ ಸ್ವಾಮೀಜಿ ಅವರು ಭಾಷಣವೊಂದರಲ್ಲಿ ಮುಸ್ಲಿಮರ ಮತದಾನದ ವಿಚಾರವಾಗಿ ವಿವಾದಾತ್ಮಕವಾಗಿ ಮಾತನಾಡಿದ್ದರು. ಈ ಹೇಳಿಕೆ ಸಾಕಷ್ಟು ವಿರೋಧಕ್ಕೆ ಗುರಿಯಾಗಿತ್ತು. ಅಲ್ಲದೇ ಈ ರೀತಿ ವಿವಾದಾತ್ಮಕ ಹೇಳಿಕೆ ಕೊಟ್ಟ ವಿಚಾರಕ್ಕೆ ಸಂಬಂಧಿಸಿದಂತೆ ಚಂದ್ರಶೇಖರನಾಥ ಸ್ವಾಮೀಜಿ ಅವರ ವಿರುದ್ಧ ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಚಂದ್ರಶೇಖರನಾಥ ಸ್ವಾಮೀಜಿ ಅವರು ವಿಷಾದ ವ್ಯಕ್ತಪಡಿಸಿದರೂ ರಾಜ್ಯ ಸರ್ಕಾರ ಅವರ ಮೇಲೆ ಕ್ರಮ ಕೈಗೊಂಡಿದೆ ಎಂದು ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ಅಲ್ಲದೇ ಸಮುದಾಯದಿಂದಲೂ ವಿರೋಧ ವ್ಯಕ್ತವಾಗುತ್ತಿದೆ.

ಜಿಪಂ, ತಾಪಂ ಚುನಾವಣೆ ನಡೆಸಲು ಸಿದ್ಧತೆ : ಡಿಸಿಎಂ

• ಉದಯವಾಹಿನಿ,ಬೆಂಗಳೂರು

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೀರಾ ಎಂದು ಕೇಳಿದಾಗ, ನಾವು ಯಾವುದೋ ಒಂದು ಉದ್ದೇಶ ಇಟ್ಟುಕೊಂಡು ವೇದಿಕೆ ಸಿದ್ಧ ಮಾಡಬೇಕಲ್ಲವೇ.

ಶೀಘ್ರದಲ್ಲಿ ಚುನಾವಣೆ ನಡೆಯಲಿರುವುದಂತೂ ನಿಜ. ಅದನ್ನು ನಿಲ್ಲಿಸಲು ಆಗುವುದಿಲ್ಲ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದ್ದು, ಫೆಬ್ರವರಿ ವೇಳೆಗೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

ಈ ಸಮಾವೇಶ ಹಾಸನಕ್ಕೆ ಸೀಮಿತವೇ ಅಥವಾ ರಾಜ್ಯಾದ್ಯಂತ ಮಾಡುತ್ತೀರಾ ಎಂದು ಕೇಳಿದಾಗ, ನಾವು ರಾಜ್ಯಾದ್ಯಂತ ತಲುಪಬೇಕು. ಹಾಸನ ಕಾರ್ಯಕ್ರಮ ನಂತರ ಬೆಳಗಾವಿಯಲ್ಲಿ ದೊಡ್ಡ ಕಾರ್ಯಕ್ರಮ ನಡೆಯಲಿದೆ. ಈ ಬಗ್ಗೆ ಸಭೆ ಮಾಡಿ ನಂತರ ಹೆಚ್ಚಿನ ಮಾಹಿತಿ ನೀಡುತ್ತೇವೆ ಎಂದು ತಿಳಿಸಿದರು.

ಯಾವುದೇ ಸ್ಥಾನ ಖಾಲಿ ಇಲ್ಲ

ಫೆಬ್ರವರಿಯಲ್ಲಿ ಸಂಪುಟ ವಿಸ್ತರಣೆ ಆಗುವುದೇ ಎಂದು ಕೇಳಿದಾಗ, ನಾನು ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಹೊರತು, ಮುಖ್ಯಮಂತ್ರಿಯಲ್ಲ. ಸಧ್ಯಕ್ಕೆ ಈ ಬಗ್ಗೆ ಚರ್ಚೆ ಇಲ್ಲ. ಅದರ ಅವಶ್ಯಕತೆಯೂ ಇಲ್ಲ. ಸಧ್ಯದಲ್ಲೇ ಅಧಿವೇಶನವಿದೆ. ಒಂದು ಸಚಿವ ಸ್ಥಾನ ಮಾತ್ರ ಬಾಕಿ ಇದೆ. ಈ ಬಗ್ಗೆ ಸಿಎಂ ಉತ್ತರ ನೀಡಿದ್ದಾರೆ. ಬೇರೆ ಯಾವುದೇ ಸ್ಥಾನ ಖಾಲಿ ಇಲ್ಲ ಎಂದು ತಿಳಿಸಿದರು. ಕೆಪಿಸಿಸಿ ಅಧ್ಯಕ್ಷ ಸ್ಥಾನವೂ ಖಾಲಿ ಇಲ್ಲ ಎಂದು ಹೇಳುತ್ತಿದ್ದೀರಾ ಎಂದು ಕೇಳಿದಾಗ, ನಾನು ನನ್ನ ಭಾಷೆಯಲ್ಲಿ ಹೇಳಿದ್ದೇನೆ, ನೀವು ಏನು ವಿಶ್ಲೇಷಣೆ ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ ಎಂದು ತಿಳಿಸಿದರು.

ನಮ್ಮ ಮೆಟ್ರೋದಲ್ಲಿ ಇನ್ನುಂದೆ ಸಿಗಲಿದೆ 5ಜಿ ಇಂಟರ್ನೆಟ್

• ಉದಯವಾಹಿನಿ,ಬೆಂಗಳೂರು

ಜನತೆಗೆ ಬಿಎಂಆರ್‌ಸಿಎಲ್ ಸಿಹಿ ಸುದ್ದಿಯೊಂದನ್ನು ನೀಡಿದ್ದು, ನಮ್ಮ ಮೆಟ್ರೋ ಪ್ರಯಾಣಿಕರಿಗೆ ಇನ್ನು ಮುಂದೆ 5ಉ ಇಂಟರ್ನೆಟ್ ಸಿಗಲಿದೆ. ಮೆಟ್ರೋ ಪ್ರಯಾಣದ ವೇಳೆ ಸಾರ್ವಜನಿಕರಿಗೆ 5ಜಿ ಮೊಬೈಲ್ ನೆಟ್ವರ್ಕ್ ಸೌಲಭ್ಯ ಒದಗಿಸುವುದು ತನ್ನ ಆದಾಯ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ನಮ್ಮ ಮೆಟ್ರೋ ಪಿಲ್ಲರ್‌ಗಳಲ್ಲಿ ನೆಟ್ವರ್ಕ್ ಸೆಲ್ ಅಳವಡಿಸಲು ಬೆಂಗಳೂರು ಮೆಟ್ರೋ ರೈಲು ನಿಗಮ ಮುಂದಾಗಿದೆ. ಹೌದು ಮೆಟ್ರೋ ಸಂಚಾರದ ವೇಳೆ ಪ್ರಯಾಣಿಕರಿಗೆ ಕೆಲವೆಡೆ ಕಚೇರಿ ಕೆಲಸ ಮಾಡಲು. ಮಾತನಾಡಲು ಸಾಧ್ಯವಾಗುತ್ತಿಲ್ಲ, ಈ ಹಿನ್ನೆಲೆಯಲ್ಲಿ ನೆಟ್ವರ್ಕ್ ಸಮಸ್ಯೆ ಪರಿಹರಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ. ಜತೆಗೆ ನೆಟ್ವರ್ಕ್ ಸಲ್ ಗಳ ಅಳವಡಿಕೆ ಮೂಲಕವೂ ಟೆಲಿಕಾಂ ಕಂಪನಿಗಳಿಂದ ಬಾಡಿಗೆ ಪಡೆದು ಆದಾಯ ಗಳಿಸಿಕೊಳ್ಳಲು ಮುಂದಾಗಿದೆ. ವೈಟ್ ಫೀಲ್ಡ್ ಮೆ

ಮೈಸೂರು ಭಾಗದ ರೈತರ ನಿದ್ದೆಗೆಡಿಸಿದ ಫೆಂಗಲ್ ಚಂಡಮಾರುತ

ತಮಿಳುನಾಡು, ಪುದುಚೇರಿ ಸೇರಿದಂತೆ ಹಲವು ಭಾಗಗಳಲ್ಲಿ ಅನಾಹುತ ಸೃಷ್ಟಿಸಿದ್ದು ಭಾರೀ ಮಳೆಯಿಂದ ಸಾವು ನೋವುಗಳಾಗುತ್ತಿವೆ

• ಉದಯವಾಹಿನಿ, ಮೈಸೂರು

ಉದಯವಾಹಿನಿ ಚಿತ್ರ

ಫೆಂಗಲ್ ಚಂಡಮಾರುತದ ಪರಿಣಾಮ ಹಳೆ ಮೈಸೂರು ಭಾಗದಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿರುವ ಹಿನ್ನಲೆಯಲ್ಲಿ ಕೊಯ್ದುಗೆ ಬಂದ ಭತ್ತದ ಬೆಳೆ ನಾಶವಾಗುವ ಹಂತವನ್ನು ತಲುಪಿದ್ದು ರೈತರು ಏನು ಮಾಡಬೇಕೆಂದು ತೋಚದೆ ಚಿಂತಾಕ್ರಾಂತರಾಗಿದ್ದಾರೆ. ಎಲ್ಲವೂ ಸರಿಯಿದ್ದಿದ್ದರೆ ಭತ್ತದ ಕೊಯು ಆರಂಭಿಸಿ ಬಿಡಬಹುದಿತ್ತು. ಆದರೀಗ ಕೆಲವರು ಕೊಯ್ದು ಆರಂಭಿಸಿ ಮಳೆಯಿಂದ ಸ್ಥಗಿತಗೊಳಿಸಿದ್ದರೆ ಮತ್ತೆ ಕೆಲವು ರೈತರು ಹೇಗಪ್ಪಾ ಕೊಯ್ದು ಮಾಡುವುದೆಂಬ ಚಿಂತೆಯಲ್ಲಿದ್ದಾರೆ.

ಬೆಳೆಗಳನ್ನು ಕೊಯ್ದು ಮಾಡಿ ಮನೆ ತುಂಬಿಸಲು ಅನುಕೂಲ

ಈಗಾಗಲೇ ಫೆಂಗಲ್ ಚಂಡಮಾರುತ ತಮಿಳುನಾಡು, ಪುದುಚೇರಿ ಸೇರಿದಂತೆ ಹಲವು ಭಾಗಗಳಲ್ಲಿ ಅನಾಹುತ ಸೃಷ್ಟಿಸಿದ್ದು ಭಾರೀ ಮಳೆಯಿಂದ ಸಾವು ನೋವುಗಳಾಗುತ್ತಿವೆ. ಅದರ ಪರಿಣಾಮ ರಾಜ್ಯದ ಮೇಲಾಗುತ್ತಿದ್ದು, ಮೈಸೂರು ಭಾಗದಲ್ಲಿ ಭತ್ತ, ರಾಗಿ ಸೇರಿದಂತೆ ಹಲವು ಬೆಳೆಗಳ ಮೇಲೆ ಪರಿಣಾಮ ಬೀರುತ್ತಿದ್ದರೆ ಮಲೆನಾಡು ಪ್ರದೇಶಗಳಲ್ಲಿ ಕಾಫಿ ಬೆಳೆಗಾರರು ಪರದಾಡುವಂತಾಗಿದೆ. ಕೊಡಗು ಹಾಸನ ಚಿಕ್ಕಮಗಳೂರು ಭಾಗಗಳಲ್ಲಿ ಕಾಫಿ ಮತ್ತು ಭತ್ತ ಬೆಳೆಯಲಾಗುತ್ತಿದ್ದು, ಇದೆರಡು ಬೆಳೆಯ ಕೊಯ್ದು ಡಿಸೆಂಬರ್ ತಿಂಗಳಿನಿಂದಲೇ ಆರಂಭವಾಗುತ್ತಿದೆ. ಆದರಲ್ಲೂ ಅರೇಬಿಕಾ ಕಾಫಿ ಬೆಳೆಯು ಹಣ್ಣಾಗುತ್ತಿದ್ದು ಮಳೆಯಿಂದ ಭಾರೀ ಹಾನಿಯಾಗುವ ಸಾಧ್ಯತೆ ಹೆಚ್ಚಾಗಿದೆ. ಹಾಗೆಯೇ ಭತ್ತದ ಬೆಳೆ ಕೂಡ ಕೊಯ್ದುಗೆ ಬಂದಿದ್ದು ಅದನ್ನು ಕೊಯ್ದು ಮಾಡುವುದು ಹೇಗೆ ಎಂಬ ಪ್ರಶ್ನೆ ರೈತರಲ್ಲಿ ಮನೆ ಮಾಡಿದೆ. ಮೈಸೂರಿನ ನೀರಾವರಿ ಪ್ರದೇಶದಲ್ಲಿ ರೈತರು ಭತ್ತ ಬೆಳೆದಿದ್ದು ಬೆಳೆ ಉತ್ತಮವಾಗಿದ್ದು, ಹೆಚ್ಚಿನ ಇಳುವರಿಯ ನಿರೀಕ್ಷೆಯಲ್ಲಿ ರೈತರಿದ್ದರು. ಜತೆಗೆ ಜಿಲ್ಲೆಯ ಬಹುತೇಕ ಭತ್ತದ ಬಯಲಿನಲ್ಲಿ ಕೊಯ್ದು ಆರಂಭಿಸಿದ್ದರು. ಕೆಲವರು ಕಾರ್ಮಿಕರ ಸಹಾಯದಿಂದ ಕೊಯ್ದು ಮಾಡಿಸುತ್ತಿದ್ದರೆ, ಮತ್ತೆ ಕೆಲವರು ಕಟಾವು ಯಂತ್ರದ ಮೊರೆ ಹೋಗಿದ್ದರು. ಆದರೆ ಕಳೆದ ಕೆಲವು ದಿನಗಳಿಂದ ಮಳೆ ಮೋಡದ ವಾತಾವರಣ ಇತ್ತಾದರೂ ಇದೀಗ ಮಳೆ ಸುರಿಯಲಾರಂಭಿಸಿರುವುದು ರೈತರ ನಿದ್ದೆಗೆಡಿಸಿದೆ. ಕಳೆದ ಕೆಲವು ವರ್ಷಗಳಿಂದ ಡಿಸೆಂಬರ್ ವೇಳೆಗೆ ಚಂಡಮಾರುತ ಪರಿಣಾಮ ಅಥವಾ ಅಕಾಲಿಕ ಮಳೆ ಸುರಿಯುವುದು ಮಾಮೂಲಾಗಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬಂದಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದ ಭತ್ತದ ಗದ್ದೆಯಲ್ಲಿ ನೀರು ಆರದೆ ಕೊಯ್ದುಗೆ ತೊಂದರೆ ಆಗುತ್ತಿರುವುದಲ್ಲದೆ ಭತ್ತ ಮೊಳಕೆಯೊಡೆಯುವ ಸ್ಥಿತಿ ನಿರ್ಮಾಣವಾಗುತ್ತಿದೆ. ಕಾವೇರಿ, ಲಕ್ಷ್ಮಣತೀರ್ಥ ಮತ್ತು ಕಬಿನಿ ನೀರನ್ನು ಆಶ್ರಯಿಸಿಕೊಂಡು ರೈತರು ಭತ್ತ ಬೆಳೆಯುತ್ತಿದ್ದಾರೆ.

ಕೆ.ಆರ್.ನಗರ, ನಂಜನಗೂಡು, ತಿ.ನರಸೀಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಹೆಚ್ಚು ಭತ್ತ ಬೆಳೆಯುತ್ತಿದ್ದು ಇದು ಆದಾಯದ ಮೂಲವಾಗಿದೆ. ಈಗ ಮಳೆ ಸುರಿಯುತ್ತಿರುವುದರಿಂದ ಹಾನಿಯಾಗುವ ಸಾಧ್ಯತೆ ಜಾಸ್ತಿಯಿದೆ. ಇನ್ನು ಹಾಸನ, ಚಿಕ್ಕಮಗಳೂರಿನಲ್ಲಿಯೂ ಕಾಫಿ ಜತೆಗೆ ಭತ್ತ, ಜೋಳ, ರಾಗಿ ಮೊದಲಾದವುಗಳನ್ನು ಬೆಳೆಯುತ್ತಿದ್ದು ಸಮಸ್ಯೆ ಎದುರಿಸುವಂತಾಗಿದೆ ಈ ವ್ಯಾಪಿಯಲ್ಲಿ ಅರೇಬಿಕಾ ಕಾಫಿಯನ್ನು ಬೆಳೆಯುವುದರಿಂದ ಮಳೆಯಿಂದಾಗಿ ಕೊಯ್ದುಗೆ ಅಡ್ಡಿಯಾಗುತ್ತಿದೆ. ಕೊಡಗಿನಲ್ಲಿ ಮಳೆ, ಶೀತ ಹವೆಯ ಕಾರಣದಿಂದಾಗಿ ಈಗಾಗಲೇ ರೋಬಸ್ಟಾ ಕಾಫಿ ಉದುರಿದ್ದು, ಕಳೆದ ವರ್ಷಕ್ಕಿಂತ ಇಳುವರಿ ಕಡಿಮೆಯಾಗಿದೆ. ಈ ತಿಂಗಳಾಂತ್ಯದಲ್ಲಿ ರೋಬಸ್ಟಾ ಕಾಫಿ ಕೊಯ್ದು ಆರಂಭಿಸುವ ಸಾಧ್ಯತೆಯಿದೆ. ಅರೇಬಿಕಾ ಕಾಫಿ ಬೆಳೆಗಾರರಿಗೆ ಸಂಕಷ್ಟ ತಪ್ಪಿದಲ್ಲ. ಇದರ ಜತೆಗೆ ಭತ್ತ ಬೆಳೆದವರಿಗೆ ಅದನ್ನು ಕೊಯ್ದು ಮಾಡುವುದು ಸವಾಲ್ ಆಗಿದೆ. ಹೆಚ್ಚಿನವರು ಕೂಲಿ ಆಳುಗಳನ್ನೇ ನಂಬಿದ್ದಾರೆ.

ಆದರೆ ಜಿಲ್ಲೆಯಲ್ಲಿ ಕೂಲಿ ಕಾರ್ಮಿಕರ ಸಮಸ್ಯೆ ಕಾಡುತ್ತಿದ್ದು, ಅಸ್ಸಾಂ ಮೂಲಕ ಕಾರ್ಮಿಕರನ್ನು ಆಶ್ರಯಿಸುವಂತಾಗಿದೆ. ಬಹಳಷ್ಟು ಬೆಳೆಗಾರರು ಭತ್ತದ ಕೃಷಿ ಕಾರ್ಯವನ್ನು ಮುಗಿಸಿ ಕಾಫಿ ಕೊಯ್ದುನತ್ತ ಮುಖ ಮಾಡುವುದು ಮಾಮೂಲಿಯಾಗಿದೆ. ಆದರೆ ಮಳೆಯ ವಾತಾವರಣ ಎಲ್ಲಾ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸಿರುವುದಂತು ನಿಜ.

> ಈ ಸಮಯದಲ್ಲಿ ಮಳೆಯ ಅಗತ್ಯವೇ ಇರಲಿಲ್ಲ. ಮಳೆ ಬಂದರೆ ಲಾಭಕ್ಕಿಂತ ನಷ್ಟವೇ ಜಾಸ್ತಿ. ಬಿಸಿಲಿದ್ದರೆ ಎಲ್ಲಾ ಬೆಳೆಗಳನ್ನು ಕೊಯ್ದು ಮಾಡಿ ಮನೆ ತುಂಬಿಸಲು ಅನುಕೂಲವಾಗುತ್ತದೆ. ಕೊಯ್ದು ಒಕ್ಕಣೆ ಎಲ್ಲದಕ್ಕೂ ಬಿಸಿಲೇ ಬೇಕಾಗಿದೆ. ಆದರೆ ಬೇಡ ಬೇಡವೆಂದರೂ ಮಳೆ ಸುರಿಯುತ್ತಿದ್ದು, ಪ್ರಕೃತಿಗೆ ತಲೆಬಾಗಲೇ ಬೇಕಾಗಿದೆ. ಚಂಡಮಾರುತ ನಿಲ್ಲುವ ತನಕ ಇದೇ ಪರಿಸ್ಥಿತಿ ಮುಂದುವರೆಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

> ಈ ಬಾರಿ ಉತ್ತಮ ಮಳೆಯಾಗಿದ್ದರಿಂದ ರೈತರು ಭತ್ತ ಬೆಳೆದಿದ್ದರು.ಕಾಫಿ ಬೆಳೆಗಾರರಿಗೂ ಸಂಕಷ್ಟ ತಪ್ಪಿದಲ್ಲ ಈ ನಡುವೆ ಭತ್ತಕ್ಕೆ ಬಾಧಿಸಿದ್ದ ರೋಗವನ್ನೆಲ್ಲ ನಿಯಂತ್ರಿಸಿ ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದರು ಆದರೆ ಚಂಡಮಾರುತದ ಪರಿಣಾಮ ಇಲ್ಲಿಯೂ ಬೀರಿರುವುದು ರೈತರನ್ನು ಸಂಕಷ್ಟಕ್ಕೆ ದೂಡಿದೆ.

ಮಾರ್ಗಶಿರ ಅಮಾವಾಸ್ಯೆ; ಮಳೆ ಲೆಕ್ಕಿಸದೆ ಮಾದಪ್ಪನ ದರ್ಶನ

• ಉದಯವಾಹಿನಿ, ಮಹದೇಶ್ವರ

ಉದಯವಾಹಿನಿ ಚಿತ್ರ

ಬೆಳ್ಳಿ - ಚಿನ್ನದ ರಥೋತ್ಸವ ಮುಂತಾದ ಸೇವೆ

ಬೆಟ್ಟ ಮಲೆ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಮಾರ್ಗಶಿರ ಅಮಾವಾಸ್ಯೆ ಪ್ರಯುಕ್ತ ರಾಜ್ಯದ ವಿವಿಧಡೆ, ನೆರೆ ರಾಜ್ಯಗಳಿಂದ ಸಾವಿರಾರು ಭಕ್ತರು ಬಂದಿದ್ದರು. ಮನೋರಂಜನೆ ಬೆಳಿಗ್ಗೆಯಿಂದಲೇ ಸುರಿಯುತ್ತಿದ್ದ ಜಿಟಿ ಜಿಟಿ ಮಳೆಯನ್ನೂ ಲೆಕ್ಕಿಸದೆ ಬಸವ ವಾಹನ, ಹುಲಿವಾಹನ. ರುದ್ರಾಕ್ಷಿ ಮಂಟಪ, ಉರುಳು ಸೇವೆ, ಪಂಜಿನ ಸೇವೆ, ಬೆಳ್ಳಿ - ಚಿನ್ನದ ರಥೋತ್ಸವ ಮುಂತಾದ ಸೇವೆಗಳಲ್ಲಿ ಭಾಗವಹಿಸಿದರು. ಮಾದೇಶ್ವರ ಸ್ವಾಮಿ ಮೂರ್ತಿಯನ್ನು ಅರ್ಚಕರು ಫಲ ಪುಷ್ಪಗಳಿಂದ ಸಿಂಗರಿಸಿ, ಗಂಧಾಭಿಷೇಕ, ರುದ್ರಾಭಿಷೇಕ, ಕುಂಕುಮಾರ್ಚನೆ, ಬಿಲ್ವಾರ್ಚನೆ, ಮಹಾ ಮಂಗಳಾರತಿಯನ್ನು ನೆರವೇರಿಸಿದದರು. ಭಕ್ತರಿಗೆ ಸರದಿ ಸಾಲಿನಲ್ಲಿ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಅನ್ನ ದಾಸೋಹದ ವ್ಯವಸ್ಥೆ ಇತ್ತು. ಮಳೆ-ಸಂಚಾರ ಸ್ಥಗಿತ ಎಡೆಬಿಡದೆ ಸುರಿಯುತಿದ್ದ ಮಂಜು ಮುಸುಕಿದ ಮಳೆಯಿಂದಾಗಿ ತಾಳುಬೆಟ್ಟದಿಂದ ಮಹದೇಶ್ವರ ಬೆಟ್ಟದ ಮಾರ್ಗ ಮಧ್ಯೆ ಇರುವ ತಿರುವಿನಲ್ಲಿ ಬಸ್ಸುಗಳು ಸಿಲುಕಿ ಕೆಲ ಗಂಟೆ ಸಂಚಾರ ಅಸ್ತವ್ಯಸ್ತವಾಗಿತ್ತು. ದ್ವಿಚಕ್ರ ಲಘು ವಾಹನ ಪ್ರಯಾಣಿಕರು ಸಂಚರಿಸಲು ಹರ ಸಾಹಸ ಪಟ್ಟರು. ಮಹದೇಶ್ವರ ಬೆಟ್ಟಕ್ಕೆ ವಿಷೇಶ ದಿನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ವಾಹನಗಳು ಬರುವುದರಿಂದ ಸುಗಮ ಸಂಚಾರಕ್ಕೆ ಜಿಲ್ಲಾಡಳಿತ ವ್ಯವಸ್ಥೆ ಮಾಡಬೆಕು ಎಂದು ಭಕ್ತರು ತಿಳಿಸಿದರು. ಜಿಟಿ ಜಿಟಿ ಮಳೆಯಲ್ಲಿ ವಿವಿಧ ಸೇವೆಯನ್ನು ನೆರವೇರಿಸುತ್ತಿರುವ ಭಕ್ತರು 'ಮಳೆ ಬಿಸಿಲಿಗೆ ಚಾವಣಿ ನಿರ್ಮಿಸಿ' ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಕೋಟಿ ಕೋಟಿ ಹಣ ಭಕ್ತರಿಂದ ಬರುತ್ತಿದ್ದರೂ ಮೂಲ ಸೌಕರ್ಯಗಳು ಮರೀಚಿಕೆಯಾಗಿಯೇ ಉಳಿದಿರುವುದು ಭಕ್ತರಲ್ಲಿ ಅಸಮದಾನವನ್ನು ಉಂಟುಮಾಡಿದೆ.

> ಬೆಂಗಳೂರಿನಿಂದ ದೇವಾಲಯಕ್ಕೆ ಬಂದಿದ್ದ ರಂಗಸ್ವಾಮಿ ಸಂಗಡಿಗರು ಮಾತನಾಡಿ 'ಮಳೆಗಾಲದಲ್ಲಿ ಇಲ್ಲಿ ಕೂರಲು ಹಾಗೂ ನಿಲ್ಲಲ್ಲು ಸೌಲಭ್ಯ ಕಲ್ಪಿಸಿಲ್ಲ. ಹೆಂಗಸರು ಮಕ್ಕಳು ಮಳೆಯಲ್ಲಿಯೇ ನಿಂತು ದರ್ಶನವನ್ನು ಪಡೆಯುವಂತಾಯಿತು. ನಿನ್ನೆ ರಾತ್ರಿಯಿಂದ ಕರೆಂಟ್ ಇಲ್ಲದೆಕೆಲ ಶೌಚಾಲಯಗಳನ್ನು ಮುಚ್ಚಲಾಗಿತ್ತು. ಇದರಿಂದಾಗಿ ನಮ್ಮಂಥ ಭಕ್ತರ ಪಾಡು ಮಾದಪ್ಪನೇ ಬಲ್ಲ ಎಂಬಂತಾಗಿತ್ತು. ಅಧಿಕಾರಿಗಳು ಸೌಕರ್ಯ ಕಲ್ಪಿಸಬೇಕು. ದೇವಾಲಯದ ಸುತ್ತ ಮಳೆ ಹಾಗೂ ಬಿಸಿಲಿಗೆ ಶಾಶ್ವತವಾಗಿ ನೆರಳು ಚಾವಣಿ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ಹೊಸ ರೈಲು ಮಾರ್ಗ: ಅಪ್‌ಡೇಟ್ ಕೊಟ್ಟ ಸಚಿವರು

• ಉದಯವಾಹಿನಿ, ಚಿಕ್ಕಬಳ್ಳಾಪುರ,

ಚಿಕ್ಕಬಳ್ಳಾಪುರ-ಪುಟ್ಟಪರ್ತಿ ನಡುವಿನ ನೇರ ರೈಲು ಮಾರ್ಗ ಯೋಜನೆ ಕುರಿತು ಮತ್ತೆ ಚರ್ಚೆಗಳು ಆರಂಭವಾಗಿದೆ. ಈ ಮಾರ್ಗದಿಂದ ಬೆಂಗಳೂರು ನಗರಕ್ಕೂ ಅನುಕೂಲವಾಗಲಿದ್ದು, ಯಲಹಂಕ-ಚಿಕ್ಕಬಳ್ಳಾಪುರ ಮಾರ್ಗವನ್ನು ಪುಟ್ಟಪರ್ತಿಗೆ ಸಂಪರ್ಕಿಸಬೇಕು ಎಂದು ಹಲವಾರು ವರ್ಷಗಳಿಂದ ಬೇಡಿಕೆ ಇಡಲಾಗುತ್ತಿದೆ. ಆದರೆ ರೈಲ್ವೆ ಇಲಾಖೆ ಈ ಕುರಿತು ಯಾವುದೇ ತೀರ್ಮಾನವನ್ನು ಇನ್ನೂ ಸಹ ಕೈಗೊಂಡಿಲ್ಲ. ಲೋಕಸಭೆ ಕಲಾಪದಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಚಿಕ್ಕಬಳ್ಳಾಪುರ-ಪುಟ್ಟಪರ್ತಿ ನಡುವಿನ ನೇರ ರೈಲು ಮಾರ್ಗದ ಕುರಿತು ಮಾತನಾಡಿದ್ದಾರೆ. ಚಿಕ್ಕಬಳ್ಳಾಪುರ-ಪುಟ್ಟಪರ್ತಿ ನಡುವೆ ನೇರ ರೈಲು ಮಾರ್ಗ ನಿರ್ಮಾಣ ಮಾಡುವ ಪ್ರಸ್ತಾವನೆ ಸದ್ಯಕ್ಕೆ ಇಲಾಖೆ ಮುಂದಿಲ್ಲ ಎಂದು ಸ್ಪಷ್ಟಪಡಿಸಿದರು. ಸದ್ಯ ಧರ್ಮಾವರಂ-ಪುಟ್ಟಪರ್ತಿ-ಪೆನುಕೊಂಡ, ಧರ್ಮಾವರಂ-ಮಕ್ಕಾಜಿಪಲ್ಲಿ-ಪೆನುಕೊಂಡ ರೈಲು ಮಾರ್ಗದ ಮೂಲಕ ಪುಟ್ಟಪರ್ತಿಗೆ ರೈಲು ಸಂಪರ್ಕವಿದೆ. ಇದು ಯಲಹಂಕ-ಬೆಂಗಳೂರು ಮಾರ್ಗಕ್ಕೂ ಸಂಪರ್ಕಿಸುತ್ತದೆ.ಹಲವಾರು ವರ್ಷಗಳಿಂದ ಯಲಹಂಕ-ಚಿಕ್ಕಬಳ್ಳಾಪುರ ಮಾರ್ಗವನ್ನು ಪುಟ್ಟಪರ್ತಿಗೆ ಸಂಪರ್ಕಿಸಬೇಕು ಎಂದು ಬೇಡಿಕೆ ಇಡಲಾಗಿದೆ.ಇದರಿಂದಾಗಿ ಯಲಹಂಕ-ದೊಡ್ಡಬಳ್ಳಾಪುರ-ಪೆನುಕೊಂಡ-ಧರ್ಮಾವರಂ ಮಾರ್ಗಕ್ಕೆ ಪರ್ಯಾಯ ಮಾರ್ಗ ಸಿಗಲಿದೆ ಎಂದು ಒತ್ತಾಯಿಸಲಾಗುತ್ತಿದೆ.

ಸಮೀಕ್ಷೆಯು ನಡೆದಿದೆ: ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಲೋಕ ಸಭೆಯಲ್ಲಿ, ಪ್ರಸ್ತಾವಿತ ಚಿಕ್ಕಬಳ್ಳಾಪುರ-ಶ್ರೀ ಸತ್ಯ ಸಾಯಿ ಪ್ರಶಾಂತಿ ನಿಲಯಂ (ಪುಟ ಪರ್ತಿ) 103 ಕಿ ಮೀ ಮಾರ್ಗ ನಿರ್ಮಾಣಕೆ ಸಮೀಕ್ಷೆ ನಡೆದಿದೆ. ಆದರೆ ಕಡಿಮೆ ಸಂಚಾರ ದಟ್ಟಣೆಯ ಕಾರಣ ಸದ್ಯಕ್ಕೆ ಮಾರ್ಗ ನಿರ್ಮಾಣದ ಯೋಜನೆ ಇಲ್ಲ ಎಂದು ಹೇಳಿದ್ದಾರೆ. ಪೂರಕವಾಗಿ ಸಚಿವರು, ಚಿಕ್ಕಬಳ್ಳಾಪುರ-ಗೌರಿಬಿದನೂರು 44 ಕಿ. ಮೀ. ರೈಲು ಮಾರ್ಗ ನಿರ್ಮಾಣಕ್ಕೆ ಕಾರ್ಯಸಾಧ್ಯತಾ ವರದಿಯನ್ನು ತಯಾರು ಮಾಡಲು ಅನುಮತಿ ನೀಡಲಾಗಿದೆ. ಆದರೆ ಯೋಜನೆಗೆ ಖರ್ಚು, ವೆಚ್ಚ ಸಂಪರ್ಕದಿಂದ ಆಗುವ ಆರ್ಥಿಕ ಲಾಭಗಳು, ಪರಿಸರದ ಮೇಲಾಗುವ ಪರಿಣಾಮಗಳನ್ನು ಗಮನಿಸಿ ಒಪ್ಪಿಗೆ ನೀಡಲಾಗುತ್ತದೆ ಎಂದು ಸಚಿವರು ಸ್ಪಷ್ಟಪಡಿಸಿದರು. ಕರ್ನಾಟಕದಲ್ಲಿ ರೈಲು ಯೋಜನೆಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ. 2021 ರಿಂದ 2024ರ ತನಕ 56 ಯೋಜನೆಗಳ ಸಮೀಕ್ಷೆಗೆ ಒಪ್ಪಿಗೆ ನೀಡಲಾಗಿದೆ. ಇವುಗಳಲ್ಲಿ 19 ಹೊಸ ರೈಲು ಮಾರ್ಗಗಳು, 37 ದ್ವಿಪಥ ಯೋಜನೆಗಳು ಸೇರಿದ್ದು ಇವುಗಳು ಸುಮಾರು 6,159 ಕಿ. ಮೀ. ಒಳಗೊಂಡಿದೆ.

ಮೆಟ್ರೋ ರೈಲು ಸೇವೆ ಕಲ್ಪಿಸಲು ಡಿಪಿಆರ್ ಪರಿಶೀಲನೆ ನಡೀತಿದೆ: ಪರಮೇಶ್ವರ್

• ಉದಯವಾಹಿನಿ, ತುಮಕೂರು

ಜಿಲ್ಲೆಯು ಬಹಳ ವೇಗವಾಗಿ ಬೆಳೆಯಲಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಮೆಟ್ರೋ ರೈಲು ಸೇವೆ ಕಲ್ಪಿಸಲು ಸಮಗ್ರ ಯೋಜನಾ ವರದಿಯ ಪರಿಶೀಲನೆ ನಡೆಯುತ್ತಿದೆ ಎಂದು ಜಿ. ಪರಮೇಶ್ವರ್ ತಿಳಿಸಿದರು.

ತುಮಕೂರಿನಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾವಿರಾರು ಕೋಟಿ ರೂ.ಗಳ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಪರಮೇಶ್ವರ್ ಮಾತನಾಡಿದರು. ತುಮಕೂರು ಜಿಲ್ಲೆಯಲ್ಲಿ ಇವತ್ತಿನ ಕಾರ್ಯಕ್ರಮ ಇತಿಹಾಸ ಸೃಷ್ಟಿ ಮಾಡಿದೆ. ಇವತ್ತು 1,250 ಕೋಟಿ ರೂ. ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. 1.5 ಲಕ್ಷ ಫಲಾನುಭವಿಗಳಿಗೆ ಸವಲತ್ತು ಹಂಚಿಕೆಯಾಗಿದೆ. ಕಂದಾಯ ಇಲಾಖೆಯಿಂದ 2 ಸಾವಿರ ಹಕ್ಕು ಪತ್ರ ಕೊಟ್ಟಿದ್ದೇವೆ. 891 ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿದ್ದೇವೆ. ತುಮಕೂರು ಬೆಂಗಳೂರಿನ ಭಾಗವಾಗಿ ಅಭಿವೃದ್ಧಿಯಾಗುತ್ತಿದೆ ಎಂದು ಶ್ಲಾಘಿಸಿದರು.

ಈಗಾಗಲೇ ಏಷ್ಯಾ ಖಂಡದಲ್ಲೇ ದೊಡ್ಡ ಕೈಗಾರಿಕಾ ಘಟಕ ಸ್ಥಾಪನೆಗೆ ಕ್ರಮ ಆಗಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಅಡಿಗಲ್ಲು ಹಾಕಲಾಗಿದೆ.

ಉದಯವಾಹಿನಿ ಚಿತ್ರ

ಈ ಮೂಲಕ ತುಮಕೂರು ವಿಶ್ವದ ಭೂಪಟದಲ್ಲಿ ಕಾಣಿಸಿಕೊಳ್ಳಲಿದೆ. ತುಮಕೂರು ಜಿಲ್ಲೆಗೆ ಕಾಯಕಲ್ಪ ಮಾಡುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಸಹಕಾರ ನೀಡುತ್ತಿದೆ. 2023 ರಲ್ಲಿ ಈ ರಾಜ್ಯದ ಜನತೆಗೆ 5 ಗ್ಯಾರಂಟಿ ಭರವಸೆ ಕೊಟ್ಟಿದ್ದೆವು. ಆ ಐದು ಗ್ಯಾರಂಟಿ ಪರಿಪೂರ್ಣವಾಗಿ ಜಾರಿ ಮಾಡಿದ್ದು ಸಿದ್ದರಾಮಯ್ಯರ ಕಾಂಗ್ರೇಸ್ ಸರ್ಕಾರ. ಆದರೆ 10 ಕೆಜಿ ಅಕ್ಕಿ ಕೊಡಲು ಆಗಿಲ್ಲ, ಬದಲಾಗಿ ದುಡ್ಡು ಕೊಟ್ಟಿದ್ದೇವೆ ಎಂದು ನುಡಿದರು.

ಮುಂದಿನ ದಿನಗಳಲ್ಲಿ ತುಮಕೂರು ಜಿಲ್ಲೆ ಬಹಳ ವೇಗವಾಗಿ ಬೆಳೆಯಲಿ. ತುಮಕೂರು ಜಿಲ್ಲೆಗೆ ಮೆಟ್ರೋ ರೈಲು ಬರುವ ಕಾಮಗಾರಿಯ ಡಿಪಿಆರ್ ನಡೀತಿದೆ ಎಂದರು. ಅಲ್ಲದೇ ತುಮಕೂರು, ಬೆಂಗಳೂರಿನಿಂದ ಕೇವಲ 65 ಕಿಮಿ ದೂರದಲ್ಲಿದೆ. ಹಾಗಾಗಿ ತುಮಕೂರಿಗೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಆಗಬೇಕು. ರಾಜ್ಯದ 2ನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನ ಇಲ್ಲಿಗೆ ಕೊಡಬೇಕು ಎಂದು ಸಿಎಂ, ಡಿಸಿಎಂಗೆ ವೇದಿಕೆಯಲ್ಲೇ ಮನವಿ ಮಾಡಿದರು.

ಮುಂದುವರಿದು? ಪಾವಗಡದಲ್ಲಿ ಭದ್ರಾ ದಿಂದ ಕುಡಿಯುವ ನೀರು ಬಂದಿದೆ. ಸ್ಮಾರ್ಟ್ ಸಿಟಿ ಅಡಿಯಲ್ಲಿ ಕೆಲವೇ ಕೆಲವು ವಾರ್ಡ್ ಅಭಿವೃದ್ಧಿ ಆಗಿದೆ. ಇನ್ನುಳಿದ ವಾರ್ಡ್ ಅಭಿವೃದ್ಧಿಗೆ 500 ಕೋಟಿ ರೂ. ನೀಡಬೇಕು ಎಂದು ಕೋರಿದರು.

ನೌಕರಿ ಬಿಟ್ಟು ಸನ್ಯಾಸತ್ವ ದೀಕ್ಷೆ ಪಡೆಯಲು ಸಜ್ಜಾದ ಕೆಎಎಸ್

• ಉದಯವಾಹಿನಿ, ಮಂಡ್ಯ

ಸಕ್ಕರೆ ನಾಡು ಮಂಡ್ಯ ಜಿಲ್ಲೆಯಲ್ಲಿ ಸರ್ಕಾರಿ ನೌಕರಿ ಬಿಟ್ಟು ಸನ್ಯಾಸತ್ವ ದೀಕ್ಷೆ ಪಡೆಯಲು ಕೆಎಎಸ್ ಅಧಿಕಾರಿಯೊಬ್ಬರು ಮುಂದಾಗಿದ್ದಾರೆ.ಮಂಡ್ಯ ಜಿಲ್ಲೆಯ ಎಡಿಸಿಯಾಗಿ ಕಾರ್ಯನಿರ್ವಹಿಸುತ್ತಿರುವ ಎಚ್.ಎಲ್.ನಾಗರಾಜು ಅವರು ಇದೀಗ ನಾಗರೀಕ ಸೇವೆ ತೊರೆದು ಸನ್ಯಾಸತ್ವ ಸ್ವೀಕಾರಕ್ಕೆ ನಿರ್ಧಾರ ಮಾಡಿದ್ದಾರೆ.

ಸ್ವಯಂ ನಿವೃತ್ತಿ ಪಡೆದು ದೀಕ್ಷೆ ಸ್ವೀಕರಿಸಲಿರುವ ಮಂಡ್ಯ ಅಪರ ಜಿಲ್ಲಾಧಿಕ

ಅಂತರಾಳದಿಂದ... EDITORIAL

ಸಂಭಲ್ ಹಿಂಸಾಚಾರ ನ್ಯಾಯ ವ್ಯವಸ್ಥೆಯ ಪಾತ್ರವೆಷ್ಟು?

ಶಾಂತವಾಗಿ ಮಲಗಿದ್ದ ಮಗುವಿನ ಪಾದಕ್ಕೆ ಚೂರಿಯಿಂದ ಚುಚ್ಚಿ ಬಳಿಕ ಚೀರಾಡುತ್ತಿದ್ದ ಮಗುವಿನ ಗಾಯಕ್ಕೆ ತಾನೇ ಮುಲಾಮು ಹಚ್ಚಲು ಹೊರಟಂತಾಗಿದೆ ನ್ಯಾಯ ವ್ಯವಸ್ಥೆಯ ನಡೆಗಳು ಉತ್ತರ ಪ್ರದೇಶದ ಸಂಭಲ್‌ನಲ್ಲಿ ಪುರಾತನ ಮಸೀದಿಯೊಂದಕ್ಕೆ ಸಂಬಂಧಿಸಿ ದುರುದ್ದೇಶದಿಂದ ಹಾಕಿದ ಅರ್ಜಿಗೆ ಸ್ಪಂದಿಸಿ ತರಾತುರಿಯಿಂದ ಸರ್ವೇ ನಡೆಸಲು ಆದೇಶ ನೀಡಿ ಇಡೀ ಪ್ರದೇಶವನ್ನು ಹಿಂಸೆಗೆ ತಳ್ಳಿದ ಹೆಗ್ಗಳಿಕೆ ಅಲ್ಲಿನ ಸ್ಥಳೀಯ ನ್ಯಾಯಾಲಯಕ್ಕೆ ಸಲ್ಲಬೇಕು. 'ಸುಮಾರು 500 ವರ್ಷಗಳ ಹಿಂದಿನ ಮಸೀದಿಯ ಜಾಗದಲ್ಲಿ ದೇವಸ್ಥಾನವಿತ್ತು ಬಾಬರ್ ಇಲ್ಲಿರುವ ದೇವಸ್ಥಾನವನ್ನು ಒಡೆದು ಮಸೀದಿಯನ್ನು ನಿರ್ಮಿಸಿದ ಎನ್ನುವ ಬೀಸು ಹೇಳಿಕೆಯ ಅರ್ಜಿಯನ್ನೇ ಗಂಭೀರವಾಗಿ ಸ್ವೀಕರಿಸಿ ತಕ್ಷಣವೇ ಸರ್ವೇ ನಡೆಸಲು ನ್ಯಾಯಾಲಯ ಆದೇಶ ನೀಡಿದೆ. 500 ವರ್ಷಗಳ ಹಿಂದೆ ನಡೆದಿದೆ ಎನ್ನುವ ಘಟನೆಯನ್ನು ಮುಂದಿಟ್ಟುಕೊಂಡು ನ್ಯಾಯಾಲಯ ಸರ್ವೇ ನಡೆಸಲು ನೀಡಿರುವ ಆದೇಶ ಸಂವಿಧಾನ ವಿರೋಧಿಯಾದದ್ದು ಮಾತ್ರವಲ್ಲ ರಾಜಕೀಯ ದುರುದ್ದೇಶಗಳಿಂದ ಕೂಡಿದ್ದು ಎನ್ನುವುದು ಮೇಲ್ನೋಟಕ್ಕೇ ಗೊತ್ತಾಗಿ ಬಿಡುತ್ತದೆ. 1991ರ ಧಾರ್ಮಿಕ ಆರಾಧನಾ ಕಾಯ್ದೆಯ ಪ್ರಕಾರ 1947ರಿಂದ ಅಸ್ತಿತ್ವದಲ್ಲಿರುವ ಆರಾಧನಾ ಸ್ಥಳಗಳಲ್ಲಿ ಯಾವುದೇ ಹಸ್ತಕ್ಷೇಪ ನಡೆಸುವಂತಿಲ್ಲ. ಹೀಗಿದ್ದರೂ, ಅಲ್ಲಿ ಆತುರಾತುರವಾಗಿ ಸಮೀಕ್ಷೆ ನಡೆಸಲು ಸ್ಥಳೀಯ ನ್ಯಾಯಾಲಯಕ್ಕೆ ಅರ್ಜಿದಾರರು ಸಲ್ಲಿಸಿದ ದಾಖಲೆಗಳಾದರೂ ಏನು ಎಂದು ಪ್ರಶ್ನಿಸಿದರೆ ಅದಕ್ಕೆ ಉತ್ತರ ದೊರಕುವುದಿಲ್ಲ ಯಾವುದೋ ಕಾಗಕ್ಕ ಗುಬ್ಬಕ್ಕ ಕತೆಯನ್ನು ಹಿಡಿದುಕೊಂಡು ಯಾವನೋ ಒಬ್ಬ ನ್ಯಾಯಾಲಯದ ಮೆಟ್ಟಿಲನ್ನೇರಿದರೆ, ಆ ಕತೆಗೆ ಬೇಕಾದ ಸಾಕ್ಷ್ಯಗಳು ಅಲ್ಲಿಸಿಗುತ್ತವೆಯೋ ಹುಡುಕಿ ಎಂದು ಆದೇಶ ನೀಡುವುದು ನ್ಯಾಯದೆ ಅಪಹಾಸ್ಯವಾಗಿದೆ. ನ್ಯಾಯಾಲಯ ಆದೇಶ ನೀಡಿದ ಬೆನ್ನಿಗೇ ಪೊಲೀಸರ ನೇತೃತ್ವದಲ್ಲಿ ಅಧಿಕಾರಿಗಳು ಎರಡೆರಡು ಬಾರಿ ಸಮೀಕ್ಷೆಗೆ ಮುಂದಾಗಿ ಸ್ಥಳೀಯರನ್ನು ಪ್ರಚೋದಿಸಲು ಗರಿಷ್ಠ ಪ್ರಯತ್ನವನ್ನು ನಡೆಸಿ ಯಶಸ್ವಿಯಾಗಿದ್ದಾರೆ. ನ್ಯಾಯ ವ್ಯವಸ್ಥೆ ರಾಜಕಾರಣಿಗಳು ಮತ್ತು ಸ್ಥಳೀಯ ಪೊಲೀಸರ ಜಂಟಿ ಪ್ರಯತ್ನದಲ್ಲಿ ಸಂಭಲ್ ಪ್ರದೇಶ ಹಿಂಸಾಗ್ರಸ್ತವಾಯಿತು ಮಾತ್ರವಲ್ಲ ಏಳು ಮಂದಿ ಅಮಾಯಕರು ಗುಂಡಿಗೆ ಬಲಿಯಾಗಬೇಕಾಯಿತು.

> **ಅಷ್ಟೇರ್ ದರ್ಗಾ ಒಂದಾನೊಂದು ಕಾಲದಲ್ಲಿ ಶಿವದೇವಾಲಯವಾಗಿತ್ತು. ಅದುದರಿಂದ ಅದನ್ನು ಮತ್ತೆ ಶಿವದೇವಾಲಯ ಎಂದು ಘೋಷಿಸಿ ಹಿಂದೂಗಳ ಕೈಗೆ ಒಪ್ಪಿಸಬೇಕು' ಎಂದು ಹಿಂದೂ ಸೇನಾದ ರಾಷ್ಟ್ರಾಧ್ಯಕ್ಷ ಎಂದು ಹೇಳಿಕೊಳ್ಳುತ್ತಿರುವ ವಿಷ್ಣುಗುಪ್ತಾ ಎಂಬಾತ ಸಲ್ಲಿಸಿದ ಅರ್ಜಿಗೆ ಸ್ಪಂದಿಸಿ ನ್ಯಾಯಾಲಯ ದರ್ಗಾ ಸಮಿತಿಗೆ ಸಮನ್ಸ್ ನೀಡಿದೆ. ಈ ಹಿಂದೆಲ್ಲ ರಾಜಕಾರಣಿಗಳು ಹಚ್ಚಿದ ಬೆಂಕಿ ಕಿಡಿಯನ್ನು ನಂದಿಸಲು ಜನರು ನೀರಿಗೆಂದು ನ್ಯಾಯಾಲಯಕ್ಕೆ ಕೊಡ ಹಿಡಿದು ಧಾವಿಸುತ್ತಿದ್ದರೆ, ನ್ಯಾಯಾಲಯವೇ ಬೆಂಕಿ ಹಚ್ಚಲು ಬೆಂಕಿ ಪೊಟ್ಟಣ ಹಂಚುವ ಕೆಲಸಕ್ಕೆ ಮುಂದಾಗಿದೆಯೇ ಎನ್ನುವ ಕಳವಳವನ್ನು ಜನಸಾಮಾನ್ಯರು ವ್ಯಕ್ತಪಡಿಸುವಂತಾಗಿದೆ.**

ಇದೀಗ ಸುಪ್ರೀಂಕೋರ್ಟ್ ಸ್ಥಳೀಯ ವಿಚಾರಣಾ ನ್ಯಾಯಾಲಯದ ಕಲಾಪಗಳಿಗೆ ತಡೆ ನೀಡಿದ್ದು ತಾಂತಿ ಕಾಪಾಡಲು ಈ ಪ್ರದೇಶ ಸರಕಾರಕ್ಕೆ ನಿರ್ದೇಶನವನ್ನು ನೀಡಿದೆ. ಸುಪ್ರೀಂಕೋರ್ಟ್ ಆದೇಶ ಹೊರಬಿದ್ದ ಬೆನ್ನಿಗೇ ಉತ್ತರ ಪ್ರದೇಶ ಸರಕಾರ ಎಬಿ ಮಂದಿಯ ಸಾವಿಗೆ ಕಾರಣವಾದ ಹಿಂಸಾಚಾರದ ತನಿಖೆಗೆ ಆಯೋಗವೊಂದನ್ನು ರಚನೆ ಮಾಡಿದೆ. ವಿಪರ್ಯಾಸವೆಂದರೆ, ವಿಚಾರಣೆಗೆ ತಡೆ ನೀಡಿದ ಇದೇ ಸುಪ್ರೀಂಕೋರ್ಟ್, ಈ ಹಿಂದೆ ವಾರಣಾಸಿಯ ಜ್ಞಾನವ್ಯಾತಿ ಮಸೀದಿಗೆ ಸಂಬಂಧಿಸಿ ಸಮೀಕ್ಷೆಗೆ ಆದೇಶ ನೀಡಿತ್ತು ಅಂದು ನೀಡಿದ ತೀರ್ಪೇ ಸಂಭಲ್‌ನಲ್ಲಿ ನಡೆಯುತ್ತಿರುವ ಅವಾಂತರಗಳಿಗೆ ಪರೋಕ್ಷ ಕಾರಣವಾಗಿದೆ. ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎಂಬಂತೆ, ಯಾವಾಗ ಜ್ಞಾನ ವ್ಯಾಪಿ ಮಸೀದಿಯ ಸಮೀಕ್ಷೆಗೆ ಅಂದಿನ ಮುಖ್ಯ ನ್ಯಾಯಾಧೀಶ ಚಂದ್ರಚೂಡ್ ಅವರು ಆದೇಶವನ್ನು ನೀಡಿದರೋ, ಮುಂದಿನ ದಿನಗಳಲ್ಲಿ ಕಂಡ ಕಂಡ ಮಸೀದಿಗಳಲ್ಲೆಲ್ಲ ಸಂಘಪರಿವಾರದ ಮುಖಂಡರಿಗೆ ತಮ್ಮ ದೇವಸ್ಥಾನಗಳು ಗೋಚರಿಸತೊಡಗಿ, ಸಮೀಕ್ಷೆ ನಡೆಸಲು ನ್ಯಾಯಾಲಯಕ್ಕೆ ಅರ್ಜಿ ಹಾಕತೊಡಗಿದರು. ಸುಪ್ರೀಂಕೋರ್ಟ್ ಅಂದು ನೀಡಿದ ತೀರ್ಪಿನ ಬಲದ ಮೇಲೆಯೇ ಸಂಭಲ್‌ನಲ್ಲೂ ಸ್ಥಳೀಯ ನ್ಯಾಯಾಲಯ ಅನ್ಯಾಯದ ತೀರ್ಪನ್ನು ನೀಡಿತು.

ಯಾವುದೇ ಮಸೀದಿಯ ಮೇಲೆ ಯಾರೇ ಹಕ್ಕು ಸಾಧಿಸಲು ಯಾವುದೇ ಅಧಿಕೃತ ದಾಖಲೆಗಳ ಅಗತ್ಯವೇ ಇಲ್ಲ ಎನ್ನುವ ವಾತಾವರಣ ನಿರ್ಮಾಣವಾದದ್ದು ಚಂದ್ರಚೂಡ್ ಅವರು ನೀಡಿರುವ ಆದೇಶದ ಬಳಿಕ ಇದೀಗ ಅದೇ ಸುಪ್ರೀಂಕೋರ್ಟ್ ಬಳಿ, ಸಂಭಲ್‌ನಲ್ಲಿ ಸ್ಥಳೀಯ ನ್ಯಾಯಾಲಯದ ಅನ್ಯಾಯದ ಬಗ್ಗೆ ತಮ್ಮ ಅಳಲನ್ನು ತೋಡಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸಂಭಲ್ ಹಿಂಸಾಚಾರದ ಚೆನ್ನಿಗೇ, ದೇಶದ ಖ್ಯಾತ ಸೂಫಿ ಸಂತ ಸ್ವಾಜಾ ಮೊಯಿನುದ್ದೀನ್ ಚಿಸ್ತಿ ಸಮಾಧಿ ಸ್ಥಳ ಅಥವಾ ಅಜೇರ್ ಶರೀಫ್ ದರ್ಗಾವನ್ನು ಶಿವದೇವಾಲಯ ಎಂದು ಘೋಷಿಸುವಂತೆ ಕೋರಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಲು ರಾಜಸ್ಥಾನದ ನ್ಯಾಯಾಲಯವೊಂದು ಸಮ್ಮತಿಸಿದೆ ಮಾತ್ರವಲ್ಲ, ದರ್ಗಾ ಸಮಿತಿಗೆ ನೋಟಿಸ್ ಜಾರಿ ಮಾಡಿದೆ. ಶತಮಾನಗಳಿಂದ ಸರ್ವ ಧರ್ಮೀಯರನ್ನು ತನ್ನೆಡೆಗೆ ಸೆಳೆಯುತ್ತಾ ಸೌಹಾರ್ದ ಕೇಂದ್ರವಾಗಿ ಗುರುತಿಸಲ್ಪಡುತ್ತಿರುವ ಅಜೇರ್ ದರ್ಗಾಕ್ಕೂ ದ್ವೇಷದ ಕಿಡಿ ಹಚ್ಚಲು ಸ್ವತಃ ನ್ಯಾಯಾಲಯವೇ ತುದಿಗಾಲಲ್ಲಿ ನಿಂತಿರುವುದು ವರ್ತಮಾನದ ದುರಂತವಾಗಿದೆ. ಸಂಭಲ್‌ನಲ್ಲಿ ಹಿಂಸಾಚಾರ ನಡೆಯಲು ನ್ಯಾಯವ್ಯವಸ್ಥೆಯು ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟರೆ, ಇತ್ತ ಹಿಂಸಾಚಾರ ನಡೆಯದಂತೆ ತಡೆಯಬೇಕಾದ ಕಾನೂನು ವ್ಯವಸ್ಥೆಯೇ ಹಿಂಸೆಗೆ ಪ್ರಚೋದನೆ ನೀಡಿ ಏಳು ಜನರ ಸಾವಿಗೆ ಕಾರಣವಾಯಿತು.

ಸ್ಥಳೀಯರು ಪ್ರತಿಭಟನೆಗಿಳಿದಾಗ, ಅವರನ್ನು ತಡೆಯಲು ಯದ್ವಾತದ್ವಾ ಗೋಲಿಬಾರ್ ನಡೆಸಿದ ಪರಿಣಾಮವಾಗಿ ಸುಮಾರು ಏಳು ಮಂದಿ ಮೃತಪಟ್ಟರು. ಇದೀಗ ಮಸೀದಿ ಸರ್ವೇಗೆ ಸುಪ್ರೀಂಕೋರ್ಟ್‌ನಿಂದ ತಡೆ ಬಿದ್ದಿದೆಯಾದರೂ, ಪೊಲೀಸರ ಮೂಲಕವೇ ನಡೆದ ಸಾವು ನೋವುಗಳ ಹೊಣೆಯನ್ನು ಯಾರು ಹೊರಬೇಕು ಎನ್ನುವುದರ ಬಗ್ಗೆ ಗೊಂದಲವಿದೆ. ಸಾವುಗಳಿಗೆ ಪ್ರತಿಭಟನಾಕಾರರೇ ಹೊಣೆ ಎಂದು ಪೊಲೀಸರು ಹೇಳುತ್ತಿದ್ದಾರೆ. ಅಕ್ರಮ ಬಂದೂಕುಗಳಿಂದ ಗುಂಡುಗಳು ಹಾರಿವೆ ಎನ್ನುವುದು ಅವರ ಸ್ಪಷ್ಟನೆ. ಆದರೆ ಸತ್ಯಾಸತ್ಯತೆ ಬಹಿರಂಗವಾಗಬೇಕಾದರೆ ಸ್ವತಂತ್ರ ತನಿಖಾ ತಂಡವು ಈ ಬಗ್ಗೆ ವಿಚಾರಣೆ ನಡೆಸಬೇಕು.

• ಹಿಂದಿನ ಸಂಚಿಕೆಯಿಂದ 30 ನೆಯ ಅಧ್ಯಾಯ

ಇಕ್ಷಾಕುವಿನ ಕೃಪೆಯಿಂದ ವಿಶಾಲಪುರಿಯ ಅರಸುಗಳೆಲ್ಲರೂ ಧರ್ಮಾತ್ಮರಾಗಿ ಅತಿಪರಾಕ್ರಮಿಗಳಾಗಿ ದೀರ್ಘಾಯುಷ್ಮಂತರಾಗಿರುವರು. ಇದೀಗ ಈ ದೇಶದ ವೃತ್ತಾಂತವು ರಘುನಾಥ, ನಾವು ಈ ರಾತ್ರಿ ವಿಶಾಲಪುರಿಯಲ್ಲಿದ್ದು ನಾಳೆ ಜನಕರಾಯನ ಪಟ್ಟಣಕ್ಕೆ ಹೋಗಿ ಆತನನ್ನು ನೋಡಿಕೊಂಡು ಬರೋಣ ಎಂದು ವಿಶ್ವಾಮಿತ್ರನು ನುಡಿದನು ಆ ಸಮಯದಲ್ಲಿ ವಿಶಾಲಪುರಿಯಲ್ಲಿದ್ದ ಸುಮತಿ ಎಂಬ ರಾಜನು, ವಿಶ್ವಾಮಿತ್ರಮುನೀಶ್ವರನು ಬಂದ ವೃತ್ತಾಂತವನ್ನು ಕೇಳಿ ತನ್ನ ಪುರೋಹಿತ ಬಂಧುಗಳ ಸಹಿತ ಇದಿರುಗೊಂಡು ಅಭಿವಂದಿಸಿದನು. ಅನಂತರ ಅರ್ಘ್ಯಪಾದ್ಯಾದಿ ಸತ್ಕಾರಗಳನ್ನು ಮಾಡಿ ಕುಶಲವಾರ್ತೆಯನ್ನು ಕೇಳಿ ಕೈ ಮುಗಿದುಕೊಂಡು ಮುನೀಶ್ವರರೆ, ನಿಮ್ಮ ಬರುವಿಕೆಯಿಂದ ನಿಮ್ಮ ಕೃಪೆಗೆ ನಾನು ಪಾತ್ರನಾಗಿ ಧನ್ಯನಾದೆನು ನೀವು ನನ್ನ ದೃಷ್ಟಿಗೋಚರರಾದ ಕಾರಣ ಲೋಕದಲ್ಲಿ ನನ್ನಂಥ ಪುಣ್ಯಾತ್ಮನಿಲ್ಲ ಎಂದು ನುಡಿದು ಅತಿಥಿ ಸತ್ಕಾರಗಳನ್ನು ಮಾಡಿದನು

ಅಹಲ್ಯಾ ದೇವಿಗೆ ಶಾಪ ಬಂದ ವೃತ್ತಾಂತ

ಅನಂತರ ಸುಮತಿಯು ವಿಶ್ವಾಮಿತ್ರನನ್ನು ಕುರಿತು ಮುನೀಶ್ವರರೆ, ಇವರು ಯಾರು ಈ ಕುಮಾರರು ದೇವೇಂದ್ರನಿಗೆ ಸಮಾನ ಪರಾಕ್ರಮವುಳ್ಳವರಾಗಿ ಗಜಸಿಂಹಗಳ ಹಾಗೆಯೂ ವೃಷಭ ಹೆಬ್ಬುಲಿಗಳ ಹಾಗೆಯೂ ಇದ್ದಾರೆ ಇವರು ಮಹಾಪರಾಕ್ರಮವುಳ್ಳವರಾಗಿ ಕಾಣುತ್ತಾರೆ. ಕಮಲದ ಎಸಳುಗಳೋಪಾದಿಯಲ್ಲಿ ವಿಶಾಲವಾದ ಕಣ್ಣುಗಳುಳ್ಳವರಾಗಿ, ಖಡ್ಗ ಬಿಲ್ಲು ಬತ್ತಳಿಕೆಗಳನ್ನು ಧರಿಸಿಕೊಂಡಿದ್ದಾರೆ ರೂಪದಲ್ಲಿ ಅಶ್ವಿನೀದೇವತೆಗಳ ಹಾಗೆ ನವಯೌವನಸಂಪನ್ನರಾಗಿದ್ದಾರೆ ದೇವಲೋಕದಿಂದಿಳಿದು ಬಂದು ಭೂಲೋಕದಲ್ಲಿರುವ ದೇವತೆಗಳ ಹಾಗಿದ್ದಾರೆ ಮಾಂದಳಿರಿನ ಹಾಗೆ ಇರುವ ಕೆಂಪಾದ ವಸ್ತ್ರಗಳಿಂದ ಅಲಂಕರಿಸಲ್ಪಟ್ಟವರಾಗಿ ಬಾಲಸೂರನನ್ನು ಹೋಲುವ ಕಾಂತಿಯುಳ್ಳವರಾಗಿ ಚಂದ್ರನ ಹಾಗೆ ಕಣ್ಣುಗಳಿಗೆ ಮನೋಹರರಾಗಿದ್ದಾರೆ ಚಂದ್ರ ಸೂರರು ತಮ್ಮ ಪ್ರಕಾಶದಿಂದ ಅಂತರಿಕ್ಷಮಾರ್ಗವನ್ನು ಬೆಳಗಿಸುವಂತೆ ಈ ಕುಮಾರರು ತಮ್ಮ ತನುಕಾಂತಿಯಿಂದ ಈ ಪ್ರದೇಶವನ್ನು ಪ್ರಕಾಶಮಾಡುತ್ತಿದ್ದಾರೆ ಇವರು ಕಾಲುನಡೆಯಿಂದ ಹೇಗೆ ಬಂದರು ಇವರಿಬ್ಬರೂ ಅನ್ನೋ ರೂಪಲಾವಣ್ಯಗಳಿಂದ ಸಮಾನರಾಗಿದ್ದಾರೆ ಉತ್ತಮ ವಾದ ಆಯುಧಗಳನ್ನು ಧರಿಸಿಕೊಂಡು ಇವರು ಯಾವಕಾರಣದಿಂದ ಇಲ್ಲಿಗೆ ಒಂದರು

ಮುಂದುವರಿಯುವುದು...

ದೊಡ್ಡಬಳ್ಳಾಪುರದಲ್ಲಿ ಹಿಂದೂ ರಾಷ್ಟ್ರ-ಜಾಗೃತಿ ಸಭೆ ಸಂಪನ್ನ

ಬಾಂಗ್ಲಾದೇಶವನ್ನು ಮುಸ್ಲಿಂ ದೇಶಗಳಾಗಿ ವಿಂಗಡಿಸಿದರು ಆದರೆ ಭಾರತವನ್ನು ಜ್ಯಾತ್ಯತೀತ ದೇಶವೆಂದು ಘೋಷಣೆ

• ಉದಯವಾಹಿನಿ, ದೊಡ್ಡಬಳ್ಳಾಪುರ

ಅಖಂಡ ಭಾರತವನ್ನು ಹಿಂದೂ ರಾಷ್ಟ್ರ ಎಂದು ಘೋಷಿಸಲು ಸ್ವಾತಂತ್ರ್ಯ ಪೂರ್ವದಲ್ಲಿ ಚಿಂತನೆಯಾಗಿತ್ತು, ಆದರೆ ಸ್ವಾತಂತ್ರ್ಯದ ನಂತರ ಭಾರತವನ್ನು 3 ಭಾಗಗಳಾಗಿ ಧರ್ಮದ ಆಧಾರದ ಮೇಲೆ ವಿಭಜನೆ ಮಾಡಿದರು. ಪಾಕಿಸ್ತಾನ, ಬಾಂಗ್ಲಾದೇಶವನ್ನು ಮುಸ್ಲಿಂ ದೇಶಗಳಾಗಿ ವಿಂಗಡಿಸಿದರು ಆದರೆ ಭಾರತವನ್ನು ಜ್ಯಾತ್ಯತೀತ ದೇಶವೆಂದು ಘೋಷಣೆ ಮಾಡಿದರು.

ಈಗ ನಾವು ಯಾವ ಸ್ಥಿತಿಗೆ ಬಂದಿದ್ದೇವೆ ಎಂದರೆ ಜಾತಿ ಜಾತಿಗಳ ನಡುವೆ ವೈಷಮ್ಯ ಸೃಷ್ಟಿಸಿ ಜಾತಿಗಳಿಂದ, ಜಾತಿಗಳಿಗಾಗಿ, ಜಾತಿಗಳಿಗೋಸ್ಕರ ನಮ್ಮ ದೇಶವನ್ನು ಆಳುವಂತೆ ಮಾಡಿಕೊಂಡಿದ್ದಾರೆ ಮತ್ತು ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಹೋರಾಟ ನಡೆಸಬೇಕೆಂದು ಶ್ರೀರಾಮ ಸೇನೆಯ ಬೆಂಗಳೂರು ಗ್ರಾಮಾಂತರ ಗೌರವ ಅಧ್ಯಕ್ಷರಾದ ಶ್ರೀ. ಶ್ರೀನಿವಾಸ ಗುರೂಜಿ ಅವರು ಪ್ರತಿಪಾದಿಸಿದರು. ಅವರು ದೊಡ್ಡ ಬಳ್ಳಾಪುರದ ಶ್ರೀರಾಮಾಂಜನೇಯ ಕಲ್ಯಾಣ ಮಂಟಪದಲ್ಲಿ ಹಿಂದೂ ಜನಜಾಗೃತಿ ಸಮಿತಿಯಿಂದ ಆಯೋಜಿಸಲಾದ ಹಿಂದೂ ರಾಷ್ಟ್ರ-ಜಾಗೃತಿ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಈ ವೇಳೆ ಹಿಂದೂ ಜನಜಾಗೃತಿ ಸಮಿತಿಯ ದಕ್ಷಿಣ ಕರ್ನಾಟಕ ಜಿಲ್ಲೆಗಳ ಸಮನ್ವಯಕರಾದ ಶ್ರೀ. ಚಂದ್ರ ಮೊಗವೀರ ಹಾಗೂ ಸನಾತನ ಸಂಸ್ಥೆಯ ಸೌ. ಶಾರದಾ ಯೋಗೇಶ್ ಸೇರಿದಂತೆ 150 ಕ್ಕೂ ಹೆಚ್ಚು ಧರ್ಮಾಭಿಮಾನಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ಹಿಂದೂ ರಾಷ್ಟ್ರ-ಜಾಗೃತಿ ಸಭೆ

ಅವರು ಮಾತನ್ನು ಮುಂದುವರಿಸಿ, ಈ ದೇಶದಲ್ಲಿ ಸರ್ ತನ್ ಸೇ ಜುದಾ , ಭಾರತವನ್ನು ತುಂಡು ತುಂಡು ಮಾಡುತ್ತೇನೆ ಎಂದವರಿಗೆ ಯಾವುದೇ ಕ್ರಮವನ್ನು ಸರಕಾರಗಳು ಕೈಗೊಳ್ಳುವುದಿಲ್ಲ ಆದರೆ ಹಿಂದೂ ಸಂಘಟನೆಗಳು ಜೈ ಶ್ರೀ ರಾಮ್ ಎಂದರೆ ಅವರ ಮೇಲೆ ದೂರುಗಳನ್ನು ಹಾಕುತ್ತಾರೆ. ದೇಶದಲ್ಲಿ ಲವ್ ಜಿಹಾದ್, ಹಲಾಲ್ ಜಿಹಾದ್, ಲ್ಯಾಂಡ್ ಜಿಹಾದ್‌ಗಳ ವಿರುದ್ಧ ಹಿಂದುಗಳೆಲ್ಲ ಒಂದಾಗಿ ಹೋರಾಡಬೇಕಾಗಿದೆ.

ಕರ್ನಾಟಕದಲ್ಲಿ 34,000 ದೇವಸ್ಥಾನಗಳು ಸರಕಾರಗಳು ವಶದಲ್ಲಿದ್ದು ಅದರ ನಿರ್ವಹಣೆಯನ್ನು ಸರಿಯಾಗಿ ನಡೆಸುತ್ತಿಲ್ಲ ಎಂದು ಅವರು ಆಗ್ರಹಿಸಿದರು. ಸಂವಿಧಾನದ 28 ಪರಿಚ್ಛೆದದಲ್ಲಿ ಯಾವುದೇ ಶಿಕ್ಷಣ ಸಂಸ್ಥೆ ಸರಕಾರದಿಂದ ಅನುದಾನ ಪಡೆದು ನಡೆಸುತ್ತಿದ್ದರೆ ಅದು ಧರ್ಮ ಪ್ರಚಾರ ನಡೆಸುವಂತಿಲ್ಲ ಹಾಗೂ 30 ನೆ ಪರಿಚ್ಛೇದ ಅಲ್ಪಸಂಖ್ಯಾತರು ಸರಕಾರದಿಂದ ಅನುದಾನ ಪಡೆದು ಮದರಸ, ಕಾನ್ವೆಂಟ್‌ಗಳನ್ನು ನಡೆಸಬಹುದು ಇದು ಹಿಂದೂಗಳು ನಡೆಸಿದರೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಇದರಲ್ಲಿ ಸಮಾನತೆ ಎಲ್ಲಿದೆ ಆದ್ದರಿಂದ ಸಮಾನತೆಯಿಂದ ನೋಡುವ ಹಿಂದೂ ರಾಷ್ಟ್ರ ಬೇಕಾಗಿದೆ.

ಈಗಾಗಲೇ ಅನೇಕ ಸಂತ ಮಹಾತ್ಮರು ಭಾರತದಲ್ಲಿ ಶೀಘ್ರ ಹಿಂದೂ ರಾಷ್ಟ್ರದ ಉದಯವಾಗಲಿದೆ ಎಂದು ತಮ್ಮ ಭವಿಷ್ಯವಾಣಿಯಲ್ಲಿ ನುಡಿದಿದ್ದಾರೆ, ಅದರಂತೆ 2025 ರ ಯುಗಾದಿಗೆ ನಾವು ಭಾರತದಲ್ಲಿ 'ಹಿಂದೂ ರಾಷ್ಟ್ರ'ದ ಧ್ವಜವನ್ನು ಸ್ಥಾಪಿಸಲು ಈಶ್ವರನ ಸಂಕಲ್ಪನೆಯ ಕಾರ್ಯದಲ್ಲಿ ಯಥಾಶಕ್ತಿ ಎಲ್ಲವನ್ನೂ ದಾನ ಮಾಡಲು ದೃಢನಿಶ್ಚಯವನ್ನು ಮಾಡಿಕೊಳ್ಳಬೇಕು' ಎಂದರು. ಸನಾತನ ಸಂಸ್ಥೆಯ ಸೌ. ಶಾರದಾ ಯೋಗೇಶ್ ಇವರು ಮಾತನಾಡಿ ಈಗ ನಡೆಯುತ್ತಿರುವ ಭೀಕರವಾದ ಯುದ್ಧದ ಸಂದರ್ಭದಲ್ಲಿ ಶಾರೀರಿಕ ಬಲ, ಮಾನಸಿಕ ಬಲದ ಜೊತೆಗೆ ಆಧ್ಯಾತ್ಮಿಕ ಬಲವನ್ನು ವೃದ್ಧಿಸಿ ಕೊಳ್ಳಬೇಕು ಇದಕ್ಕಾಗಿ ಇಂದಿನಿಂದಲೇ ಪ್ರಾರಂಭಿಸೋಣ ಎಂದರು.

ಹಿಂದೂ ರಾಷ್ಟ್ರವೆಂದು ಘೋಷಿಸಬೇಕೆಂದು ಆಗ್ರಹ

ಹಿಂದೂ ಜನಜಾಗೃತಿ ಸಮಿತಿಯ ದಕ್ಷಿಣ ಕರ್ನಾಟಕ ಜಿಲ್ಲೆಗಳ ಸಮನ್ವಯಕರಾದ ಶ್ರೀ. ಚಂದ್ರ ಮೊಗವೀರ ಇವರು ಮಾತನಾಡಿ ನಮ್ಮ ಪವಿತ್ರ ಭಾರತ ಭೂಮಿ ಶ್ರೀರಾಮನ ರಾಮರಾಜ್ಯ, ಪಾಂಡವರ ಧರ್ಮರಾಜ್ಯ, ಶಿವಾಜಿ ಮಹಾರಾಜರ ಹಿಂದವಿ ಸ್ವರಾಜ್ಯ ನೋಡಿದೆ ಈಗ ಈ ಭೂಮಿ ಹಿಂದೂರಾಷ್ಟ್ರದ ದಾರಿ ನೋಡುತ್ತಿದೆ ಎಂದರು. ಕ್ರಿಶ್ಚಿನ್‌ನ್ನರಿಗೆ 150 ದೇಶ, ಮುಸ್ಲಿಂರಿಗೆ 50ಕ್ಕೂ ಹೆಚ್ಚು ದೇಶ, ಬೌದ್ಧರಿಗೆ 12 ರಾಷ್ಟ್ರಗಳಿದ್ದು ಆದರೆ 100 ಕೋಟಿ ಹಿಂದೂಗಳಿಗೆ ಒಂದೇ ಒಂದು ಸಹ ಹಿಂದೂ ರಾಷ್ಟ್ರವಿಲ್ಲ ಅದಕ್ಕಾಗಿ ಭಾರತವನ್ನು ಹಿಂದೂ ರಾಷ್ಟ್ರವೆಂದು ಘೋಷಿಸಬೇಕೆಂದು ಆಗ್ರಹಿಸಿದರು.

ಸಾಮಾಜಿಕ ಕಳಕಳಿ

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

ಭಾವವನು ಮೂಡಿಸುತ ಬರಹದಲಿ
ಹೇಳುತಲಿ
ಮಾವಿನೆಲೆ ಚಿಗುರಿನಲಿ ಚೆಂದವಿರಲು
ಪಾವತಿಯ ಮಾಡುವರು ಹರುಷದಲಿ
ಸಂತಸವ
ಪಾವನವು ಜೀವನವು ಲಕ್ಷ್ಮಿ ದೇವಿ.....

ಭಾವಾರ್ಥ : ಕವಿಗೆ ಭಾವನಾತ್ಮಕವಾದಂತಹ ಅಂಶಗಳು ಸಹಜವಾಗಿಯೇ ಇರುತ್ತದೆ. ಸಾಹಿತಿಕವಾಗಿ ಕಾರ್ಯದಲ್ಲಿ ತೊಡಗಿದ್ದಾಗ ಸಾಗುತ್ತಾ ಹೋಗುವ ದಾರಿಯಲ್ಲಿ ಹಲವಾರು ಪ್ರಕಾರಗಳನ್ನು ಕಲಿಯುವ ಆಸಕ್ತಿ ಹೊಂದಿ ಅದರಲ್ಲ

ಭತ್ತ ಕಟಾವಿಗೆ ಯಂತ್ರಗಳ ಅಭಾವ: ಗಿರಿ ಜಿಲ್ಲೆಯ ರೈತರಿಗೆ ಸಂಕಷ್ಟ

● ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿದ್ದು ಯಾವಾಗ ಮಳೆ ಸುರಿದು ಬಿಡುತ್ತದೆಯೋ ಎಂಬ ಭಯ

• ಇಲ್ಯಾಸ್ ಪಟೇಲ್. ಬಳಗಾನೂರ್.
• ಉದಯವಾಹಿನಿ ಯಾದಗಿರಿ

ಭತ್ತ ಕಟಾವಿಗೆ ಯಂತ್ರ ಸಿಗದೆ ಗಿರಿನಾಡು ಯಾದಗಿರಿ ಜಿಲ್ಲಾದ್ಯಂತ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಸಂಕಷ್ಟ ಅನುಭವಿಸುತ್ತಿರುವುದು ಎದ್ದು ಕಾಣುತ್ತಿದೆ.

ರೈತರು ಬೆಳೆದ ಭತ್ತ ಗದ್ದೆಯಲ್ಲಿಯೇ ಒಣಗಿ ನೆಲಕ್ಕುರುಳುತ್ತಿವೆ. ಅಕಾಲಿಕ ಮಳೆಯಿಂದ ಬೆಳೆದ ಭತ್ತದ ಬೆಳೆ ನೀರಿನಲ್ಲಿಯೇ ಕೊಳೆತು ಹೋಗುತ್ತದೆ ಎಂಬ ಭಯ ಕೃಷಿಕರನ್ನು ಕಾಡುತ್ತಿದೆ. ಅಕಾಲಿಕ ಮಳೆ ಭತ್ತ ಕಟಾವು ವಿಳಂಬಕ್ಕೆ ಕಾರಣವಾದರೆ, ಇನ್ನೊಂದು ಕಡೆ ಹಲವಾರು ಪ್ರದೇಶಗಳಲ್ಲಿ ಭತ್ತ ಕಟಾವು ಆರಂಭಗೊಂಡಿದ್ದರಿಂದ ಸಾಕಷ್ಟು ಪ್ರಮಾಣದಲ್ಲಿ ಹೊರರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ ಭತ್ತ ಕಟಾವು ಯಂತ್ರಗಳು ಜಿಲ್ಲೆಯಿಂದ ಹೊರ ಹೋಗಿರುವುದು ಭತ್ತ ಕಟಾವಿಗೆ ದೊಡ್ಡ ಮಟ್ಟದ ಹೊಡೆತ ನೀಡಿದೆ.

ಈಗ ಭತ್ತದ ಬೆಳೆಯ ಕಟಾವು ಆರಂಭವಾಗಿದ್ದು, ಮೊದಲಿನಂತೆ ಕಟಾವು ಮಾಡಲು ಕೂಲಿ ಕಾರ್ಮಿಕರ ಸಮಸ್ಯೆ ಉದ್ಭವಿಸಿದ್ದು, ರೈತರು ಆತಂಕ ಪಡುವಂತಾಗಿದೆ. ಇದರ ಜತೆಗೆ ಚಂಡಮಾರುತದ ಪರಿಣಾಮ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿದ್ದು ಯಾವಾಗ ಮಳೆ ಸುರಿದು ಬಿಡುತ್ತದೆಯೋ


ಉದಯವಾಹಿನಿ ಚಿತ್ರ

ಕೊಳೆತು ಹೋಗುತ್ತದೆ ಎಂಬ ಭಯ

ಎಂಬ ಭಯದಲ್ಲಿ ದಿನ ಕಳೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಸಿಲು ಕಾಣಿಸಿಕೊಂಡರೆ ಭತ್ತದ ಕಟಾವಿಗೆ ಅನುಕೂಲವಾಗುತ್ತದೆ ಎಂಬ ಕಾರಣಕ್ಕಾಗಿ ರೈತರು ಬೆಳಗೆದ್ದರೆ ದೇವರನ್ನು ಪ್ರಾರ್ಥಿಸುವಂತಾಗಿದೆ.

ಸಾಮಾನ್ಯವಾಗಿ ಈ ಸಮಯದಲ್ಲಿ ಬಿಸಿಲು ಇರುತ್ತಿತ್ತು. ಹೀಗಾಗಿ ಭತ್ತದ ಬೆಳೆ ಗದ್ದೆಯಲ್ಲಿ ಚೆನ್ನಾಗಿ ಒಣಗಿರುತ್ತಿತ್ತು. ಇದರಿಂದ ಕಟಾವು ಮಾಡಲು ಅನುಕೂಲವಾಗುತ್ತಿತ್ತು. ಆದರೆ ಈ ಬಾರಿ ಇನ್ನೂ ಕೂಡ ಮಳೆ ಸುರಿಯುತ್ತಿರುವುದು ಸಂಕಷ್ಟವನ್ನು ತಂದೊಡ್ಡಿದೆ. ಇದರಿಂದ ಭತ್ತದ ಕಟಾವಿಗೆ ತೊಂದರೆಯಾಗುತ್ತಿದೆ. ಸಣ್ಣ ರೈತರು ಕೂಲಿ ಆಳುಗಳ ಮೂಲಕ ಕೊಯ್ಲು ಮಾಡುತ್ತಿದ್ದು, ಅವರಿಗೆ ಸಮಸ್ಯೆಯಾಗುತ್ತಿದೆ. ಕೂಲಿ ಹೆಚ್ಚು ನೀಡಿದರೂ ಕೂಲಿ ಆಳುಗಳು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಉದಯ ವಾಹಿನಿ ಹೈಲೆಟ್ಸ್

- ಸುಮಾರು 1,02,744 ಹೆಕ್ಟರ್ ಪ್ರದೇಶಗಳಲ್ಲಿ ಭತ್ತ ಬೆಳೆಯಲಾಗಿದೆ.
- ಭತ್ತ ಕಟಾವು ಯಂತ್ರ ಸಿಗದೇ ಪರದಾಡುತ್ತಿರುವ ರೈತರು.
- ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇಲ್ಲಯಿಲ್ಲದೆ ಸಂಕಷ್ಟ.
- ರೈತರು ಬೆಳಗೆದ್ದರೆ ದೇವರನ್ನು ಪ್ರಾರ್ಥಿಸುವಂತಾಗಿದೆ.

ಎಕರೆಗಟ್ಟಲೆ ಭತ್ತವನ್ನು ಬೆಳೆದ ರೈತರು ಇತ್ತೀಚೆಗೆ ಕೂಲಿಯಾಳುಗಳ ಸಮಸ್ಯೆಯಿಂದಾಗಿ ಕಟಾವಿಗೆ ಯಂತ್ರಗಳ ಮೊರೆ ಹೋಗಿದ್ದಾರೆ. ಹೀಗಾಗಿ ಕಟಾವಿಗೆ ಯಂತ್ರಗಳಿಗೆ ಬೇಡಿಕೆ ಹೆಚ್ಚಿರುವ ಕಾರಣದಿಂದಾಗಿ ಕಟಾವು ಮಾಡುವ ದರವನ್ನು ಕೂಡ ಅವರ ಮನಸ್ಸಿಗೆ

ಈಗಾಗಲೇ ಭತ್ತ ಬೆಳೆಯನ್ನು ಕೈಗೆ ಬಂದದ್ದಾರೆ, ಆದ್ರ ಭತ್ತ ಕಟಾವು ಮಾಡಲು ಯಂತ್ರಗಳು ಸಿಗುತ್ತಿಲ್ಲರೀ, ಇಂತಹ ಸಮಯದಾಗ ಮಳೆ ಗಾಳಿದರೇ ಗೊತ್ತೇ ಆಗಲ್ಲರೀ, ಯಾವಾಗ ಬರ್ತಾದ ಏನೂ ಗೊತ್ತೇ ಆಗುವುದಿಲ್ಲರೀ, ಕೈಗೆ ಬಂದ ತುತ್ತು ಬಾಯಿ ಬರ್ತಾದ ಇಲ್ಲ ಅಂದಾಗ ಆಗ್ಯಾದ್ರೀ.ನಮ್ಮ ಪರಿಸ್ಥಿತಿ ನಮ್ಗೆ ಗೊತ್ತರೀ, ಯಾರ್ ಮುಂದ್ ನಮ್ಮ ಗೋಳು ಹೇಳಬೇಕ ಅಂದಾಗ್ ಆಗ್ಯಾದ್ರೀ. ಆ ದೇವರೇ ಕಾಪಾಡಬೇಕ್ರಿ

– ಮಹಿಬೂಬಪಟೇಲ್ ಕಾಚೂರ್, ರೈತರು

ಜಿಲ್ಲಾಧಿಕಾರಿಗಳು ಈಗಾಗಲೇ ದರ ನಿಗದಿಮಾಡಿದ್ದು, ಆದರೂ ದಲ್ಲಾಳಿಗಳು ಹಾಗೂ ಯಂತ್ರದ ಮಾಲೀಕರು ಕೆಲವು ಭಾಗಗಳಲ್ಲಿ ಸುಮಾರು 4,000ರೂ ಗಂಟೆಗೆ ಹೆಚ್ಚಿನ ಸುಲುಗಿ ಮಾಡುತ್ತಿದ್ದಾರೆ. ರೈತರಿಂದ ಕೇಳಿ ಬರುತ್ತಿದೆ. ಅಂತವರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಲು ಮುಂದಾಗಬೇಕು, ಹಾಗೂ ರೈತ ಮುಖಂಡರ ಜೊತೆ ಸಭೆಯನ್ನು ನಡಿಸಿ ಜಾಗೃತಿ ಮೂಡಿಸಬೇಕು

–ಹಮೀದ್, ಹುಣಚ್ಯಾಳ (ರೈತ ಸಂಘ ಹಸಿರು ಸೇನೆ ಅಧ್ಯಕ್ಷರು ಕೆಂಭಾವಿ ವಲಯ)

ಬಂದಂತೆ ವಿಧಿಸುತ್ತಿದ್ದು, ಒಂದು ರೀತಿಯಲ್ಲಿ ಸುಲಿಗೆ ಮಾಡುತ್ತಿದ್ದಾರೆ ಎಂಬ ಆರೋಪವೂ ಕೇಳಿ ಬರುತ್ತಿದೆ. ಕಟಾವಿನ ಸಮಯದಲ್ಲಿ ಪ್ರತಿವರ್ಷವೂ ರೈತರು ಇಂತಹ ಸಮಸ್ಯೆಗಳನ್ನು ಎದುರಿಸಲೇ ಬೇಕಾಗುತ್ತದೆ.

ನಿಗದಿ ಪಡಿಸಿದ ಬಾಡಿಗೆ ದರ ಎಷ್ಟು?:

ಕಟಾವು ಯಂತ್ರ ಹೊಂದಿರುವ ಮಾಲೀಕರು ಪ್ರತಿ ವರ್ಷವೂ ರೈತರಿಂದ ಹೆಚ್ಚಿನ ದರ ಪಡೆಯುತ್ತಿದ್ದಾರೆ ಎಂಬ ಆರೋಪ ಬಂದಿರುವ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಡಾ. ಸುಶೀಲಾ. ಬಿ ಅವರ ಅಧ್ಯಕ್ಷತೆಯಲ್ಲಿ ಸುಲಿಗೆ ತಪ್ಪಿಸುವ ಸಲುವಾಗಿ ಮತ್ತು ಕಟಾವಿಗೆ ದರ ನಿಗದಿ ಮಾಡುವ ಕುರಿತಂತೆ ತೀರ್ಮಾನ ತೆಗೆದುಕೊಳ್ಳಲಾಗಿದೆ. ಪ್ರತಿ ಗಂಟೆಗೆ 2,300/ ರೂ ಬಾಡಿಗೆ ಪಡಿಯಬೇಕು ಎಂದು ಸೂಚಿಸಿ ಆದೇಶ ಹೊರಡಿಸುವ ಮೂಲಕ ದರವನ್ನು ನಿಗದಿಗೊಳಿಸಲಾಗಿದೆ.

ಇದಕ್ಕೆ ಮೀರಿ ರೈತರಿಂದ ಹೆಚ್ಚಿನ ಹಣ ವಸೂಲಿ ಮಾಡಿದರೆ ಕಟಾವು ಯಂತ್ರದ ಮಾಲೀಕರ ವಿರುದ್ಧ ವಿಪತ್ತು ನಿರ್ವಹಣೆ ಕಾಯ್ದೆ-2005ರ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುವ ಎಚ್ಚರಿಕೆ ನೀಡಲಾಗಿದೆ. ಹೀಗಾಗಿ ರೈತರು ಹೆಚ್ಚಿನ ಬಾಡಿಗೆ ಹಣದ ಬೇಡಿಕೆಯಿಟ್ಟರೆ ದೂರು ನೀಡಬಹುದಾಗಿದೆ.

ಐನಾಪೂರ ಏತ ನೀರಾವರಿ ಯೋಜನೆ ಜಾರಿಗೊಳಿಸಲು ಮನವಿ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯ ಐನಾಪೂರ ಏತ ನೀರಾವರಿ ಯೋಜನೆ ಜಾರಿಗೆಗೊಳಿಸಿ ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ರೈತ ಮುಖಂಡ ರೇವಣಸಿದ್ದ ಪಡಶೇಟ್ಟಿ ಚಂದನಕೇರಾ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು, ಚಿಂಚೋಳಿ ತಾಲ್ಲೂಕಾವು ಅತ್ಯಂತ ಹಿಂದುಳಿದ ತಾಲ್ಲೂಕಾವಾಗಿದ್ದು ಅದರಲ್ಲಿ ತಾಲ್ಲೂಕಿನಲ್ಲಿಯೇ ಐನಾಪೂರ ಹಿಂದುಳಿದ್ದು ಈ ಭಾಗದ ರೈತರ ಸಾರ್ವಜನಿಕರ ಕನಸು ಒಂದೇ ಐನಾಪೂರ ಏಚ ನೀರಾವರಿ ಯೋಜನೆ ಜಾರಿಗೆ ಆದರೆ ಈ ಭಾಗದ 4ಗ್ರಾಮಗಳು ಸೇರಿದಂತೆ 6 ತಾಂಡಾಗಳ 10ಸಾವಿರ ಹೇಕ್ಟರ್ ಭೂಮಿ ನೀರಾವರಿ ಪ್ರದೇಶವಾಗುತ್ತದೆ ಇದರಿಂದ ರೈತರಿಗೆ ಬಹಳಷ್ಟು ಅನುಕೂಲವಾಗಲಿದ್ದು ರೈತರು ಆರ್ಥಿಕವಾಗಿ ಬೆಳೆಯುತ್ತಾರೆ, ವಲಸೆ ಹೋಗುವವರ ಸಂಖ್ಯೆ ಕೂಡ ಕಡಿಮೆಯಾಗುತ್ತದೆ.

ಪಡಶೇಟ್ಟಿ ಸರ್ಕಾರಕ್ಕೆ ಮನವಿ

ಈಗಾಗಲೇ ಐನಾಪೂರ ಏತ ನೀರಾವರಿ ಯೋಜನೆಗಾಗಿ ಡಿಪಿಆರ್ ಎಸ್,ನೀಲಿನಕ್ಷೆ ಸಿದ್ದವಾಗಿ ಟೆಂಡರ್ ಪ್ರಕ್ರಿಯೆ ಕೂಡವಾಗಿದ್ದು ಅನುದಾನದ ಕೊರತೆಯಿದ್ದ ಕಾರಣ ಯೋಜನೆ ಜಾರಿಗೆ ಆಗುತ್ತಿಲ್ಲಾ.ಈಗಿನ ಸರ್ಕಾರ ರೈತರಪರ ಕಾಳಜಿ ವಹಿಸಿ ಅನುದಾನ ಮೀಸಲಿಟ್ಟು ಬಿಡುಗಡೆಗೊಳಿಸಿದರೆ ರೈತರು ಏಳು ಜನ್ಮದಲ್ಲಿ ಮರೆಯಲು ಸಾಧ್ಯವಿಲ್ಲ ಎಂದರು. ಈಗಾಗಲೇ ಚಳಿಗಾಲದ ಬೆಳಗಾವಿ ಅಧಿವೇಶನದಲ್ಲಿ ಶಾಸಕರು ಜನಪ್ರತಿನಿಧಿಗಳು ಎಂಎಲ್ಸಿಗಳು ಐನಾಪೂರ ಏತ ನೀರಾವರಿ ಯೋಜನೆ ಜಾರಿಗೆ ಬಗ್ಗೆ ಧ್ವನಿ ಎಬ್ಬಿಸಿ ಅನುದಾನ ಮೀಸಲಿಡುವಂತೆ ಆಗ್ರಹಿಸಿದರೆ ಅನುದಾನ ಬಿಡುಗಡೆಯಾಗುತ್ತದೆ ಈಭಾಗದ ರೈತರ ಕನಸು ನನಸಾಗುತ್ತದೆ ಎಂದರು.

ಎಚ್‌ಐವಿ ಸೋಂಕಿತರು ಎಲ್ಲರಂತೆ ಬದುಕುವ ಹಕ್ಕನ್ನು ಹೊಂದಿರುತ್ತಾರೆ

• ಉದಯವಾಹಿನಿ, ಸಿಂಧನೂರು

ಎಚ್‌ಐವಿ ಪಾಸಿಟಿವ್ ಹೊಂದಿದವರನ್ನು ಎಲ್ಲರಂತೆ ಬದುಕುವ ಹಕ್ಕುಗಳನ್ನು ಹೊಂದಿರುತ್ತಾರೆ. ಸಮಾಜದಲ್ಲಿ ಅವರನ್ನು ಸಮಾನತೆಯಿಂದ ನೋಡಿಕೊಳ್ಳುವಂತ ನಮ್ಮೆಲ್ಲರ ಜವಾಬ್ದಾರಿಯಾಗಿರಬೇಕು ಎಂದು ತಾಲ್ಲೂಕು ನ್ಯಾಯಾಲಯದ ನ್ಯಾಯಾಧೀಶರಾದ ಅಚ್ಚಪ ದೊಡ್ಡ ಬಸವರಾಜ ಅವರು ಹೇಳಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲ್ಲೂಕು ನ್ಯಾಯವಾದಿಗಳು ಸಂಘ ಮತ್ತು ತಾಲ್ಲೂಕು ಆರೋಗ್ಯ ಇಲಾಖೆ ಹಾಗೂ ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಸಿಂಧನೂರು ಇವರುಗಳು ಆಶ್ರಯದಲ್ಲಿ ನಡೆದ ವಿಶ್ವ ಏಡ್ಸ್ ದಿನಾಚರಣೆ ಅಳ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಮಾಜದಲ್ಲಿ ಎಚ್‌ಐವಿ ಪಾಸಿಟಿವ್ ಹೊಂದಿರುವವರನ್ನು ಅವರನ್ನು ಎಲ್ಲರಂತೆ ಹಕ್ಕುಗಳನ್ನು ಹೊಂದಿರುತ್ತಾರೆ. ಅವರನ್ನು ನಾವು ಸಮಾನತೆಯಿಂದ ನೋಡುವಂತಹ ಜವಾಬ್ದಾರಿ ನಮ್ಮದಾಗಬೇಕು ಎಂದು ಹೇಳಿದರು.

ಉದಯವಾಹಿನಿ ಚಿತ್ರ

ಸಮಾನತೆಯಿಂದ ನೋಡುವಂತಹ ಜವಾಬ್ದಾರಿ ನಮ್ಮದಾಗಬೇಕು

ನಂತರ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ನಗರದ ಪಿಡಬ್ಲ್ಯೂಡಿ ಕ್ಯಾಂಪ್ ಯಿಂದ ತಾಲ್ಲೂಕ ಪಂಚಾಯಿತಿವರೆಗೂ ರಸ್ತೆ ಮೂಲಕ ಏಡ್ಸ್ ರೋಂಕು ರೋಗದ ಲಕ್ಷಣಗಳು ಬಗ್ಗೆ ವಿವಿಧ ಚಿತ್ರಗಳು ಬ್ಯಾನರ್ ಅಡಿಯಲ್ಲಿ ಜಾಗೃತಿ ಜಾಥಾ ಕಾರ್ಯಕ್ರಮ ನಿರೂಪಿಸಿದರು

ನಂತರ ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ಹಾಕಿ ಸಾರ್ವಜನಿಕರಿಗ ಜಾಗೃತಿ ಮೂಡಿಸಲಾಯಿತು. ನಂತರ ಜಾಗ್ರತೆ ಜಾಥಾ ತಾಲ್ಲೂಕು ಪಂಚಾಯಿತಿಗೆ ತಲುಪಿತ್ತು.

ಈ ಸಂದರ್ಭದಲ್ಲಿ ರಾಮನಗೌಡ ವಕೀಲರು. ಡಾ.ಅಯ್ಯನಗೌಡ. ತಾಲ್ಲೂಕು ಆರೋಗ್ಯ ಅಧಿಕಾರಿ ಶರಣಬಸವ ಉಮಾಲೂಟಿ ವಕೀಲರು. ಇರ್ಫಾನ್ ಕೆ ಅತ್ತಾರ್ ಅಧ್ಯಕ್ಷರು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಸಿಂಧ ನೂರು ,ಗೀತಾ ಹಿರೇಮಠ್ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು,ಲಾಜೋರ್ ಸಿರಿಯಲ್ ಜಿ ಪ್ರಾಚಾರ್ಯರು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು, ಇತರರು ಇದ್ದರು.

ಸರ್ವರ್ ಸಮಸ್ಯೆ, ವಿದ್ಯಾರ್ಥಿಗಳು ಭಯಪಡುವ ಅಗತ್ಯ ಇಲ್ಲ: ರವೀಂದ್ರನಾಥ್

• ಉದಯವಾಹಿನಿ, ಮುದ್ದೇಬಿಹಾಳ್

ಪದವಿ ಪರೀಕ್ಷಾ ಶುಲ್ಕ ಫೋನ್ ಪೇ ಮಾಡಿದ್ರೂ ಸಕ್ಸಸ್ ಆಗ್ತಿಲ್ಲ. ಸರ್ವರ್ ಸಮಸ್ಯೆಯಿಂದ ವಿದ್ಯಾರ್ಥಿಗಳಿಗೆ ತೊಂದ್ರೆ ಮತ್ತೆ ಯುನಿವರ್ಸಿಟಿ ಹಣ ತುಂಬುವಂತೆ ಹೇಳಿದರೆ ವಿದ್ಯಾರ್ಥಿಗಳ ಜೀವನ ತೊಂದರೆ ಜ್ಞಾನಭಾರತಿ ಕಾಲೇಜಿನ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಗಾಗಿ ಶುಲ್ಕವನ್ನು ಫೋನ್ ಪೇ ಪಾವತಿಸಿದರೂ ಸರ್ವರ್ ಸಮಸ್ಯೆಯಿಂದಾಗಿ ಮತ್ತೊಮ್ಮೆ ಶುಲ್ಕ ತುಂಬಬೇಕಾದ ಅನಿವಾರ್ಯ ಬಂದಿದ್ದು.

UUCMS ಎಕ್ಸಾಮ್ ಫಾರ್ಮ್ ತುಂಬುವ ವೇಳೆ ಹಣವು ಯಶಸ್ವಿವಾಗಿದೆ. ಆದರೆ ಪಾವತಿಯು ಯಶಸ್ವುವಾಗಿಲ್ಲ, ಮತ್ತೆ UUCMS ಲಾಗಿನ್‌ನಲ್ಲಿ ಎಕ್ಸಾಮ್ ಅಮೌಂಟ್ ಅಪ್ಲೈ ಪೇ ತೋರತ್ತಾಯಿದೆ. ಆದ ಕಾರಣ ನಮ್ಮಗೆ ಹಣವನ್ನು ಮತ್ತೊಮ್ಮೆ ತುಂಬುದು ಆಗುವುದಿಲ್ಲ, ನಾವು ಬಡಕುಟುಂಬದಿಂದ ಬಂದ ಕಾರಣ ಒಮ್ಮೆ ತುಂಬಬೇಕಾದರೆ ಮನೆಯಿಂದ ಅಥವಾ ಸಂಬಂದಿಕರಿಂದ ಕೇಳಿ ಹಣವನ್ನು ತುಂಬಿರತ್ತೆವು. ಮತ್ತೆ ಹೀಗಾದರೆ ಹೇಗೆ ಇದಕ್ಕೆ ಒಂದು ಪರಿಹಾರ ಬೇಕು.

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಪದವಿ ಕಾಲೇಜುಗಳ ಪ್ರಥಮ, ತೃತೀಯ ಹಾಗೂ ಐದನೇ ಸೆಮಿಸ್ಟರ್‌ಗೆ ಜನವರಿ ಪರೀಕ್ಷೆ ನಡೆಯಲಿದ್ದು, ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ಪರೀಕ್ಷಾ ಅರ್ಜಿ ತುಂಬುತ್ತಿದ್ದಾರೆ. ವಿದ್ಯಾರ್ಥಿಗಳ ಫೋನ್ ಪೇ ಹಣ ಪಾವತಿಯಾಗುತ್ತಿದೆ. ಆದರೆ ಅರ್ಜಿ ಸಬ್ಮಿಟ್ ಆಗದೇ ವಿದ್ಯಾರ್ಥಿಗಳು ತೊಂದ್ರೆ ಅನುಭವಿಸುತ್ತಿದ್ದಾರೆ ನಿಮ್ಮ ಅರ್ಜಿ 'ಫೇಲ್ಡ್' ಎಂಬ ಸಂದೇಶದಿಂದ ವಿದ್ಯಾರ್ಥಿಗಳು ಭಯಪಡುತ್ತಿದ್ದಾರೆ. ಈಗಾಗಲೇ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ವಿಜಯಪುರ ಬಾಗಲಕೋಟ ಜಿಲ್ಲೆಗಳ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಭರ್ತಿ ಮಾಡಿದ್ದಾರೆ.

ಮುದ್ದೇಬಿಹಾಳ್ : ವಿದ್ಯಾರ್ಥಿಗಳು ಯುಯುಸಿಎಂಎಸ್ ಖಾತೆಗೆ ಹಣ ಜಮೆ ಮಾಡಿರುವುದು.

ವ್ಯವಸ್ಥೆಯುಯುಸಿಎಂಎಸ್)ಯ ವೆಬ್ ಸೈಟ್‌ನಲ್ಲಿ ಅರ್ಜಿ ತುಂಬುವ ಪ್ರಕ್ರಿಯೆ ಶುರುವಾಗಿದೆ. ಆದರೆ ಬಹುತೇಕ ವಿದ್ಯಾರ್ಥಿಗಳ ಫೋನ್ ಪೇ ಹಣ ಜಮೆ ಆಗಿದೆ. ಆದರೆ ಸರಿಯಾಗಿ ಅರ್ಜಿ ಯಶಸ್ವಿ ಆಗಿರುವ ಸಂದೇಶ ಬಂದಿಲ್ಲ ಅನೇಕ ವಿದ್ಯಾರ್ಥಿಗಳು ಜ್ಞಾನಭಾರತಿ ಕಾಲೇಜಿಗೆ ಭೇಟಿ ನೀಡಿ ತಮ್ಮ ನೋವು ತೋಡಿಕೊಳ್ಳುತ್ತಿದ್ದಾರೆ.

ವಿದ್ಯಾರ್ಥಿಗಳು ಯಾವುದೇ ಭಯಪಡುವ ಅಗತ್ಯವಿಲ್ಲ

ಪ್ರೊ। ರವೀಂದ್ರನಾಥ ಕದಮ್ ಮೌಲ್ಯ ಮಾಪನ ಕುಲ ಸಚಿವರು ಬೆಳಗಾವಿ

ಯುಯುಸಿಎಂಎಸ್‌ನಲ್ಲಿ ಸರ್ವರ್ ಡೌನ್ ಆಗಿರುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ಈ ಸಮಸ್ಯೆ ಆಗುತ್ತಿದೆ. ಕೇವಲ ರಾಣಿ ಚನ್ನಮ್ಮ ವಿವಿ ಅಲ್ಲದೇ ರಾಜ್ಯದ ವಿವಿಧ ವಿವಿಗಳ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ. ಸಮಸ್ಯೆ ಬಗೆಹರಿಸುವ ಪ್ರಯತ್ನ ಯುಯುಸಿಎಂಎಸ್ ಮಾಡುತ್ತಿದೆ ಎಂದು ರಾಣಿ ಚನ್ನಮ್ಮ ವಿವಿ ಮೌಲ್ಯಮಾಪನ ಕುಲಸಚಿವ ಪ್ರೊ। ರವೀಂದ್ರನಾಥ ಕದಮ ಉದಯ ವಾಹಿನಿ ಜೊತೆ ಮಾತಾಡಿ ತಿಳಿಸಿದರು.

ಖಾತೆಯಿಂದ ಹಣ ಕಟ್ ಆಗಿದೆ. ಮತ್ತೊಮ್ಮೆ ಹಣ ತುಂಬುವಂತೆ ಹೇಳಿದರೆ ಹೇಗೆ? ಈ ಸಮಸ್ಯೆಯನ್ನು ಬಗೆಹರಿಸುವಂತೆ ವಿದ್ಯಾರ್ಥಿಗಳು ಪ್ರಿನ್ಸಿಪಾಲ ಹತ್ತಿರ ಮನವಿ ಮಾಡಿಕೊಳ್ಳುತ್ತಿದ್ದಾರೆ.

ಗ್ರಾಮಚಾವಡಿಯಲ್ಲಿ ಡಿವೈಎಫ್‌ಐ ಪ್ರತಿಭಟನೆ

• ಉದಯವಾಹಿನಿ, ಮುಡಿಪು

ಮಂಗಳೂರು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್‌ವಾಲ್ ಹಠಾವೊ' ಘೋಷಣೆಯಡಿ ಹರೇಕಳದ ಗ್ರಾಮಚಾವಡಿ ಜಂಕ್ಷನ್‌ನಲ್ಲಿ ಡಿವೈಎಫ್‌ಐ ಮತ್ತು ಸಿಪಿಎಂ ಆಶ್ರಯದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಲಾಯಿತು. ಡಿವೈಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಕೆ.ಇಮಿಯಾಝ್ ಮಾತನಾಡಿ, ಹೆದ್ದಾರಿಯ ಗುಂಡಿಗೆ ಬಿದ್ದು ಕೈ ಕಾಲು ಮುರಿದುಕೊಂಡವರು, ಮೃತಪಟ್ಟರ ಪರ ನ್ಯಾಯಕ್ಕಾಗಿ ಪ್ರತಿಭಟನೆಗೆ ಮುಂದಾದಾಗ ಕಮಿಷನರ್ ಅನುಮತಿ ನಿರಾಕರಿಸಿದ್ದರು.

ಒಂದು ಪ್ರತಿಭಟನೆಗೆ ಅನುಮತಿ ನಿರಾಕರಣೆ ಮಾಡಿದ ಬಳಿಕ ನಗರ ಕಮಿಷನರೇಟ್ ವ್ಯಾಪ್ತಿಯಲ್ಲಿ ನಿರಂತರ ಪ್ರತಿಭಟನೆಗಳು ನಡೆಯುತ್ತಿದೆ. ಕಮಿಷನರ್ ಅವರನ್ನು ನಗರದಿಂದ ಕಳುಹಿಸದೆ ನಮ್ಮ ಹೋರಾಟ ನಿಲ್ಲದು. ನಿರಂತರ ಹೋರಾಟ ಮಾಡಿ ಬಂಧನ ಕೊಳ್ಳಗಾಗುತ್ತೇವೆ. ನೀವು ಹಾಕುವ ಪ್ರಕರಣಗಳನ್ನು ಎದುರಿಸುತ್ತೇವೆ' ಎಂದು ಹೇಳಿದರು. ಯು.ಟಿ.ಖಾದರ್ ಕಮಿಷನರ್ ಪರ ನಿಂತು ವಿದಾನಸಭಾಧ್ಯಕ್ಷ ಸ್ಥಾನದ ಗೌರವ,

ಉದಯವಾಹಿನಿ ಚಿತ್ರ

ಘನತೆಗೆ ಧಕ್ಕೆ ತಂದಿದ್ದಾರೆ. ನಿಮಗೆ ತಾಕತ್ತಿದ್ದರೆ ಬಡವರಿಗೆ ಮನೆ, ಸರ್ಕಾರಿ ಕಾಲೇಜು, ಸರ್ಕಾರಿ ವೈದ್ಯಕೀಯ, ಎಂಜಿನಿಯರ್ ಕಾಲೇಜು ತಂದು ತೋರಿಸಿ' ಎಂದು ಸವಾಲು ಹಾಕಿದರು. '

ದಕ್ಷಿಣ ಕನ್ನಡ ಜಿಲ್ಲೆಯ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	03:00 ರಿಂದ 04:30
ಗುಳಿಕ ಕಾಲ	ಮಧ್ಯಾಹ್ನ	12:00 ರಿಂದ 01:30
ಯಮಗಂಡ ಕಾಲ	ಬೆಳಿಗ್ಗೆ	09:00 ರಿಂದ 10:30

ಮೇಷ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ.

ವೃಷಭ ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ. ಹಣದ ನಷ್ಟವಾಗಬಹುದು.

ಮಿಥುನ ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ. ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

ಕರ್ಕಾಟಕ ಮನೋಬಲದ ನಿಮ್ಮ ಕೊರತೆ ನಿಮ್ಮನ್ನು ಭಾವನಾತ್ಮಕ ಮತ್ತು ಮಾನಸಿಕ ವರ್ತನೆಯ ಬಲಿಪಶುವಾಗಿ ಮಾಡಬಹುದು. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ.

ಸಿಂಹ ಗರ್ಭಿಣಿಯರಿಗೆ ಉತ್ತಮ ದಿನವಲ್ಲ. ನೀವು ನಡೆಯುವಾಗ ಹೆಚ್ಚು ಜಾಗರೂಕರಾಗಿರಬೇಕು. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು.

ಕನ್ಯಾ ನಿಮ್ಮ ಕುಂದಿದ ಜೀವಂತಿಕೆ ವ್ಯವಸ್ಥೆಯಲ್ಲಿ ದೀರ್ಘಕಾಲೀನ ವಿಷದಂತ ವರ್ತಿಸುತ್ತದೆ. ನಿಮ್ಮನ್ನು ಸೃಜನಶೀಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಮತ್ತು ರೋಗದ ವಿರುದ್ಧ ಹೋರಾಡಲು ಪ್ರೇರೇಪಿಸುವುದು ಒಳ್ಳೆಯದು.

ತುಲಾ ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ. ಇಂದಿನ ದಿನ ನೀವು ನಿಮ್ಮ ವ್ಯಾಪಾರಕ್ಕೆ ಹೊಸ ಎತ್ತರವನ್ನು ನೀಡಬಹುದು.

ವೃಶ್ಚಿಕ ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ. ಇಂದು ನೀವು ಹಚ್ಚು ಪ್ರಯತ್ನ ಮಾಡಬೇಕಾಗಿ ಬಂದರೂ ಕೂಡ ಮಕ್ಕಳ ಸಂಗದಲ್ಲಿ ನಿಮ್ಮ ಬಿಡುವಿನ ಸಮಯ ಕಳೆಯಲು ಪ್ರಯತ್ನಿಸಬೇಕು.

ಧನಸ್ಸು ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘ ಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು.

ಮಕರ ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದು ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು ಮತ್ತು ವಿಷಯ ನ್ಯಾಯಾಲಯ ಕಚೇರಿಯವರೆಗೂ ಹೋಗಬಹುದು.

ಕುಂಭ ಗಾಳಿಯಲ್ಲಿ ಮನೆ ಕಟ್ಟುವುದು ನಿಮಗೆ ಸಹಾಯ ಮಾಡಲಾರದು. ಕುಟುಂಬದ ನಿರೀಕ್ಷೆಗಳನ್ನು ಪೂರ್ಣಗೊಳಿಸಲು ಏನಾದರೂ ಮಾಡಬೇಕು. ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು.

ಮೀನ ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

ಸ್ವಾಭಿಮಾನಿ ಸಮಾವೇಶಕ್ಕೆ ಹೈಕಮಾಂಡ್ ಬಲ: ಗೌಡರ ಕೋಟೆಯಲ್ಲಿ 'ಕೈ' ಶಕ್ತಿ ಪ್ರದರ್ಶನ

ಶೋಷಿತ ಸಮುದಾಯಗಳ ಸಂಘಟನೆಗಳ ಒಕ್ಕೂಟದ ಸಹಯೋಗದಲ್ಲಿ ನಡೆಯುತ್ತಿರುವ ಸ್ವಾಭಿಮಾನಿ ಸಮಾವೇಶ

• ಉದಯವಾಹಿನಿ ಹಾಸನ

ಜೆಡಿಎಸ್ ಭದ್ರಕೋಟೆ ಎಂದೇ ಖ್ಯಾತವಾಗಿರುವ ಜಿಲ್ಲೆಯಲ್ಲಿ ಇದೀಗ ಕಾಂಗ್ರೇಸ್ ವತಿಯಿಂದ ಸಮಾವೇಶ ನಡೆಸಲಾಗುತ್ತಿದೆ. ಶೋಷಿತ ಸಮುದಾಯಗಳ ಸಂಘಟನೆಗಳ ಒಕ್ಕೂಟದ ಸಹಯೋಗದಲ್ಲಿ ನಡೆಯುತ್ತಿರುವ ಸ್ವಾಭಿಮಾನಿ ಸಮಾವೇಶಕ್ಕೆ ಕಾಂಗ್ರೇಸ್ ಹೈಕಮಾಂಡ್ ಕೂಡ ಹಸಿರು ನಿಶಾನೆ ತೋರಿಸಿದ್ದು, ಕಾಂಗ್ರೇಸ್ ಮುಖಂಡರ ಉತ್ಸಾಹ ಇಮ್ಮಡಿಯಾಗಿದೆ.

ಸಮಾವೇಶದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವವನ್ನು ಬಿಂಬಿಸುವುದು ಒಂದೆಡೆಯಾದರೆ, ಕಾಂಗ್ರೇಸ್ ಸರ್ಕಾರದ ಸಾಧನೆಗಳನ್ನೂ ತಿಳಿಸುವ ಉದ್ದೇಶ ಹೊಂದಲಾಗಿದೆ. ಆರಂಭದಲ್ಲಿ ಶೋಷಿತ ಸಮುದಾಯಗಳ ಸಂಘಟನೆಗಳ ಒಕ್ಕೂಟದ ವತಿಯಿಂದ ಸ್ವಾಭಿಮಾನಿ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿತ್ತು. ಕಾಂಗ್ರೇಸ್ ಪಕ್ಷವನ್ನು ಹೊರತು ಪಡಿಸಿ ಸಮಾವೇಶ ನಡೆಸುತ್ತಿರುವುದಕ್ಕೆ ಅಪಸ್ವರಗಳೂ ಕೇಳಿ ಬಂದವು. ಈ ಹಂತದಲ್ಲಿ ಮಧ್ಯ ಪ್ರವೇಶಿಸಿದ ಕಾಂಗ್ರೇಸ್ ಹೈಕಮಾಂಡ್, ಪ್ರದೇಶ ಕಾಂಗ್ರೇಸ್ ಸಮಿತಿ ಹಾಗೂ ಶೋಷಿತ ಸಮುದಾಯಗಳ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲಿ ಸಮಾವೇಶ ಆಯೋಜಿಸಲು ಸೂಚನೆ ನೀಡಿದ್ದು, ಕಾಂಗ್ರೇಸ್ಸಿಗರ ಹುಮ್ಮಸ್ಸನ್ನು ಇಮ್ಮಡಿಗೊಳಿಸಿದೆ.

ಸಮಾವೇಶದ ಯಶಸ್ಸಿಗೆ ಸಿದ್ಧತೆ

ಇದೀಗ ಶೋಷಿತ ಸಮುದಾಯಗಳ ಸಂಘಟನೆಗಳೂ ಸಮಾವೇಶಕ್ಕೆ ಸಿದ್ಧತೆ ಆರಂಭಿಸಿದ್ದರೆ, ಇನ್ನೊಂದೆಡೆ ಕಾಂಗ್ರೇಸ್ ಮುಖಂಡರೂ ಸಮಾವೇಶದ ಯಶಸ್ಸಿಗೆ ಸಿದ್ಧತೆಗಳನ್ನು ಚುರುಕಾಗಿಸಿದ್ದಾರೆ. ಈಗಾಗಲೇ ಉಪ ಚುನಾವಣೆಯಲ್ಲಿ 3 ಸ್ಥಾನಗಳನ್ನು ಗೆದ್ದು ಬೀಗಿರುವ ಕಾಂಗ್ರೇಸ್, ಇದೀಗ ಸಮಾವೇಶದ ಮೂಲಕ ಮತ್ತೊಮ್ಮೆ ತನ್ನ ಪ್ರಾಬಲ್ಯವನ್ನು ತೋರಿಸುವ ಪ್ರಯತ್ನದಲ್ಲಿದೆ.

2 ಲಕ್ಷ ಜನ: ನಗರದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಚಿಕ್ಕಮಗಳೂರು, ಹಾಸನ, ಮಂಡ್ಯ, ಕೊಡಗು ಜಿಲ್ಲೆಗಳ ಸುಮಾರು 2 ಲಕ್ಷಕ್ಕೂ ಅಧಿಕ ಜನರು ಸೇರುವ ನಿರೀಕ್ಷೆ ಇದೆ ಎನ್ನುತ್ತಾರೆ ಕಾಂಗ್ರೇಸ್ ಮುಖಂಡರು.

ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಿಂದಲೂ ಮುಖಂಡರು ಕಾರ್ಯಕರ್ತರನ್ನು ಕರೆತರಲು ಈಗಿನಿಂದಲೇ ಸಿದ್ಧತೆ ಆರಂಭಿಸಿದ್ದಾರೆ. ಈಗಾಗಲೇ ಆಯಾ ಕ್ಷೇತ್ರಗಳಲ್ಲಿ ಪೂರ್ವಭಾವಿ ಸಭೆಗಳು ಆರಂಭವಾಗಿದ್ದು,

ಉದಯವಾಹಿನಿ ಚಿತ್ರ

ಡಿ.5 ರಂದು ಹಾಸನದಲ್ಲಿ ಕಾಂಗ್ರೇಸ್‌ನ ಶಕ್ತಿ ಪ್ರದರ್ಶನ ಮಾಡಲು ಎಲ್ಲಾ ಬಗೆಯ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ನಗರದ ಅರಸೀಕೆರೆ ರಸ್ತೆಯ ಎಸ್.ಎಂ.ಕೆ. ನಗರದಲ್ಲಿ ಬೃಹತ್ ಪೆಂಡಾಲ್ ನಿರ್ಮಾಣ ಆರಂಭಿಸಲಾಗಿದೆ. ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ವೆಂಕಟೇಶ್, ಕೆ.ಎನ್. ರಾಜಣ್ಣ, ಶಾಸಕ ಕೆ.ಎಂ. ಶಿವಲಿಂಗೇಗೌಡ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರು ಎರಡು ಬಾರಿ ನಗರಕ್ಕೆ ಭೇಟಿ ನೀಡಿ, ಸಿದ್ಧತೆಗಳನ್ನು ಪರಿಶೀಲಿಸಿದ್ದಾರೆ.

ಹಾಸನದ ಎಸ್ಎಂಕೆ ನಗರದಲ್ಲಿ ನಡೆಯುವ ಸ್ವಾಭಿಮಾನಿ ಸಮಾವೇಶಕ್ಕೆ ನಿರ್ಮಿಸುತ್ತಿರುವ ಬೃಹತ್ ಪೆಂಡಾಲ್ ಡಾ.ಎಚ್.ಸಿ. ಮಹದೇವಪ್ಪ ಸಮಾಜ ಕಲ್ಯಾಣ ಸಚಿವ ಸಮಾವೇಶಕ್ಕೆ ಕೇಂದ್ರದ ಕೆಲ ನಾಯಕರನ್ನೂ ಮುಖ್ಯಮಂತ್ರಿ ಸಿದ್ದರಾಮಯ್ಯ ಆಹ್ವಾನಿಸಿದ್ದು ಎಲ್ಲರೂ ಪಾಲ್ಗೊಳ್ಳುವ ನಿರೀಕ್ಷೆ ಇದೆ. ನಮ್ಮಲ್ಲಿ ಭಿನ್ನಾಭಿಪ್ರಾಯದ ಪ್ರಶ್ನೆಯೇ ಇಲ್ಲ ವೆಂಕಟೇಶ್ ಪಶು ಸಂಗೋಪನಾ ಸಚಿವ ಮೈಸೂರಿನಲ್ಲಿ ಬಹಳಷ್ಟು ಕಾರ್ಯಕ್ರಮ ಮಾಡಿದ್ದೇವೆ. ಈ ಬಾರಿ ಹಾಸನ ಮಂಡ್ಯದಲ್ಲಿ ಮಾಡೋಣ ಎಂದು ಹೇಳಿದೆವು. ಈಗ ಹಾಸನದಲ್ಲಿ ಸಮಾವೇಶ ಆಯೋಜಿಸಲಾಗಿದೆಕೆ.

ಸ್ವಾಭಿಮಾನಿ ಸಮಾವೇಶ ಆಯೋಜನೆ

ಎಂ. ಶಿವಲಿಂಗೇಗೌಡ ಶಾಸಕ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸಿದ್ದರಾಮಯ್ಯ ವಿರುದ್ಧ ಮಸಿ ಬಳಿಯುವ ಕೆಲಸ ಮಾಡುತ್ತಿದ್ದು ಸಮಾವೇಶ ಮೂಲಕ ಉತ್ತರ ನೀಡುತ್ತಿದ್ದೇವೆಕೆ.ಎನ್. ರಾಜಣ್ಣ ಜಿಲ್ಲಾ ಉಸ್ತುವಾರಿ ಸಚಿವ ಕಾಂಗ್ರೇಸ್ ಪಕ್ಷ ಪ್ರಥಮ ನಂತರ ಹಿಂದುಳಿದ ಶೋಷಿತ ವರ್ಗಗಳ ಒಕ್ಕೂಟ. ಆದರೆ ಅಹಿಂದ ಚಳವಳಿಯ ರಾಜ್ಯ ಸಂಸ್ಥಾಪಕ ಎಸ್. ಮೂರ್ತಿ ಮಾರ್ಗದರ್ಶನದಂತೆ ಜಿಲ್ಲೆಯಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಮಾವೇಶ ನಡೆಯುತ್ತಿದ್ದು ಇದರಲ್ಲಿ ಭಾಗವಹಿಸುವ ಮೂಲಕ ಎಲ್ಲಾ ಸದಸ್ಯರು ಬೆಂಬಲ ಸೂಚಿಸುವುದಾಗಿ ಹೇಳಿದರು. ದೇಶದ ಸಂಪತ್ತು ಅಥವಾ ಆರ್ಥಿಕ ಶಕ್ತಿಗಳನ್ನು ಸಮಾನವಾಗಿ ಹಂಚಿಕೆ ಮಾಡುವುದು

ಪ್ರತಿಪಕ್ಷಗಳು ಅಪಪ್ರಚಾರ ಮಾಡುತ್ತಿದ್ದು ಸಮಾವೇಶದ ಮೂಲಕ ತಕ್ಕ ಉತ್ತರ ನೀಡುತ್ತೇವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖಂಡತ್ವದಲ್ಲಿ ಕಾಂಗ್ರೇಸ್ ಪಕ್ಷ ಮತ್ತು ಶೋಷಿತ ಸಮುದಾಯಗಳ ಒಕ್ಕೂಟದಿಂದ ನಡೆಯುತ್ತಿರುವ ಸ್ವಾಭಿಮಾನಿ ಸಮಾವೇಶಕ್ಕೆ ಅಹಿಂದ ಚಳವಳಿಯ ಸಂಘಟನೆಯಿಂದ ಸಂಪೂರ್ಣ ಬೆಂಬಲ ಇದೆ -ಟಿ.ಡಿ. ಜಗದೀಶ್, ಅಹಿಂದ ಚಳವಳಿ ರಾಜ್ಯ ಜಂಟಿ ಸಂಚಾಲಕ

ಸಮಸಮಾಜ ನಿರ್ಮಾಣ ಮಾಡುವುದು ರಾಷ್ಟ್ರದಲ್ಲಿ ಸಮಾನತೆ ತರುವುದು ನಮ್ಮ ಸಂಘಟನೆಯ ಮುಖ್ಯ ಉದ್ದೇಶ ಎಂದರು. ರಾಜ್ಯದಲ್ಲಿ ಸಮಾನತೆಗಾಗಿ ಜನಾಭಿಪ್ರಾಯಗಳನ್ನು ರೂಪಿಸಲು ಅಹಿಂದ ಚಳವಳಿ ಸಂಘಟನೆಯನ್ನು ಸ್ಥಾಪನೆ ಮಾಡಲಾಗಿದ್ದು ಈ ಸಂಘಟನೆಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಕ್ರಿಯವಾಗಿದೆ. ಈ ಮೂಲಕ ಅಹಿಂದ ಶೋಷಿತ ಸಮುದಾಯಗಳಿಗೆ ಸೂಕ್ತ ನ್ಯಾಯ ಒದಗಿಸುವುದೇ ನಮ್ಮ ಮುಖ್ಯ ಧ್ಯೆಯವಾಗಿದೆ ಎಂದರು.

ಅಮೂಲ್ಯ ಜೀವ ಉಳಿಸಿಕೊಳ್ಳಲು ಹೆಲ್ಮೆಟ್ ಧರಿಸಿ: ಪಿಎಸ್‌ಐ

• ಉದಯವಾಹಿನಿ, ವಡಗೇರಾ

ಬೈಕ್ ಸವಾರರು ಹೆಲ್ಮೆಟ್ ಧರಿಸದೆ ನಿರ್ಲಕ್ಷತನದಿಂದ ಸವಾರಿ ಮಾಡುತ್ತಿರುವುದರಿಂದಲೆ ಅಪಘಾತಗಳಾಗಿ ಅದೆಷ್ಟೋ ಜನ ಜೀವ ಕಳೆದುಕೊಳ್ಳುತ್ತಿದ್ದಾರೆ ಹೆಲ್ಮೆಟ್ ದೇಹದ ಪ್ರಮುಖ ಭಾಗವಾದ ತೆಲೆಯ ರಕ್ಷಣೆಯನ್ನು ಮಾಡುತ್ತದೆ ಆದ್ದರಿಂದ ಪ್ರತಿಯೊಬ್ಬರೂ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ವಡಗೇರಾ ಪೊಲೀಸ್ ಠಾಣೆಯ ಪಿಎಸ್‌ಐ ಮೈಬೂಬ್ ಅಲಿ ಸೂಚಿಸಿದರು.

ತಾಲ್ಲೂಕಿನ ವಡಗೇರಾ ಕ್ರಾಸ್ ಬಳಿ ಹಮ್ಮಿಕೊಂಡಿದ್ದ ಹೆಲ್ಮೆಟ್ ಕಡ್ಡಾಯ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಆದೇಶದಂತೆ ಡಿಸೆಂಬರ್ 1ರಿಂದ ಜಿಲ್ಲೆಯಲ್ಲಿ ಕಡ್ಡಾಯ ಹೆಲ್ಮೆಟ್ ಧರಿಸುವುದನ್ನು ಪ್ರತಿಯೊಬ್ಬರು ಪಾಲನೆ ಮಾಡಬೇಕು ತಮ್ಮ ಹಿತದೃಷ್ಟಿಯಿಂದ ಪೊಲೀಸ್ ಇಲಾಖೆಯು ಸಾಕಷ್ಟು ಜನ ಜಾಗೃತಿ ಕಾರ್ಯ ಮಾಡುತ್ತಿದೆ ಆದರೆ ಸಾರ್ವಜನಿಕರು ಮಾತ್ರ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದರು ಇತ್ತೀಚಿನ ದಿನಗಳಲ್ಲಿ

ಉದಯವಾಹಿನಿ ಚಿತ್ರ

ಬೈಕ್ ಸವಾರರು ಮೊಬೈಲ್‌ನಲ್ಲಿ ಮಾತನಾಡುತ್ತಾ ಹಾಗೂ ನಿರ್ಲಕ್ಷ್ಯತನದಿಂದ ಸವಾರಿ ಮಾಡುತ್ತಿರುವುದೆ ಅಪಘಾತಗಳಿಗೆ ಪ್ರಮುಖ ಕಾರಣವಾಗಿದೆ ಅಮೂಲ್ಯ ಜೀವ ಉಳಿಸಿಕೊಳ್ಳಲು ಪ್ರತಿಯೊಬ್ಬ ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಲು ಪಿಎಸ್‌ಐ ಸಲಹೆ ನೀಡಿದರು. ಒಂದೆರಡು ಬಾರಿ ಸಾರ್ವಜನಿಕರಿಗೆ ತಿಳಿಸಿ ಹೇಳಲಾಗುತ್ತದೆ ತದನಂತರ ಹೆಲ್ಮೆಟ್ ಧರಿಸಿದ್ದಲ್ಲಿ ದಂಡ ವಸೂಲಿ ಮಾಡಬೇಕಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಶಿವಶರಣಪ್ಪ ಸಾಹುಕಾರ, ಈರಣ್ಣ ಸಾತಕೇಡ, ವೇಣುಗೋಪಾಲ್ ನಾಯಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು

ನೌಕರರು, ಆದಾಯ ತೆರಿಗೆ ಪಾವತಿದಾರರಿಗೂ ಬಿಪಿಎಲ್ ಕಾರ್ಡ್

• ಉದಯವಾಹಿನಿ ಕುಷ್ಟಗಿ

ಆದಾಯ ತೆರಿಗೆ ಪಾವತಿದಾರರು, ಸರ್ಕಾರಿ ನೌಕರರೂ ಸೇರಿದಂತೆ ಅನರ್ಹರೂ ಬಡತನ ರೇಖೆಗಿಂತ ಕೆಳಗಿನ(ಬಿಪಿಎಲ್) ಪಡಿತರ ಚೀಟಿ ಹೊಂದಿರುವುದು ತಾಲ್ಲೂಕಿನಲ್ಲಿ ಕಂಡುಬಂದಿದೆ.

ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಿ ಎಪಿಎಲ್ ಆಗಿ ಪರಿವರ್ತಿಸಿರುವ ವಿಷಯ ರಾಜ್ಯದಲ್ಲಿ ಚರ್ಚೆಯಲ್ಲಿದ್ದು, ತಾಲ್ಲೂಕಿನಲ್ಲೂ ಆಹಾರ ಇಲಾಖೆ ಪರಿಶೀಲನೆಯಲ್ಲಿ ತೊಡಗಿದ್ದು, ಅನರ್ಹ ಪಡಿತರ ಚೀಟಿದಾರರನ್ನು ಜಾಲಾಡುತ್ತಿದೆ.

ಬಿಪಿಎಲ್‌ಗೆ ಅರ್ಹರಾಗಿದ್ದರೆ ಮಾತ್ರ ಕಾರ್ಡ್

ಅಂತಹವರನ್ನು ಪತ್ತೆ ಮಾಡಿ ಕಾರ್ಡ್‌ಗಳನ್ನು ರದ್ದುಪಡಿಸುವ ನಿಟ್ಟಿನಲ್ಲಿ ಕ್ರಮಕ್ಕೆ ಮುಂದಾಗಿದೆ. ಬಿಪಿಎಲ್ ಪಡಿತರ ಚೀಟಿ ಹೊಂದಿದ್ದರೂ ಕನಿಷ್ಠ ಆರೇಳು ತಿಂಗಳಿನಿಂದಲೂ 1,250 ಜನರು ನ್ಯಾಯಬೆಲೆ ಅಂಗಡಿಗಳತ್ತ ಸುಳಿದಿಲ್ಲ. ಒಟ್ಟಾರೆ ಪಡಿತರ ವಸ್ತುಗಳನ್ನೂ ಪಡೆಯದಿರುವುದು ಗೊತ್ತಾಗಿದೆ. ಅಂತಹ ಬಿಪಿಎಲ್ ಪಡಿತರ ಚೀಟಿಗಳನ್ನು ಆಹಾರ ಇಲಾಖೆ ತಾತ್ಕಾಲಿಕ ಸ್ಥಗಿತಗೊಳಿಸಿದೆ. ಅರ್ಜಿ ಸಲ್ಲಿಸಿದವರಿಗೆ ಸಂಬಂಧಿಸಿದಂತೆ ಸ್ಥಾನಿಕ ಪರಿಶೀಲನೆ ನಡೆಸಲಾಗುತ್ತದೆ. ಒಂದೊಮ್ಮೆ ಬಿಪಿಎಲ್ ಗೆ ಅರ್ಹರಾಗಿದ್ದರೆ ಮಾತ್ರ ಅವರ ಕಾರ್ಡ್‌ಗಳನ್ನು ಮುಂದುವರಿಸಲಾಗುತ್ತದೆ ಎಂದು ಆಹಾರ ಇಲಾಖೆ ಅಧಿಕಾರಿಗಳು ತಿಳಿಸಿದರು. ಅಷ್ಟೇ ಅಲ್ಲದೆ 124 ಜನ ಬಿಪಿಎಲ್ ಕಾರ್ಡುದಾರರು ಆದಾಯ ತೆರಿಗೆ ಪಾವತಿಸುತ್ತಿರುವುದು ಗೊತ್ತಾಗಿದ್ದು, ಅವೆಲ್ಲ ಕಾರ್ಡ್‌ಗಳನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ.

ಅದೇ ರೀತಿ ಕುಷ್ಟಗಿ, ಹನುಮನಾಳದಲ್ಲಿ ಇಬ್ಬರು, ಹಿರೇಮುರ್ತಿನಾಳ, ಕಿಲಾರಟ್ಟಿ, ಹಿರೇಗೊಣ್ಣಾಗರ, ಪಟ್ಟಲಚಿಂತಿ, ಹುಲ್ಬಗೇರಾ, ಬೀಳಗಿ, ಕೊರಡಕೇರಾ, ಹಿರೇಬನ್ನಿಗೋಳ, ದೋಟಿಹಾಳ, ಬಳೂಟಗಿ, ತಾವರಗೇರಾ, ಅಡವಿಭಾವಿ ಈ ನ್ಯಾಯಬೆಲೆ ಅಂಗಡಿಗಳ ವ್ಯಾಪ್ತಿಯಲ್ಲಿನ 19 ಜನ ಸರ್ಕಾರಿ ನೌಕರರೂ ಬಿಪಿಎಲ್ ಕಾರ್ಡುದಾರರಾಗಿರುವುದು ಬೆಳಕಿಗೆ ಬಂದಿದ್ದು ಎಲ್ಲವನ್ನೂ ಎಪಿಎಲ್ ಕಾರ್ಡುಗಳನ್ನಾಗಿ ಪರಿವರ್ತಿಸಲಾಗಿದೆ.

ಅಂಗವೈಕಲ್ಯ: ಬಳಕೆಯಾಗದ ಶೇ 5ರ ಅನುದಾನ

• ಉದಯವಾಹಿನಿ, ಯಾದಗಿರಿ

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಅಂಗವಿಕಲರಿಗೆ ಶೇ. 5 ರಷ್ಟು ಅನುದಾನ ಮೀಸಲಿಡುವಂತೆ ಸುತ್ತೋಲೆ ಇದೆ. ಈ ಅನುದಾನದಲ್ಲಿ ಅಂಗವಿಕಲ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ, ಸಾಧನಾ ಸಲಕರಣೆಗಳು, ವಿದ್ಯಾರ್ಥಿಗಳಿಗೆ ಪಾಠೋಪಕರಣಗಳು, ಶುಲ್ಕ. ಅಂಗವಿಕಲರಿಗೆ ಮನೆಗಳು, ತ್ರಿಚಕ್ರ ವಾಹನಗಳು ಇತರ ಸೌಲಭ್ಯ ಒದಗಿಸಬಹುದಾಗಿದೆ.

ಆದರೆ, ಯಾವ ಇಲಾಖೆಯೂ ಅನುಷ್ಠಾನಗೊಳಿಸುತ್ತಿಲ್ಲ. ಜಿಲ್ಲೆಯಲ್ಲಿ ಆರು ತಾಲ್ಲೂಕು ಸೇರಿ 21,569 ಜನ ಅಂಗವಿಕರು ಇದ್ದಾರೆ. ಸರ್ಕಾರಿ ಕಚೇರಿ, ಗ್ರಾಮ ಪಂಚಾಯಿತಿ, ಶಾಲೆಗಳಲ್ಲಿ ರಾಂಪ್‌ಗಳನ್ನು ಬೇಕಾಬಿಟ್ಟಿಯಾಗಿ ಮಾಡಲಾಗಿದೆ.

ಸರ್ಕಾರ ಅಂಗವಿಕಲರಿಗೆ ಶೇ 5 ಮೀಸಲಾತಿ ನೀಡಿದೆ. ಆದರೆ, ಅಧಿಕಾರಿಗಳ ಅಸಡ್ಡೆ ಮತ್ತು ನಿಷ್ಕಾಳಜಿಯಿಂದ ಮೀಸಲಾತಿ ನಮಗೆ ಸಮರ್ಪಕವಾಗಿ ಸದ್ಬಳಕೆಯಾಗುತ್ತಿಲ್ಲ. ಕೇವಲ ತ್ರಿಚಕ್ರ ವಾಹನ ನೀಡಿದರೆ, ಸಾಲದು ಇನ್ನುಳಿದ ಬೇಡಿಕೆಗಳನ್ನು ಒದಗಿಸಬೇಕು. ನಮಗೆ ಅನುಕಂಪ ಬೇಡ ನೆರವಿನ ಅಭಯ ನೀಡಿ.

ಉದಯವಾಹಿನಿ ಚಿತ್ರ

ಶೇ 5 ರಷ್ಟು ಅನುದಾನ ನೀಡದೆ ಇರುವ ಇಲಾಖೆಯ ಕಡತಗಳನ್ನು ಜಿಲ್ಲಾಧಿಕಾರಿ ರದ್ದುಪಡಿಸಬೇಕು ಎಂಬ ಮಾತುಗಳನ್ನು ಅಂಗವಿಕಲ

ಕ್ಸಿ-ಜಿನ್‌ಪಿಂಗ್‌ಗೆ ಸಿಕ್ಕೆ ಬಿಡ್ತು ಬಂಗಾರದ ಪರ್ವತ: ಚೀನಾಗೆ ಬಂಪರ್ ಜಾಕ್‌ಪಾಟ್

ವಿಶ್ವದಲ್ಲೇ ಅತಿ ದೊಡ್ಡ ಚಿನ್ನದ ನಿಕ್ಷೇಪ ಚೀನಾದಲ್ಲಿ ಸಿಕ್ಕಿದೆ, ಇದು ಅತ್ಯಂತ ಗುಣಮಟ್ಟದ ಬಂಗಾರದ ನಿಕ್ಷೇಪ

ಬೀಜಿಂಗ್: ಅಬ್ಬಬ್ಬಾ.. ಒಂದೇ ಕಡೆ.. ಅದು ಈ ಟೈಮ್‌ನಲ್ಲಿ 1000 ಮೆಟ್ರಿಕ್ ಟನ್ ಗೋಲ್ಡ್ ಸಿಕ್ಕರೆ ಜಗತ್ತಲ್ಲಿ ಏನೆಲ್ಲಾ ಆಗಬಹುದು. 10 ಗ್ರಾಂ ಚಿನ್ನಕ್ಕೆ ಸುಮಾರು 75 ಸಾವಿರ ರೂಪಾಯಿ ಬೆಲೆ ಇರುವಾಗ ನಮ್ಮ ನೆರೆ ರಾಷ್ಟ್ರ ಚೀನಾಗೆ ಜಾಕ್‌ಪಾಟ್ ಹೊಡೆದಿದೆ.

ಚೆನ್ನದ ಜಗತ್ತಿಗೆ ಡ್ರ್ಯಾಗನ್ ಬಾಸ್

ವಿಶ್ವದಲ್ಲೇ ಅತಿ ದೊಡ್ಡ ಚಿನ್ನದ ನಿಕ್ಷೇಪ ಚೀನಾದಲ್ಲಿ ಸಿಕ್ಕಿದೆ. ಅದಲ್ಲದೇ ಇದು ಅತ್ಯಂತ ಗುಣಮಟ್ಟದ ಬಂಗಾರದ ನಿಕ್ಷೇಪವಾಗಿದ್ದು, ದಕ್ಷಿಣ ಆಫ್ರಿಕಾದ 900 ಮೆಟ್ರಿಕ್ ಟನ್‌ನ ಚಿನ್ನದ ನಿಕ್ಷೇಪವನ್ನು ಹಿಂದಿಕ್ಕಿದೆ. ಈ ಅತ್ಯಂತ ದೊಡ್ಡ ಚಿನ್ನದ ಗಣಿ ಮೂಲಕ ಚೀನಾ ಮತ್ತಷ್ಟು ಸದೃಢವಾಗಲಿದ್ದು, ಚಿನ್ನದ ವಿಚಾರದಲ್ಲಿ ಈಗಾಗಲೇ ಪ್ರಾಬಲ್ಯ ಹೊಂದಿರುವ ಚೀನಾ ಇದರೊಂದಿಗೆ ಜಗತ್ತಿನ ಹಲವು ರಾಷ್ಟ್ರಗಳಿಗೆ ಸೆಡ್ಡು ಹೊಡೆಯುವ ನಿರೀಕ್ಷೆ ಇದೆ.

ಹೌದು, ಚೀನಾಗೆ ಅಕ್ಷರಶಃ ಲಾಟರಿ ಹೊಡೆದಿದೆ. ಬರೋಬ್ಬರಿ 83 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯ ಹೊಂದಿರುವ ಚಿನ್ನದ ನಿಕ್ಷೇಪವನ್ನು ಚೀನಾದ ಕಮ್ಯುನಿಸ್ಟ್ ಸರ್ಕಾರ ಪತ್ತೆ ಹಚ್ಚಿದೆ. ಇದು ಜಾಗತಿಕ ಮಟ್ಟದಲ್ಲಿ ಭಾರೀ ಸಂಚಲನ ಸೃಷ್ಟಿಸಿದೆ. ಪಿಂಗ್ಜಿಯಾಂಗ್ ಕೌಂಟಿಯಲ್ಲಿ ಸಾವಿರ ಮೆಟ್ರಿಕ್ ಟನ್ ಇರುವ ಚಿನ್ನದ ಗಣಿ ಇದೆ ಎಂದು ಹುನಾನ್ ಪ್ರಾಂತ್ಯದ ಭೂವೈಜ್ಞಾನಿಕ ಬ್ಯೂರೋ ಘೋಷಿಸಿದೆ. ಈ ಪ್ರದೇಶದಲ್ಲಿ ಭೂವಿಜ್ಞಾನಿಗಳು 2 ಕಿಲೋಮೀಟರ್ ಆಳದಲ್ಲಿ 40 ಚಿನ್ನದ ಎಳೆಗಳು ಸಿಕ್ಕಿವೆ ಎಂದು ಹೇಳಿದೆ. ಸೌಥ್ ಚೀನಾ ಮಾರ್ನಿಂಗ್ ಪೋಸ್ಟ್ ಚಿನ್ನದ ನಿಕ್ಷೇಪವು ಅಂದಾಜು 600 ಬಿಲಿಯನ್ ಯೂಹನ್ ಮೊತ್ತವನ್ನು ಹೊಂದಿದೆ ಎಂದು ಹೇಳಿದೆ. ಅಂದ್ರೇ ಭಾರತೀಯ ರೂಪಾಯಿ ಪ್ರಕಾರ 7 ಲಕ್ಷ ಕೋಟಿ ರೂಪಾಯಿ ಆಗುತ್ತದೆ. ಅಲ್ಲಿನ ಮಾಧ್ಯಮಗಳ ವರದಿ ಪ್ರಕಾರ ಚಿನ್ನದ ನಿಕ್ಷೇಪ ಭಾರೀ ಆಳದಲ್ಲಿದೆ ಎಂದು ಹೇಳಲಾಗುತ್ತಿದೆ. ಈಗಾಗಲೇ ಈ ನಿಕ್ಷೇಪ ಚೀನಾದ ಪ್ರಮುಖ ಬಂಗಾರದ ಗಣಿಯಾಗಿದೆ. ಅದರಲ್ಲೂ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಜಗತ್ತಿನ ಅತಿದೊಡ್ಡ ಚಿನ್ನದ ನಿಕ್ಷೇಪ ಸಿಕ್ಕಿರುವುದು ಚೀನಾಗೆ ಭಾರೀ ಅನುಕೂಲ ಆಗುತ್ತಿದೆ.

ಇದಕ್ಕಾಗಿ ಚೀನಾ ಭಾರೀ ಹೂಡಿಕೆಯನ್ನು ಕೂಡ ಮಾಡಿದೆ. ನೈಸರ್ಗಿಕ ಸಂಪನ್ಮೂಲ ಹುಡುಕಲು 2022ರಲ್ಲಿ ಚೀನಾ ಬರೋಬ್ಬರಿ 1.27 ಲಕ್ಷ ಕೋಟಿ ರೂಪಾಯಿಯನ್ನು ಹೂಡಿಕೆ ಮಾಡಿತ್ತು. ಇದು ಈಗ ಫಲ ಕೊಟ್ಟಿದ್ದು, ಭಾರೀ ಪ್ರಮಾಣದಲ್ಲಿ ಚಿನ್ನ

ಸಿಕ್ಕಿದೆ. ಇದರ ಹಿಂದೆ ವಿದೇಶಿ ಸಂಪನ್ಮೂಲಗಳ ಮೇಲೆ ಅವಲಂಭನೆ ಕಡಿಮೆ ಮಾಡುವ ಉದ್ದೇಶ ಚೀನಾಗಿತ್ತು. ಈಗ ಸಿಕ್ಕಿರುವ ಪ್ರತಿ ಮೆಟ್ರಿಕ್ ಟನ್ ಅದಿರು 138 ಗ್ರಾಂಗಳಷ್ಟು ಚಿನ್ನವನ್ನು ನೀಡುತ್ತದೆ ಎಂದು ಹೇಳಲಾಗುತ್ತಿದೆ.

ಈ ಚಿನ್ನದ ನಿಕ್ಷೇಪ ಸಿಕ್ಕ ತಕ್ಷಣವೇ ಜಾಗತಿಕ ಮಟ್ಟದಲ್ಲಿ ಚಿನ್ನದ ಬೆಲೆ ಭಾರೀ ಏರಿಕೆಯಾಗಿದೆ. ಅದಲ್ಲದೇ ಜಾಗತಿಕ ಅನಿಶ್ಚಿತತೆಯ ನಡುವೆ ಚೀನಾದಲ್ಲಿ ಚಿನ್ನಕ್ಕೆ ಬೇಡಿಕೆ ಹೆಚ್ಚುತ್ತಿದೆ. ಅದಲ್ಲದೇ ಚಿನ್ನದ ಮೇಲೆ ಹೂಡಿಕೆ ಮಾಡುವವರ ಸಂಖ್ಯೆ ಕೂಡ ಹೆಚ್ಚುತ್ತಿದೆ. ಆದ್ದರಿಂದ ದೇಶದ ಸಂಪನ್ಮೂಲ ಮೀಸಲನ್ನು ಹೆಚ್ಚಿಸುವಲ್ಲಿ ಇದು ನಮಗೆ ಗಮನಾರ್ಹವಾಗಿ ಸಹಾಯ ಮಾಡಲಿದೆ ಎಂದು ಹುನಾನ್‌ನ ಪ್ರಾಂತೀಯ ಭೂವೈಜ್ಞಾನಿಕ ಸಂಸ್ಥೆ ಹೇಳಿದೆ.

2023ರಲ್ಲಿ ಚೀನಾ ವಿಶ್ವದ ಹತ್ತನೇ ಒಂದು ಭಾಗದಷ್ಟು ಚಿನ್ನವನ್ನು ಉತ್ಪಾದಿಸಿತ್ತು. ಅದಲ್ಲದೇ ಚೀನಾ ಗಣಿಗಾರಿಕೆಯಲ್ಲಿ ಗ್ಲೋಬಲ್ ಲೀಡರ್ ಆಗಿದ್ದು, ಹೊಸ ತಲೆಮಾರಿನ ಬ್ಯಾಟರಿಗಳು ಮತ್ತು ಎಲೆಕ್ಟ್ರಾನಿಕ್ಸ್ ತಯಾರಿಸಲು ಬಳಸುವ ಅಮೂಲ್ಯ ಲೋಹಗಳ ಉತ್ಪಾದನೆಯಲ್ಲಿ ಪ್ರಾಬಲ್ಯ ಹೊಂದಿದೆ. ಈಗ ಚಿನ್ನ ಸಿಕ್ಕಿರುವುದು ಚೀನಾಗೆ ಆನೆ ಬಲ ಬಂದಂತಾಗಿದೆ.

ಚೀನಾಗೆ ದೊಡ್ಡ ಬೂಸ್ಟ್ ನೀಡಿದ ಚಿನ್ನದ ಗಣಿ

ಈಗ ಸಿಕ್ಕಿರುವ ಚಿನ್ನದ ನಿಕ್ಷೇಪ ಚೀನಾಗೆ ಬಹಳ ಅಂದ್ರೇ ಬಹಳ ಮಹತ್ವದ್ದು.. ಅದರಲ್ಲೂ ಕಠಿಣ ಮತ್ತು ಅನಿಶ್ಚಿತ ಆರ್ಥಿಕ ಪರಿಸ್ಥಿತಿಯ ವೇಳೆ ಚಿನ್ನದ ನಿಕ್ಷೇಪ ಸಿಕ್ಕಿರುವುದು ಚೀನಾಗೆ ದೊಡ್ಡ ಬೂಸ್ಟ್ ನೀಡಲಿದೆ. ಯುಹಾನ್ ಕರೆನ್ಸಿ ಮೌಲ್ಯ ಕುಸಿತ, ಜಾಗತಿಕ ವ್ಯಾಪಾರದಲ್ಲಿ ಉಂಟಾಗಿರುವ ಹಲವು ಬಿಕ್ಕಟ್ಟುಗಳು ಸೇರಿ ಕಳೆದ ಕೆಲವು ವರ್ಷಗಳಿಂದ ಚೀನಾದ ಆರ್ಥಿಕತೆ ಹಲವು ಸವಾಲುಗಳನ್ನು ಕಂಡಿದೆ. ಇಂತಹ ಸಂದರ್ಭದಲ್ಲಿ ಚೀನಾಗೆ ಸುರಕ್ಷಿತ ಹೂಡಿಕೆಯ ಆಯ್ಕೆಯಾಗಿ ಚೀನಾ ಕಂಡಿದ್ದು, ಚಿನ್ನದ ಮೀಸಲನ್ನು ಚೀನಾ ಹೆಚ್ಚಿಸುತ್ತಾ ಸಾಗಿದೆ. ಈಗ 1000 ಮೆಟ್ರಿಕ್ ಟನ್ ಚಿನ್ನದ ನಿಕ್ಷೇಪ ಸಿಕ್ಕಿರುವುದು ಚೀನಾ ಬಾಯಿಗೆ ಲಡ್ಡು ಬಂದು ಬಿದ್ದಂತಾಗಿದೆ.

ಚೀನಾ ಪಾಕಿಸ್ತಾನಕ್ಕೆ ಸಹಾಯ ಮಾಡುವ ನಿರೀಕ್ಷೆ

ಚೀನಾ ಮೇಲೆ ಹಲವು ಕಾರಣಗಳಿಗೆ ಅಮೆರಿಕ ಸೇರಿ ಪಾಶ್ಚಿಪಾತ್ಯ ರಾಷ್ಟ್ರಗಳು ಕೋಪಗೊಳ್ಳುತ್ತಲೇ ಇವೆ. ಯಾವಾಗ ಆರ್ಥಿಕ ನಿರ್ಬಂಧ ವಿಧಿಸುತ್ತವೋ ಗೊತ್ತಿಲ್ಲ. ಆದ್ದರಿಂದ ಚೀನಾ ತನ್ನದೇ ರೀತಿಯಲ್ಲಿ ಸದೃಢವಾಗುತ್ತಿದ್ದು, ಜಾಗತಿಕ ಎಕಾನಮಿ ತನ್ನ ಮೇಲೆ ಯಾವುದೇ ರೀತಿಯ ಎಫೆಕ್ಟ್ ಆಗಬಾರದು ಎಂದು ಭಾರೀ ತಯಾರಿಯನ್ನು ನಡೆಸುತ್ತಿದೆ. ಅದರಂತೆ ಜಗತ್ತಿನ ಎಲ್ಲಾ ರಾಷ್ಟ್ರಗಳು ನೈಸರ್ಗಿಕ ಸಂಪನ್ಮೂಲಗಳ ನಿಕ್ಷೇಪವನ್ನು ಹುಡುಕುತ್ತಿವೆ. ಇತ್ತೀಚೆಗಷ್ಟೇ ಪಾಕಿಸ್ತಾನದಲ್ಲಿ ಭಾರೀ ತೈಲ ನಿಕ್ಷೇಪ ಕಂಡುಬಂದಿತ್ತು. ಆದರೆ, ಅದು ಸದ್ಯಕ್ಕೆ ಕಾರ್ಯರೂಪಕ್ಕೆ ಬರುವ ಸಾಧ್ಯತೆ ತೀರಾ ಕಡಿಮೆ ಎನ್ನಲಾಗುತ್ತಿದ್ದು, ಚೀನಾ ಪಾಕಿಸ್ತಾನಕ್ಕೆ ಸಹಾಯ ಮಾಡುವ ನಿರೀಕ್ಷೆಯೂ ಇದೆ.

ಫುಟ್ಬಾಲ್ ಪಂದ್ಯದ ವೇಳೆ ಹಿಂಸಾಚಾರಕ್ಕೆ 100ಕ್ಕೂ ಹೆಚ್ಚು ಬಲಿ

ಕೊನಾಕ್ರಿ: ಫುಟ್ಬಾಲ್ ಪಂದ್ಯವೊಂದು ಅಭಿಮಾನಿಗಳ ನಡುವೆ ಹಿಂಸಾತ್ಮಕ ಮಾರಾಮಾರಿಗೆ ಕಾರಣವಾಗಿದ್ದು, ಬಡಿದಾಟದಲ್ಲಿ ನೂರಕ್ಕೂ ಅಧಿಕ ಮಂದಿ ಜೀವ ಕಳೆದುಕೊಂಡ ಘೋರ ದುರಂತ ಗಿನಿ ದೇಶದಲ್ಲಿ ನಡೆದಿದೆ. ಪಶ್ಚಿಮ ಆಫ್ರಿಕಾದಲ್ಲಿರುವ ದೇಶದ ಎರಡನೇ ಅತಿ ದೊಡ್ಡ ನಗರವಾದ ಎನ್‌ಝೆರೆಕೋರೆಯಲ್ಲಿ ಫುಟ್ಬಾಲ್ ಪಂದ್ಯದ ವೇಳೆ ಈ ಘರ್ಷಣೆ ನಡೆದಿದೆ.

ಆಸ್ಪತ್ರೆಯ ಮೂಲೆ ಮೂಲೆಗಳಲ್ಲಿ ಕಣ್ಣು ಹಾಯಿಸಿದ ಕಡೆಯೆಲ್ಲ ದೇಹಗಳನ್ನು ಸಾಲಾಗಿ ಇರಿಸಿರುವುದು ಕಾಣಿಸುತ್ತದೆ. ಶವಾಗಾರಗಳು ಭರ್ತಿಯಾಗಿವೆ. ಗಾಯಾಳುಗಳು ಹಜಾರಗಳಲ್ಲಿ ಮಲಗಿದ್ದಾರೆ ಎಂದು ಆಸ್ಪತ್ರೆಯೊಂದರ ವೈದ್ಯರು ತಿಳಿಸಿದ್ದಾರೆ. ಸುಮಾರು ನೂರು ಮಂದಿ ಸತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ಸ್ಥಳೀಯ ಆಸ್ಪತ್ರೆ ಹಾಗೂ ಶವಾಗಾರದಲ್ಲಿ ಶವಗಳು ತುಂಬಿಕೊಂಡಿವೆ. ಆದರೆ ಸಾವು, ನೋವಿನ ನಿಖರವಾದ ಸಂಖ್ಯೆ ಬಹಿರಂಗವಾಗಿಲ್ಲ. ಮೈದಾನದ ಹೊರಭಾಗದಲ್ಲಿನ ಬೀದಿಗಳಲ್ಲಿ ಭಾರಿ ಗದ್ದಲದ ಸನ್ನಿವೇಶ ಏರ್ಪಟ್ಟಿ

ರುವುದು ಮತ್ತು ಲೆಕ್ಕಕ್ಕೆ ಸಿಗದಷ್ಟು ಶವಗಳು ನೆಲದ ಮೇಲೆ ಅನಾಥವಾಗಿ ಬಿದ್ದಿರುವ ಎದೆನಡುಗಿಸುವ ದೃಶ್ಯಗಳಿರುವ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ರೆಫರಿಯ ವಿವಾದಾತ್ಮಕ ನಿರ್ಣಯದ ಬಳಿಕ ವಾಗ್ವಾದ ಶುರುವಾಗಿತ್ತು. ಇದು ವಿಕೋಪಕ್ಕೆ ತಿರುಗಿ, ಅಭಿಮಾನಿಗಳು ಮೈದಾನದ ಒಳಗೆ ನುಗ್ಗಿದ್ದರು. ಫುಟ್ಬಾಲ್ ಮೋಜಿನ ಆಟದ ಸ್ಟೇಡಿಯಂ ರಣರಂಗವಾಗಿ ಮಾರ್ಪಟ್ಟಿದೆ. ರೆಫರಿ ತೀರ್ಮಾನ ಅಭಿಮಾನಿಗಳಲ್ಲಿ ಅಸಮಾಧಾನ ಉಂಟುಮಾಡಿತ್ತು. ಇದರಿಂದ ಉದ್ರಿಕ್ತರಾದ ಪ್ರೇಕ್ಷಕರು ಸಂಘರ್ಷಕ್ಕೆ ಇಳಿದರು. ಬೀದಿ ಬೀದಿಗಳಲ್ಲಿ ಮಾರಾಮಾರಿ ನಡೆದಿದ್ದು,

- ಪಶ್ಚಿಮ ಆಫ್ರಿಕಾದ ಗಿನಿ ದೇಶದ ಎನ್‌ಝೆರೆಕೋರೆ ನಗರದಲ್ಲಿ ಸಂಭವಿಸಿದ ದುರಂತ
- ಸೇನಾ ಅಧ್ಯಕ್ಷ ಮಮಾಡಿ ದೌಂಬೊಯಾ ಗೌರವಾರ್ಥ ಆಯೋಜಿಸಿದ್ದ ಫುಟ್ಬಾಲ್ ಟೂರ್ನಿ
- ರೆಫ್ರಿ ನೀಡಿದ ತೀರ್ಪಿನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅಭಿಮಾನಿಗಳಿಂದ ಮಾರಾಮಾರಿ

ಎನ್‌ಜೆರೆಕೋರೆ ಪೊಲೀಸ್ ಠಾಣೆಗೆ ಕೂಡ ಬೆಂಕಿ ಹಚ್ಚಲಾಗಿದೆ. ಗಿನಿಯಾದ್ಯಂತ ಫುಟ್ಬಾಲ್ ಟೂರ್ನಿಗಳು 2021ರಲ್ಲಿ ದಂಗೆ ಮೂಲಕ ಅಧಿಕಾರವನ್ನು ತನ್ನ ಕೈಗೆ ಕಸಿದುಕೊಂಡು, ತನ್ನನ್ನು ತಾನೇ ಅಧ್ಯಕ್ಷ ಎಂದು ಘೋಷಿಸಿಕೊಂಡ ಗಿನಿಯ ಮಿಲಿಟರಿ ನಾಯಕ ಮಮಾಡಿ ದೌಂಬೊಯಾ ಗೌರವಾರ್ಥ ಆಯೋಜಿಸಲಾಗಿರುವ ಟೂರ್ನಿಯ ಭಾಗವಾಗಿ ಈ ಪಂದ್ಯ ನಡೆಯುತ್ತಿತ್ತು ಎಂದು ಸ್ಥಳೀಯ ಮಾಧ್ಯಮ ವರದಿ ತಿಳಿಸಿದೆ.

ದೇವೇಂದ್ರ ಫಡ್ನವಿಸ್‌ಗೆ 'ಮಹಾ' ಸಿಎಂ ಪಟ್ಟ ಫಿಕ್ಸ್

ಮುಂಬೈ: ದೇವೇಂದ್ರ ಫಡ್ನವೀಸ್ ಅವರು ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ ನಿಯೋಜನೆಗೊಳ್ಳುವುದು ಬಹುತೇಕ ಖಚಿತಪಟ್ಟಿದೆ. ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡ್ನವೀಸ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ. ಹೊಸ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನನ್ನು ಇಂದು ಇಲ್ಲವೆ ನಾಳೆ ನಡೆಯಲಿರುವ ಸಭೆಯಲ್ಲಿ ಘೋಷಣೆ ಮಾಡಲಾಗುವುದು ಎಂದು ಬಿಜೆಪಿ ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

ಇದಕ್ಕೂ ಮುನ್ನ ಮಾತನಾಡಿದ ಹಂಗಾಮಿ ಮುಖ್ಯಮಂತ್ರಿ ಏಕನಾಥ್ ಶಿಂಧೆ, ಮುಖ್ಯಮಂತ್ರಿಗಳ ಹೆಸರಿಗೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಮತ್ತು ಗಹ ಸಚಿವ ಅಮಿತ್ ಶಾ ಅವರು ತೆಗೆದುಕೊಳ್ಳುವ ನಿರ್ಧಾರವನ್ನು ಸಂಪೂರ್ಣವಾಗಿ ಬೆಂಬಲಿಸುವುದಾಗಿ ತಿಳಿಸಿದ್ದಾರೆ.

ಏಕನಾಥ್ ಶಿಂಧೆ ಅವರ ಪುತ್ರ ಶ್ರೀಕಾಂತ್ ಶಿಂಧೆ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನವನ್ನು ನೀಡಬಹುದು ಎಂಬ ಊಹಾಪೋಹಗಳಿವೆ ಮತ್ತು ಶಿವಸೇನೆಯು ಗಹ ಖಾತೆಯ ಮೇಲೆ ಹಕ್ಕು ಸಾಧಿಸುವ ಸಾಧ್ಯತೆಯಿದೆ. ಎಲ್ಲಾ ಮಹಾಯುತಿ ಪಾಲುದಾರರಾದ ಬಿಜೆಪಿ, ಶಿವಸೇನೆ (ಶಿಂಧೆ) ಮತ್ತು ಎನ್‌ಸಿಪಿ (ಅಜಿತ್ ಪವಾರ್) ಒಮತವನ್ನು ತಲುಪಿದ ನಂತರ ಖಾತೆಗಳ ಕುರಿತು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಲಾಗಿದೆ.

ಚುನಾವಣಾ ಫಲಿತಾಂಶಗಳು ಪ್ರಕಟವಾದ ಒಂದು ವಾರದ ನಂತರ, ಮಹಾರಾಷ್ಟ್ರದ ಮುಖ್ಯಮಂತ್ರಿ ಯಾರೆಂದು ಬಿಜೆಪಿ ಅಂತಿಮಗೊಳಿಸಿದೆ, ಶೀಘ್ರದಲ್ಲೇ ಘೋಷಣೆ ಬರಲಿದೆ ಎಂದು ವರದಿಗಳು ಹೇಳಿವೆ.

ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿಯ ಹೆಸರನ್ನು ಅಂತಿಮಗೊಳಿಸಲಾಗಿದೆ. ಆದರೆ ಪಕ್ಷದ ಹಿರಿಯ ನಾಯಕತ್ವದಿಂದ ದಢೀಕರಣಕ್ಕಾಗಿ ಕಾಯಲಾಗುತ್ತಿದೆ ಎಂದು ಬಿಜೆಪಿ ನಾಯಕ ರಾವ್ಸಾಹೇಬ್ ದಾನ್ವೆ ಹೇಳಿದ್ದಾರೆ.

ಮಹಾ ಕುಂಭಮೇಳ ನಡೆಯುವ ಪ್ರದೇಶವನ್ನು ಹೊಸ ಜಿಲ್ಲೆಯಾಗಿ ಘೋಷಿಸಿದ ಯೋಗಿ ಸರ್ಕಾರ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಸರ್ಕಾರವು ಪ್ರಯಾಗರಾಜ್‌ನ ಮಹಾ ಕುಂಭಮೇಳ ಪ್ರದೇಶವನ್ನು ಹೊಸ ಜಿಲ್ಲೆಯಾಗಿ ಘೋಷಿಸಿದೆ. ಹೀಗಾಗಿ ಇನ್ನು ಮುಂದೆ ಯುಪಿಯಲ್ಲಿ 75 ಅಲ್ಲ 76 ಜಿಲ್ಲೆಗಳಿರಲಿವೆ.

ಸರ್ಕಾರದ ಸೂಚನೆ ಮೇರೆಗೆ ಜಿಲ್ಲಾಧಿಕಾರಿ ಪ್ರಯಾಗ್‌ರಾಜ್ ರವೀಂದ್ರ ಕುಮಾರ್ ಮಂದರ್ ನಿನ್ನೆ ಸಂಜೆ ಅಧಿಸೂಚನೆ ಹೊರಡಿಸಿದ್ದಾರೆ. ಮಹಾಕುಂಭಕ್ಕೂ ಮುನ್ನ ಹೊಸ ಜಿಲ್ಲೆಯ ಅಧಿಸೂಚನೆಯನ್ನು ಹೊರಡಿಸುವ ಸಂಪ್ರದಾಯವಿದೆ. ಮಹಾ ಕುಂಭಮೇಳ ಜಿಲ್ಲೆಯು ಸಂಪೂರ್ಣ ಮೆರವಣಿಗೆ ಮತ್ತು ನಾಲ್ಕು ತಹಶೀಲ್‌ಗಳ ಸದರ್, ಸೊರಾನ್, ಫುಲ್‌ಪುರ್ ಮತ್ತು ಕರ್ಚನಾಗಳ 67 ಗ್ರಾಮಗಳನ್ನು ಒಳಗೊಂಡಿದೆ.

13 ಜನವರಿ ಮತ್ತು 26 ರ ನಡುವೆ ಮಹಾಕುಂಭ 2025 ಅನ್ನು ಆಯೋಜಿಸಲಾಗುತ್ತಿದೆ. ಜಾತ್ರೆಯ ನಂತರ ಕೆಲವು ದಿನಗಳವರೆಗೆ ಈ ಜಿಲ್ಲೆ ಅಸ್ತಿತ್ವದಲ್ಲಿರುತ್ತದೆ.

ಮಹಾಕುಂಭದ ಸಮಯದಲ್ಲಿ, ಸಂಪೂರ್ಣ

ಹೊಸ ನಗರವನ್ನು ಸ್ಥಾಪಿಸಲಾಗಿದೆ ಎಂಬುದು ಗಮನಾರ್ಹವಾಗಿದೆ. ಹಾಗಾಗಿ ಈ ಅವಧಿಯಲ್ಲಿ ಹೊಸ ಜಿಲ್ಲೆ ಘೋಷಣೆ ಮಾಡುವ ಸಂಪ್ರದಾಯವಿದೆ. ಪ್ರಯಾಗ್‌ರಾಜ್‌ನ ನಾಲ್ಕು ತಹಶೀಲ್‌ಗಳನ್ನು ಪ್ರತ್ಯೇಕಿಸಿ ಹೊಸ ಜಿಲ್ಲೆಯನ್ನು ರಚಿಸಲಾಗಿದೆ. ಕುಂಭಮೇಳವನ್ನು ಪ್ರತಿ 3 ವರ್ಷಗಳಿಗೊಮೆ, ಅರ್ಧ ಕುಂಭಮೇಳವನ್ನು ಪ್ರತಿ 6 ವರ್ಷಗಳಿಗೊಮೆ ಮತ್ತು ಮಹಾ ಕುಂಭಮೇಳವನ್ನು ಪ್ರತಿ 12 ವರ್ಷಗಳಿಗೊಮೆ ಆಯೋಜಿಸಲಾಗುತ್ತದೆ. 2013ರಲ್ಲಿ ಕೊನೆಯ ಮಹಾಕುಂಭಮೇಳವನ್ನು ಆಯೋಜಿಸಲಾಗಿತ್ತು. ಇದಾದ ಬಳಿಕ 2019ರಲ್ಲಿ ಅರ್ಧ ಕುಂಭಮೇಳವನ್ನು ಆಯೋಜಿಸಲಾಗಿತ್ತು.

ದುರ್ಬಲಗೊಂಡ ಫೆಂಗಲ್ ಚಂಡಮಾರುತ

ಚೆನ್ನೈ: ಫೆಂಗಲ್ ಚಂಡಮಾರುತ ದುರ್ಬಲಗೊಂಡಿದೆ. ಆದರೂ ಚಂಡಿ ಅಬ್ಬರಕ್ಕೆ ತಮಿಳುನಾಡಿನ ವಿಲ್ಲುಪುರಂ ತತ್ತರಿಸಿಹೋಗಿದೆ. ವಿಲ್ಲುಪುರಂ ಪಟ್ಟಣ, ಸಮೀಪದ ಪಟ್ಟಣಗಳು ಮತ್ತು ಹಳ್ಳಿಗಳು, ಮಳೆಯ ಬಿರುಸಿನ ತೀವ್ರತೆಯನ್ನು ಹೊತ್ತುಕೊಂಡಿವೆ ಮತ್ತು ಪ್ರವಾಹದ ನೀರು ತಗ್ಗು ಪ್ರದೇಶಗಳಿಗೆ ಹರಿದಿದೆ.

ವಿಲ್ಲುಪುರಂನ ವಿಕ್ರವಾಂಡಿ ಮತ್ತು ಮುಂಡಿಯಂಪಕ್ಕಂ ನಡುವಿನ ಸೇತುವೆಯ ಮೇಲೆ ನೀರು ಅಪಾಯದ ಮಟ್ಟಕ್ಕಿಂತ ಹೆಚ್ಚಾದ ಕಾರಣ, ದಕ್ಷಿಣ ರೈಲ್ವೆ ಇಂದು ಬೆಳಿಗ್ಗೆ ಆ ಪ್ರಮುಖ ಭಾಗದಲ್ಲಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದೆ.

ಇದು ಎಕ್ಸ್‌ಪ್ರೆಸ್ ಮತ್ತು ಸೂಪರ್‌ಫಾಸ್ಟ್ ರೈಲುಗಳನ್ನು ಒಳಗೊಂಡಂತೆ ರದ್ದತಿ, ತಿರುವು ಮತ್ತು ಅಲ್ಪಾವಧಿಯ ಸೇವೆಗಳ ಮುಕ್ತಾಯಕ್ಕೆ ಕಾರಣವಾಗಿದೆ. ಉತ್ತಮ ಸಂಪರ್ಕ ಹೊಂದಿರುವ ವಿಲ್ಲುಪುರಂ ಚೆನ್ನೈ, ರಾಜ್ಯದ ಇತರ ಉತ್ತರ ಭಾಗಗಳು ಮತ್ತು ತಮಿಳುನಾಡಿನ ಮಧ್ಯ ಮತ್ತು ದಕ್ಷಿಣ ಪ್ರದೇಶಗಳ ನಡುವಿನ ಸುಲಭ ಸಂಪರ್ಕವಾಗಿದೆ. ತೆನ್ಪೆನ್ನೈ ನದಿಯು ಉಕ್ಕಿ



ಹರಿಯುತ್ತಿದ್ದು, ಉತ್ತರ ಕರಾವಳಿ ಪಟ್ಟಣವಾದ ಕಡಲೂರು ಕೂಡ ತೀವ್ರವಾಗಿ ಹಾನಿಗೀಡಾಗಿದೆ.

ಪಶ್ಚಿಮ ಜಿಲ್ಲೆಗಳಾದ ಧರ್ಮಪುರಿ ಮತ್ತು ಕೃಷ್ಣಗಿರಿ ಜಿಲ್ಲೆಗಳು ಕೂಡ ಪ್ರವಾಹದಿಂದ ಮುಳುಗಿವೆ. ಕೃಷ್ಣಗಿರಿಯು ಕಳೆದ ಎರಡು ಮೂರು ದಶಕಗಳಲ್ಲಿ ಕಾಣದ ಪ್ರವಾಹಕ್ಕೆ ಸಾಕ್ಷಿಯಾಗಿದೆ ಮತ್ತು ಕಾರುಗಳು ಮತ್ತು ವ್ಯಾನ್‌ಗಳು ಸೇರಿದಂತೆ ಅನೇಕ ವಾಹನಗಳು ರಸ್ತೆಯಿಂದ ತಗ್ಗು ಪ್ರದೇಶಗಳಿಗೆ ಎಳೆದುಕೊಂಡು ಹೋಗಿ ಜನರನ್ನು ಬೆಚ್ಚಿಬೀಳಿಸಿದೆ. ಉತ್ತಂಗರೈಯಿಂದ ಕೃಷ್ಣಗಿರಿ ಮತ್ತು ತಿರುವಣ್ಣಾಮಲೈ ಮುಂತಾದ ಪಟ್ಟಣಗಳಿಗೆ ಭಾರೀ ಪ್ರಮಾಣದಲ್ಲಿ ನೀರು ತುಂಬಿ

ಉಪೇಂದ್ರ ನಟನೆಯ 'ಯುಐ' ವಾರ್ನರ್ ರಿಲೀಸ್

ಡಿಫರೆಂಟ್ ಗೆಟಪ್ ಮತ್ತು ಕಾನ್ಸೆಪ್ಟ್

ರಿಯಲ್ ಸ್ಟಾರ್ ಉಪೇಂದ್ರ ನಟಿಸಿ, ನಿರ್ದೇಶನ ಮಾಡಿರುವ 'ಯುಐ' ವಾರ್ನರ್ (ಟ್ರೈಲರ್) ರಿಲೀಸ್ ಆಗಿದೆ. ಉಪೇಂದ್ರ ಸಿನಿಮಾಗಾಗಿ ಎದುರು ನೋಡುತ್ತಿದ್ದ ಫ್ಯಾನ್ಸ್‌ಗೆ ಗುಡ್ ನ್ಯೂಸ್ ಸಿಕ್ಕಿದೆ. ಉಪ್ಪಿ ಟ್ರೈಲರ್‌ನಲ್ಲಿ ಡಿಫರೆಂಟ್ ಗೆಟಪ್ ಮತ್ತು ಕಾನ್ಸೆಪ್ಟ್‌ನಲ್ಲಿ ಮಿಂಚಿದ್ದಾರೆ. ಯುಗದಲ್ಲಿ ಮ್ಯಾಜಿಕ್, ಟ್ರೈಲರ್‌ನಲ್ಲಿ ಮಸ್ತ್ ಆಗಿ ಮೂಡಿ ಬಂದಿದೆ. ಪ್ರೇಕ್ಷಕರ ಬುದ್ಧಿವಂತಿಕೆಗೆ ಗಿಖ ವಾರ್ನರ್ (ಟ್ರೈಲರ್) ಸವಾಲು ಹಾಕುವಂತಿದೆ. ಹಸಿವಿಗಾಗಿ ಜನರ ಹೊಡೆದಾಟ, ರಕ್ತಪಾತ ಇದು ಟ್ರೈಲರ್‌ನಲ್ಲಿ ರೋಚಕವಾಗಿ ತೋರಿಸಲಾಗಿದೆ. ಜಾತಿ, ಅಧಿಕಾರ ಭಾರತಕ್ಕೆ ಮಾರಕವಾಗುತ್ತ ಎಂಬ ಜಿದ್ದಾ ಜಿದ್ದಿಯ ನಡುವೆ ಧಿಕ್ಕಾರಕ್ಕಿಂತ ಅಧಿಕಾರಕ್ಕೆ ಬೆಲೆ ಜಾಸ್ತಿ ಎಂದು ಖಡಕ್ ಆಗಿ ಉಪೇಂದ್ರ ಡೈಲಾಗ್ ಹೊಡೆದಿದ್ದಾರೆ. ಗನ್ ಹಿಡಿದು ಜನಗಳ ಕಡೆ ಶೂಟ್ ಮಾಡುತ್ತ ಖಡಕ್ ಲುಕ್‌ನಲ್ಲಿ ಉಪ್ಪಿ ಕಾಣಿಸಿಕೊಂಡಿದ್ದಾರೆ. ಈ ಮೂಲಕ ಗಿಖ ಸಿನಿಮಾ ಕಥೆಯ ಬಗ್ಗೆ ಫ್ಯಾನ್ಸ್‌ಗೆ ಕೌತುಕ ಮೂಡುವಂತೆ ಮಾಡಿದ್ದಾರೆ. ಇನ್ನೂ 2040 ಭವಿಷ್ಯದ ಅಸಲಿ ಕಥೆ ಹೇಳಲು 'ಯುಐ' ಸಿನಿಮಾ ಮೂಲಕ ಉಪೇಂದ್ರ ಸಜ್ಜಾಗಿದ್ದಾರೆ. ಡಿ.20ಕ್ಕೆ ರಿಲೀಸ್ ಆಗಲಿರುವ ಈ ಸಿನಿಮಾದಲ್ಲಿ ಉಪೇಂದ್ರಗೆ ಕೊಡಗಿನ ಕುವರಿ ರೀಷ್ಮಾ ನಾಣಯ್ಯ ಜೋಡಿಯಾಗಿದ್ದಾರೆ. ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್‌ಟೈನರ್ಸ್ ಮೂಲಕ ಮಹೋಹರ್ ನಾಯ್ಡು ಹಾಗೂ ಕೆ.ಪಿ ಶ್ರೀಕಾಂತ್ ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ.



'ಸಾಯಬೇಕು ಅಂದ್ರೆ ನೀನು ಸಾಯಿ'

'ಬ್ರಹ್ಮಗಂಟು' ಸೀರಿಯಲ್ ನಟಿ ಶೋಭಿತಾ ಡಿ.1ರಂದು ಹೈದರಾಬಾದ್‌ನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಸದಾ ಪಾಸಿಟಿವಿಟಿಯಿಂದ ಇರುವ ವ್ಯಕ್ತಿ ಸೂಸೈಡ್ ಮಾಡಿಕೊಂಡಿರೋದು ಅನೇಕರಿಗೆ ಶಾಕ್ ಆಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಹೈದರಾಬಾದ್‌ನ ಗಚ್ಚಿಬೌಲಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಇದೀಗ ಶೋಭಿತಾ ಸಾವಿಗೆ ಹೊಸ ಟ್ವಿಸ್ಟ್ ಸಿಕ್ಕಿದೆ. ಪೋಲಿಸರಿಗೆ ನಟಿ ಬರೆದ ಲೆಟರ್ ಸಿಕ್ಕಿದೆ.ಪತಿ ಜೊತೆ ಹೈದರಾಬಾದ್‌ನಲ್ಲಿ ಸೆಟಲ್ ಆಗಿದ್ದ ಶೋಭಿತಾ ಸಾಯುವ ಮುನ್ನ ಡೆತ್ ನೋಟ್ ಬರೆದಿಟ್ಟಿದ್ದಾರೆ. ಅದು ಪೊಲೀಸರ ಕೈಗೆ ಸಿಕ್ಕಿದೆ. ಅದರಲ್ಲಿ 'ನೀನು ಸಾಯಬಹುದು ಅಂದ್ರೆ ನೀನು ಸಾಯಿ' ಎಂದು ಬರೆಯಲಾಗಿದೆ. ಜೀವನದಲ್ಲಿ ಎಲ್ಲಾವೂ ಪರ್ಫೆಕ್ಟ್ ಆಗಿದೆ ಎಂದು ಬರೆಯಲಾಗಿದೆ. ಇದರ ಅರ್ಥಕ್ಕಾಗಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ನಟಿಯ ಮನೆಯ ನೆರೆ ಹೊರೆಯವರ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಮಾನಸಿಕ ಸಮಸ್ಯೆಯಿಂದ ಸೂಸೈಡ್ ಮಾಡಿಕೊಂಡಿರುವ ಬಗ್ಗೆಯೂ ವಿಚಾರಣೆ ನಡೆಸುತ್ತಿದ್ದಾರೆ. ಜೊತೆಗೆ ಪತಿಯೊಂದಿಗೆ ಭಿನ್ನಾಭಿಪ್ರಾಯ ಇತ್ತೇ ಎಂಬುದನ್ನು ಕೂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಮುಂದೆ ಪ್ರಕರಣದಲ್ಲಿ ಏನೆಲ್ಲಾ ತಿರುವು ಸಿಗಲಿದೆ ಕಾದುನೋಡಬೇಕಿದೆ. ಅಂದಹಾಗೆ, ಮ್ಯಾಟ್ರಿಮೋನಿ ವೆಬ್ ಸೈಟ್‌ನಲ್ಲಿ ನೋಡಿ 2023ರಲ್ಲಿ ಸುಧೀರ್ ರೆಡ್ಡಿರನ್ನು ಹಾಸನ ಮೂಲದ ಶೋಭಿತಾ ಮದುವೆಯಾಗಿದ್ದರು.

ಮಗಳ ಫಸ್ಟ್ ವಿಡಿಯೋ ಹಂಚಿಕೊಂಡು ಬರ್ತ್‌ಡೇ ಸೆಲೆಬ್ರೇಟ್ ಮಾಡಿದ ಯಶ್ ದಂಪತಿ

ಘಟನೆಯ ಹಿಂದಿನ ಸತ್ಯ

ಸ್ಟಾರ್ ನಟ ಯಶ್ ಮತ್ತು ರಾಧಿಕಾ ಪಂಡಿತ್ ಪುತ್ರಿಗೆ ಇಂದು (ಡಿ.2) 6ನೇ ವರ್ಷದ ಹುಟ್ಟುಹಬ್ಬದ ಸಂಭ್ರಮ. ಮಗಳು ಐರಾಳ ಕ್ಯೂಟ್ ವಿಡಿಯೋ ಶೇರ್ ಮಾಡಿ ಸ್ಪೆಷಲ್ ಆಗಿ ಯಶ್ ಜೋಡಿ ವಿಶ್ ಮಾಡಿದ್ದಾರೆ. ಚಿಕ್ಕ ಕಾಲ್ಬೆರಳುಗಳಿಂದ ಹಿಡಿದು ಚಿನ್ನದ ಹೃದಯದವರೆಗೆ, ಇದು ಶುದ್ಧ ಪ್ರೀತಿ, ಮತ್ತು ಸಂತೋಷ ಮತ್ತು ಕಿಡಿಗೇಡಿತನದ 6 ವರ್ಷಗಳು. ನಮ್ಮ ಐರಾಗೆ ಜನ್ಮ ದಿನದ ಶುಭಾಶಯಗಳು ಎಂದು ಯಶ್ ಮತ್ತು ರಾಧಿಕಾ ವಿಶೇಷವಾಗಿ ವಿಶ್ ಮಾಡಿದ್ದಾರೆ. ಐರಾಳ ತುಂಟತನದ ಚೆಂದದ ವಿಡಿಯೋ ಕೂಡ ಶೇರ್ ಮಾಡಿದ್ದಾರೆ. ಇನ್ನೂ ಯಶ್ ಅವರು 'ಟಾಕ್ಸಿಕ್' ಸಿನಿಮಾದ ಚಿತ್ರೀಕರಣಕ್ಕಾಗಿ ಮುಂಬೈನಲ್ಲಿ ಬೀಡು ಬಿಟ್ಟಿದ್ದಾರೆ. ನಟನ ಕುಟುಂಬ ಕೂಡ ಯಶ್ ಜೊತೆ ಮುಂಬೈನಲ್ಲಿದ್ದಾರೆ. ಮಗಳ ಹುಟ್ಟುಹಬ್ಬವನ್ನು ಸ್ಪೆಷಲ್ ಆಗಿ ಸೆಲೆಬ್ರೇಟ್ ಮಾಡಲಿದ್ದಾರೆ.

'ದಿ ಸಾಬರಮತಿ ರಿಪೋರ್ಟ್' ವೀಕ್ಷಿಸಲಿದ್ದಾರೆ ಮೋದಿ

ಪ್ರಧಾನಿ ನರೇಂದ್ರ ಮೋದಿ ಅವರಿಂದು ದೆಹಲಿಯ ಸಂಸತ್ ಸಂಕೀರ್ಣದಲ್ಲಿರುವ ಗ್ರಂಥಾಲಯದ ಬಾಲಯೋಗಿ ಆಡಿಟೋರಿಯಂ ಹಿಂದಿ ಚಲನಚಿತ್ರ ದಿ ಸಾಬರಮತಿ ರಿಪೋರ್ಟ್ ವೀಕ್ಷಿಸಲಿದ್ದಾರೆ. ಮೋದಿ ಅವರೊಂದಿಗೆ ಚಿತ್ರನಟ ವಿಕ್ರಾಂತ್ ಮಾಸ್ಸೆ, ಚಿತ್ರದ ನಿರ್ಮಾಪಕಿ ಏಕ್ತಾ ಕಪೂರ್ ಚಲನಚಿತ್ರವನ್ನು ವೀಕ್ಷಿಸಲಿದ್ದಾರೆ. 2002ರ ಫೆಬ್ರವರಿ 27ರಂದು ನಡೆದ ಗೋಧ್ರಾ ರೈಲು ದುರಂತವನ್ನಾಧರಿಸಿದ ಚಿತ್ರ ಇದಾಗಿದೆ. ವಿಕ್ರಾಂತ್ ಮಾಸ್ಸೆ, ರಿಧಿ ಡೋಗ್ರಾ ಮತ್ತು ರಾಶಿ ಖನ್ನಾ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. 2002ರ ಸಂದರ್ಭದಲ್ಲಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಆಗಿದ್ದರು. ಕಳೆದ ತಿಂಗಳಷ್ಟೇ ಮೋದಿ ಚಿತ್ರತಂಡವನ್ನು ಶ್ಲಾಘಿಸಿದ್ದರು. ಘಟನೆಯ ಹಿಂದಿನ ಸತ್ಯವನ್ನು ಬಹಿರಂಗಪಡಿಸಿದ್ದಕ್ಕಾಗಿ ಧನ್ಯವಾದಗಳು ಎಂದು ಹೊಗಳಿದ್ದರು. ಬಿಹಾರದ ಮುಜಾಫರ್‌ಪುರದಿಂದ ಗುಜರಾತ್‌ನ ಅಹಮದಾಬಾದ್‌ಗೆ ಹೊರಟಿದ್ದ ಸಾಬರಮತಿ ಎಕ್ಸ್‌ಪ್ರೆಸ್ ರೈಲು 2002ರ ಫೆ.27,ರ ಬೆಳಗ್ಗೆ ತನ್ನ ನಿಗದಿತ ಸಮಯಕ್ಕೆ ಗುಜರಾತ್‌ನ ಗೋಧ್ರಾ ರೈಲು ನಿಲ್ದಾಣಕ್ಕೆ ತೆರಳಿತ್ತು. ಇದರಲ್ಲಿ ಕರಸೇವಕರು, ಹಿಂದೂ ಸ್ವಯಂಸೇವಕರು ಅಯೋಧ್ಯೆಯಲ್ಲಿ ಧಾರ್ಮಿಕ ಸಭೆಯಲ್ಲಿ ಪಾಲ್ಗೊಂಡು ಹಿಂದಿರುಗುತ್ತಿದ್ದರು. ರೈಲಿಗೆ ಸುಮಾರು 2,000 ಜನರಿದ್ದ ಗುಂಪು ಕಲ್ಲು ತೂರಿ ನಾಲ್ಕು ಕೋಚ್‌ಗಳಿಗೆ ಬೆಂಕಿ ಹಚ್ಚಿತ್ತು. ಈ ದುರಂತದಲ್ಲಿ 27 ಮಹಿಳೆಯರು ಮತ್ತು 10 ಮಕ್ಕಳು ಸೇರಿದಂತೆ 59 ಜನರು ಸಾವನ್ನಪ್ಪಿದ್ದರು. ದಾಳಿಯಲ್ಲಿ 48 ಪ್ರಯಾಣಿಕರು ಗಾಯಗೊಂಡಿದ್ದರು. ಇದರಿಂದ ಆದ ಗಲಭೆ ಮೂರು ತಿಂಗಳವರೆಗೆ ಮುಂದುವರೆದಿತ್ತು. ಈ ಗಲಭೆಗೆ ಆಗಿನ ಸಿಎಂ ಆಗಿದ್ದ ಮೋದಿ ಕಾರಣ ಎಂಬ ಆರೋಪ ಕೇಳಿಬಂದಿತ್ತು.

ಬೋಲ್ಡ್ ಬ್ಯೂಟಿಯ ಪಾತ್ರ ದಲ್ಲಿ ಚಂದ್ರಿಕಾ ರವಿ

ಸೌತ್ ನ ಖ್ಯಾತ ನಟಿ, ಐಟಂ ಡಾನ್ಸರ್ ಸಿಲ್ಕ್ ಸ್ಮಿತಾ ಇಂದು (ಡಿ.2) ಬರ್ತ್‌ಡೇ ಹಿನ್ನೆಲೆಯಲ್ಲಿ ಸಂಸ್ಥೆ ಕಡೆಯಿಂದ ಹೊಸ ಚಿತ್ರದ ಘೋಷಣೆ

'ಸಿಲ್ಕ್ ಸ್ಮಿತಾ' ಬಯೋಪಿಕ್ ಅನೌನ್ಸ್

ಆಗಿದೆ. 'ಸಿಲ್ಕ್ ಸ್ಮಿತಾ- ಕ್ವೀನ್ ಆಫ್ ದಿ ಸೌತ್' ಎಂಬ ಶೀರ್ಷಿಕೆಯ ಸಿನಿಮಾ ಅನೌನ್ಸ್ ಮಾಡಿದ್ದಾರೆ. ಈ ಬಯೋಪಿಕ್‌ಗೆ ನಾಯಕಿ ಯಾರು, ಸಿಲ್ಕ್ ಸ್ಮಿತಾ ಅವರ ಪಾತ್ರವನ್ನು ತೆರೆಮೇಲೆ ತರುವವರು ಯಾರು ಎಂಬ ಬಗ್ಗೆಯೂ ಮಾಹಿತಿ ಹೊರಬಿದ್ದಿದೆ. ಚಂದ್ರಿಕಾ ರವಿ ತೆರೆಮೇಲೆ ಸ್ಮಿತಾ ಆಗಿ ಜೀವತುಂಬಲಿದ್ದಾರೆ. ಈ ಸಿನಿಮಾವನ್ನು ಜಯರಾಮ್ ಸಂಕರನ್ ನಿರ್ದೇಶನ ಮಾಡಲಿದ್ದು, ಎಸ್.ಬಿ ವಿಜಯ್ ಅಮೃತ್‌ರಾಜ್ ನಿರ್ಮಾಣ ಮಾಡಲಿದ್ದಾರೆ. 2025ರ ಆರಂಭದಲ್ಲಿ ಈ ಸಿನಿಮಾ ಸೆಟ್ಟೇರಲಿದೆ. ಸಿಲ್ಕ್ ಸ್ಮಿತಾ ಅವರ ಜನ್ಮದಿನದಂದು ಈ ವಿಶೇಷ ಘೋಷಣೆ ಮಾಡುವ ಮೂಲಕ, ವಿಶೇಷ ವೀಡಿಯೊವನ್ನು ಅನಾವರಣಗೊಳಿಸಿದ್ದಾರೆ.



ಅಮಾನ್ ಅಜೇಯ ಶತಕ; 339 ರನ್ ಚಚ್ಚಿದ ಟೀಂ ಇಂಡಿಯಾ

ಭಾರತದ ಅಂಡರ್-19 ತಂಡವು ಶಾರ್ಜಾದಲ್ಲಿ ನಡೆಯುತ್ತಿರುವ ಏಷ್ಯಾಕಪ್ ಪಂದ್ಯದಲ್ಲಿ ಜಪಾನ್ ತಂಡವನ್ನು ಎದುರಿಸುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಂ ಇಂಡಿಯಾ ಪರ ಮೊಹಮ್ಮದ್ ಅಮಾನ್ ಅಜೇಯ 122 ರನ್, ಆಯುಷ್ ಮ್ಹಾತ್ರೆ (54) ಮತ್ತು ಕೆ.ಪಿ. ಕಾರ್ತಿಕೇಯ (57) ಅವರ ಅರ್ಧಶತಕದ ನೆರವಿನಿಂದ 339 ರನ್‌ಗಳ ಸವಾಲಿನ ಮೊತ್ತವನ್ನು ಕಲೆಹಾಕಿದೆ. ಶಾರ್ಜಾ ಕ್ರಿಕೆಟ್ ಸ್ಟೇಡಿಯಂ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಅಂಡರ್-19 ಏಷ್ಯಾಕಪ್ 2024 ರ ಎಂಟನೇ ಪಂದ್ಯದಲ್ಲಿ ಟೀಂ ಇಂಡಿಯಾ, ಜಪಾನ್ ತಂಡವನ್ನು ಎದುರಿಸುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ ತಂಡ ಮೊಹಮ್ಮದ್ ಅಮಾನ್ ಅವರ ಅಜೇಯ ಶತಕದ ಬಲದಿಂದ ನಿಗದಿತ 50 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 339 ರನ್ ಕಲೆಹಾಕಿದೆ. ಈ ಪಂದ್ಯದಲ್ಲಿ ಅಮಾನ್ ಅಲ್ಲದೆ ವಸೈಕರ್ ಆಯುಷ್ ಮ್ಹಾತ್ರೆ ಮತ್ತು ಕೆಪಿ ಕಾರ್ತಿಕೇಯ ಅರ್ಧಶತಕದ ಇನ್ನಿಂಗ್ಸ್ ಆಡಿದರು. ಇವರ ಜೊತೆಗೆ ತಂಡದ ಇತರ ಬ್ಯಾಟ್ಸ್‌ಮನ್‌ಗಳು ನೀಡಿದ ಅಲ್ಪ ಕಾಣಿಕೆಯ ನೆರವಿನಿಂದ ತಂಡ 300 ರ ಗಡಿ ದಾಟಿತು.

ಈ ಪಂದ್ಯದಲ್ಲಿ ಜಪಾನ್ ಟಾಸ್ ಗೆದ್ದು ಭಾರತವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಅದರಂತೆ ಟೀಂ ಇಂಡಿಯಾ ಪರ ಮತ್ತೊಮ್ಮೆ ಆಯುಷ್ ಮ್ಹಾತ್ರೆ ಮತ್ತು ವೈಭವ್ ಸೂರ್ಯವಂಶಿ ಆರಂಭಿಕರಾಗಿ ಕಣಕ್ಕಿಳಿದಿದ್ದರು. ಪಾಕಿಸ್ತಾನ ವಿರುದ್ಧದ ಮೊದಲ ಪಂದ್ಯದಲ್ಲಿ ಉತ್ತಮ ಆರಂಭ ಒದಗಿಸಿಕೊಡುವಲ್ಲಿ ವಿಫಲರಾಗಿದ್ದ ಈ ಜೋಡಿ ಜಪಾನ್ ವಿರುದ್ಧ ಮೊದಲ ವಿಕೆಟ್‌ಗೆ 65 ರನ್‌ಗಳ ಜೊತೆಯಾಟ ನೀಡಿತು. ಆದರೆ ವೈಭವ್ ಸೂರ್ಯವಂಶಿಗೆ ಉತ್ತಮ ಆರಂಭದ ಲಾಭ ಪಡೆಯಲು ಸಾಧ್ಯವಾಗಲಿಲ್ಲ. ಪಾಕ್ ವಿರುದ್ಧ ಒಂದಂಕಿಗೆ ಸುಸ್ತಾಗಿದ್ದ ವೈಭವ್ ಸೂರ್ಯವಂಶಿ, ಜಪಾನ್ ವಿರುದ್ಧ 23 ರನ್ ಗಳಿಸಿ ಔಟಾದರು.

ಆಯುಷ್ ಮ್ಹಾತ್ರೆ ಕೂಡ ಕೆಲವೇ ಓವರ್‌ಗಳ ನಂತರ ವಿಕೆಟ್ ಒಪ್ಪಿಸಿದರಾದರೂ, 54 ರನ್‌ಗಳ ಅಮೋಘ ಇನ್ನಿಂಗ್ಸ್ ಆಡಿದರು. ಮೂರನೇ ಕ್ರಮಾಂಕದಲ್ಲಿ ಬಂದ ಆಂಡ್ರೆ ಸಿದ್ಧಾರ್ಥ್ 35 ರನ್‌ಗಳಿಗೆ ಪೆವಿಲಿಯನ್ ಸೇರಿಕೊಂಡರೆ, ಕೆಪಿ ಕಾರ್ತಿಕೇಯ 49 ಎಸೆತಗಳಲ್ಲಿ 57 ರನ್‌ಗಳ ಕಾಣಿಕೆ ನೀಡಿದರು. ಕೆಳಕ್ರಮಾಂಕದಲ್ಲಿ ಬಂದ ನಿಖಿಲ್ ಕುಮಾರ್ 17 ಎಸೆತಗಳಲ್ಲಿ 12 ರನ್ ಕಲೆಹಾಕಿದರು. ಒಂದು ಹಂತದಲ್ಲಿ ಭಾರತ 46 ಓವರ್ ಗಳ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 289 ರನ್ ಗಳಿಸಿತ್ತು.

ಅಮಾನ್ ಅಜೇಯ ಶತಕ

ನಂತರ ಹಾರ್ದಿಕ್ ರಾಜ್ ಮತ್ತು ಮೊಹಮ್ಮದ್ ಅಮಾನ್ ಕೊನೆಯ 4 ಓವರ್‌ಗಳಲ್ಲಿ 50 ರನ್‌ಗಳ ಅಜೇಯ ಜೊತೆಯಾಟ ನೀಡಿದರು. ಅಂತಿಮವಾಗಿ ಮೊಹಮ್ಮದ್ ಅಮಾನ್ 118 ಎಸೆತಗಳಲ್ಲಿ 7 ಬೌಂಡರಿಗಳ ನೆರವಿನಿಂದ ಅಜೇಯ 122 ರನ್ ಬಾರಿಸಿದರೆ, ಹಾರ್ದಿಕ್ ರಾಜ್ 12 ಎಸೆತಗಳಲ್ಲಿ 1 ಬೌಂಡರಿ ಹಾಗೂ 2 ಸಿಕ್ಸರ್ ನೆರವಿನಿಂದ 25 ರನ್ ಗಳಿಸಿದರು. ಜಪಾನ್ ಪರ ಕೀಫರ್ ಯಮಮೊಟೊ-ಲೇಕ್ ಮತ್ತು ಹ್ಯೂಗೋ ಕೆಲ್ಲಿ ತಲಾ 2 ವಿಕೆಟ್ ಪಡೆದರೆ, ಆರವ್ ತಿವಾರಿ ಮತ್ತು ಚಾರ್ಲ್ಸ್ ಹಿಂಜ್ ತಲಾ 1 ವಿಕೆಟ್ ಪಡೆದರು.

ಆಸೀಸ್ ತಂಡದೊಳಗೆ ಒಡಕು..!

ಪರ್ತ್‌ನಲ್ಲಿ ಭಾರತದ ವಿರುದ್ಧ ಆಸ್ಟ್ರೇಲಿಯಾದ ಸೋಲಿನ ನಂತರ ತಂಡದಲ್ಲಿ ಒಡಕು ಉಂಟಾಗಿದೆ ಎಂಬ ವದಂತಿಗಳಿಗೆ ಟ್ರಾವಿಸ್ ಹೆಡ್ ತಮ್ಮ ಹೇಳಿಕೆಯ ಮೂಲಕ ತೆರೆ ಎಳೆದಿದ್ದಾರೆ. ತಂಡದಲ್ಲಿ ಯಾವುದೇ ವಿವಾದವಿಲ್ಲ ಎಂದು ಹೇಳಿರುವ ಹೆಡ್, ಸೋಲಿನಿಂದ ಚೇತರಿಸಿಕೊಳ್ಳಲು ಹೊಸ ಮಾರ್ಗಗಳನ್ನು ಹುಡುಕುತ್ತಿರುವುದಾಗಿ ತಿಳಿಸಿದ್ದಾರೆ.

ಜೋಶ್ ಹೇಜಲ್‌ವುಡ್ ನೀಡಿದ ಹೇಳಿಕೆಯಿಂದ ಉಂಟಾದ ಗೊಂದಲವನ್ನು ಸ್ಪಷ್ಟಪಡಿಸಲು ಹೆಡ್ ಪ್ರಯತ್ನಿಸಿದ್ದಾರೆ. ಪರ್ತ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಭಾರತ ಅತ್ಯಂತ ಹೀನಾಯವಾಗಿ ಸೋಲಿಸಿತ್ತು.

ವೇಗದ ಮತ್ತು ಬೌನ್ಸಿ ಪಿಚ್‌ನಲ್ಲಿ ಕಾಂಗರೂ ತಂಡ ಭಾರತದ ಆಟಗಾರರಿಗೆ ಶರಣಾಯಿತು. ಆಸ್ಟ್ರೇಲಿಯ ಎಂದಿಗೂ ಸೋಲನುಭವಿಸದ ನೆಲದಲ್ಲಿ 295 ರನ್‌ಗಳ ಹೀನಾಯ ಸೋಲು ಕಂಡಿರುವುದು ಪ್ಯಾಟ್ ಕಮಿನ್ಸ್ ತಂಡ ಸೇರಿದಂತೆ ಆಸ್ಟ್ರೇಲಿಯಾದ ಮಾಜಿ ಆಟಗಾರರಿಗೆ ಆಘಾತ ನೀಡಿದೆ. ಏತನ್ಮಧ್ಯೆ, ಜೋಶ್ ಹೇಜಲ್‌ವುಡ್ ಪತ್ರಿಕಾ ಗೋಷ್ಠಿಯಲ್ಲಿ ತಮ್ಮ ಹೇಳಿಕೆಯೊಂದಿಗೆ ಹೊಸ ಬಾಂಬ್ ಸಿಡಿಸುವ ಮೂಲಕ ಆಸೀಸ್ ತಂಡದೊಳಗೆ ಬಿರುಕು ಮೂಡಿದೆ ಎಂಬ ಸಂದೇಹ ಹುಟ್ಟುಹಾಕಿದ್ದರು. ಆ ನಂತರ ಆಸ್ಟ್ರೇಲಿಯಾದ ಮಾಜಿ ವಿಕೆಟ್‌ಕೀಪರ್ ಆಡಮ್ ಗಿಲ್‌ಕ್ರಿಸ್ಟ್ ಕೂಡ ತಂಡದಲ್ಲಿ ಒಡಕು ಉಂಟಾಗಿದೆ ಎಂದು ಹೇಳುವ ಮೂಲಕ ಹೇಜಲ್‌ವುಡ್ ಹೇಳಿಕೆ ಮತ್ತಷ್ಟು ಪುಷ್ಟಿ ನೀಡಿದ್ದರು. ಇದೀಗ ಟ್ರಾವಿಸ್ ಹೆಡ್ ಈ ಹೇಳಿಕೆಯ ಬಗ್ಗೆ ಮೌನ ಮುರಿದಿದ್ದಾರೆ.

ಅಡಿಲೇಡ್‌ನಲ್ಲಿ ನಡೆಯಲಿರುವ ಪಿಂಕ್ ಬಾಲ್ ಟೆಸ್ಟ್‌ಗಾಗಿ ಭಾರತ ಹಾಗೂ ಆಸ್ಟ್ರೇಲಿಯಾ ಅಭ್ಯಾಸದಲ್ಲಿ ನಿರತವಾಗಿವೆ. ಈ ವೇಳೆ ಆಟಗಾರರ ನಡುವೆ ಮನಸ್ತಾಪ ಉಂಟಾಗಿದೆ ಎಂಬ ಸುದ್ದಿಯ ಬಗ್ಗೆ ಹೆಡ್ ಬಳಿ ಪ್ರಶ್ನಿಸಲಾಯಿತು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಹೆಡ್, ಡ್ರೆಸ್ಸಿಂಗ್ ರೂಮ್‌ನಲ್ಲಿ ಯಾವುದೇ ರೀತಿಯ ವಿವಾದ ಅಥವಾ ಭಿನ್ನಾಭಿಪ್ರಾಯವಿಲ್ಲ, ಇದೆಲ್ಲ ವದಂತಿಗಳಷ್ಟೆ. ಆಟಗಾರರ ನಡುವೆಯೂ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ಎಲ್ಲಾ ಆಟಗಾರರು ಪರಸ್ಪರ ಸಮಯ ಕಳೆಯುತ್ತಿದ್ದಾರೆ. ಕಳೆದ ವಾರ ನಮಗೆ ಕೆಟ್ಟ ವಾರವಾಗಿತ್ತು. ಹೀಗಾಗಿ ಈ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಪುಟಿದೇಳಲು ಹೊಸ ಮಾರ್ಗಗಳನ್ನು ಹುಡುಕುತ್ತಿದ್ದೇವೆ.

ಮೊಟ್ಟ ಮೊದಲ ವಿದೇಶಿ ಲೀಗ್‌ನ ಮೊದಲ ಪಂದ್ಯದಲ್ಲಿ ಶಿಖರ್ ಧವನ್ ಫೇಲ್

ಡಿಸೆಂಬರ್ 2 ರಂದು ನಡೆದ ಪಂದ್ಯದಲ್ಲಿ ಮೊದಲ ಬಾರಿಗೆ ಕಣಕ್ಕಿಳಿದಿದ್ದ ಶಿಖರ್ ಧವನ್, ನೇಪಾಳ ಪ್ರೀಮಿಯರ್ ಲೀಗ್‌ನಲ್ಲಿ ಕರ್ನಾಲಿ ಯಾಕ್ಸ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 14 ಎಸೆತಗಳನ್ನು ಎದುರಿಸಿದ್ದ ಶಿಖರ್ ಧವನ್ 14 ರನ್ ಗಳಿಸಿ ಔಟಾದರು. ಅಂದರೆ ತಮ್ಮ ಇನ್ನಿಂಗ್ಸ್‌ನಲ್ಲಿ ಧವನ್ 100ರ ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟ್ ಬೀಸಿದರು. ಕೆಲವೇ ದಿನಗಳ ಹಿಂದೆ ಭಾರತ ಕ್ರಿಕೆಟ್ ಸೇರಿದಂತೆ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಟೀಂ ಇಂಡಿಯಾದ ಮಾಜಿ ಆರಂಭಿಕ ಆಟಗಾರ ಶಿಖರ್ ಧವನ್, ಇದೀಗ ವಿದೇಶಿ ಲೀಗ್‌ಗಳಲ್ಲಿ ಬ್ಯಾಟ್ ಬೀಸಲು ಮುಂದಾಗಿದ್ದಾರೆ.

ಆ ಪ್ರಕಾರ ನವೆ